# ಕೊಡಗು ಸಂಗಾತಿ

ಫೆಬ್ರವರಿ 1 ರಿಂದ 15, 2001 | ಪಾಕ್ಷಿಕ ಪತ್ರಿಕೆ | (ಪೊನ್ನಿ 19-30 ಮಾಯಿ 1-3)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಯಲ್ಲಿ ಪ್ರಕಟಿತ

Reg. No. KA/SK/MYS-88 ಸಂಪುಟ : 5 ಸಂಚಿಕೆ : 3 ಪುಟಗಳು : 24 ಬೆಲೆ ರೂ. : 6-00




## ಪದ್ಮಶ್ರೀ ಪ್ರಶಸ್ತಿ ವಿಜೇತ ಪ್ರೊ॥ ದೇಜಗೌಡರು

ಲೇಖನ : ಒಳಪುಟಗಳಲ್ಲಿ

**ವಸುಂಧರೆ ಮುನಿದು ಭುಜ್‌ನಲ್ಲಿ ಸಂಭವಿಸಿದ ಘೋರ ಭೂಕಂಪದಲ್ಲಿ ಅಪಾರ ಪ್ರಾಣ ಹಾನಿ ಕಷ್ಟ ನಷ್ಟಕ್ಕೊಳಗಾಗಿರುವುದಕ್ಕೆ ಕೊಡಗು ಸಂಗಾತಿ ಬಳಗ ಮತ್ತು ಓದುಗರು ಕಂಬನಿ ಮಿಡಿಯುತ್ತದೆ.**

## ಜನಗಣತಿ : ಅರೆಭಾಷಿಕ (ಹಳೆಗನ್ನಡ) ಗೌಡ ಸಮುದಾಯಕ್ಕೊಂದು ಮನವಿ

ಅರೆಭಾಷಿಕ ಗೌಡ ಸಮುದಾಯಕ್ಕೆ ಅತೀ ಪುರಾತನ ಇತಿಹಾಸವಿದೆ. ಶಾಂತಿ, ಸೌಹಾರ್ದ, ಅಭಿವೃದ್ಧಿಗೆ ನೀಡಿದ ಕೊಡುಗೆಗಳ ಸಾಕ್ಷಿ ಇದೆ. ಅಪೂರ್ವ ಸಂಸ್ಕೃತಿ, ಸಂಪ್ರದಾಯಗಳ ಪರಂಪರೆ ಇದೆ. ಧಾರ್ಮಿಕ ಚೈತನ್ಯವಿದೆ. ಅತ್ಯುತ್ತಮ ಸಂಘಟನೆ ಇದೆ. ಆದರೆ ದುರಾದೃಷ್ಟವಶಾತ್ ಈ ದೇಶದಲ್ಲಿ ಅರೆಭಾಷಿಕ ಗೌಡ ಎಂಬ ಸಮುದಾಯ ಒಂದಿದೆ ಎಂಬುದಕ್ಕೆ ಯಾವ ಅಧಿಕೃತ ದಾಖಲೆಗಳೂ ಇಲ್ಲ !

ನಮ್ಮ ದೇಶದಲ್ಲಿ ಒಂದು ಸಮುದಾಯದ ಸ್ಥಿತಿಗತಿಗಳ ಮಾಹಿತಿಯನ್ನು ಸಂಪೂರ್ಣವಾಗಿ ಸಂಗ್ರಹಿಸಿ ಆ ಮೂಲಕ ಆ ಜನಾಂಗದ ಭವಿಷ್ಯವನ್ನು ನಿರ್ಮಿಸುವ ಕಾರ್ಯ 'ಜನಗಣತಿ'ಯ ಮೂಲಕ ಮಾತ್ರ ನಡೆಯುತ್ತದೆ. ಈ 'ಜನಗಣತಿ' 10 ವರ್ಷಕ್ಕೊಮ್ಮೆ ನಡೆಸಲಾಗುತ್ತಿದ್ದು ಇದುವರಗೆ ಈ ದೇಶದಲ್ಲಿ ನಡೆದ ಐದು ಜನಗಣತಿಗಳಲ್ಲೂ ಅರೆಭಾಷಿಕ ಸಮುದಾಯಕ್ಕೆ ತನ್ನ ಸ್ಥಿತಿಗತಿಗಳನ್ನು ಸರಕಾರಕ್ಕೆ ತಲುಪಿಸಲು ಮತ್ತು ಸರಕಾರದಿಂದ ಸಿಗಬಹುದಾದ ಸವಲತ್ತುಗಳನ್ನು ಪಡೆಯಲು ಸಾಧ್ಯವಾಗಲಿಲ್ಲ. ಜನಗಣತಿಯ ಮಹತ್ವನ್ನು ತಿಳಿದುಕೊಳ್ಳಲು ನಾವು ವಿಫಲರಾದದ್ದೇ ಇದಕ್ಕೆ ಮೂಲ ಕಾರಣ.

ಇದೇ ಬರುವ ಫೆಬ್ರವರಿ 9 ರಿಂದ 'ಜನಗಣತಿ 2001' ಪ್ರಾರಂಭವಾಗಲಿದೆ. ಈ ಮಹತ್ತರ ಸಂದರ್ಭದಲ್ಲಿ ಅರೆಭಾಷಿಕ ಜನಾಂಗ ಜಾಗೃತವಾಗಬೇಕು. ಈ ದೇಶದಲ್ಲಿ ಅರೆಭಾಷಿಕ ಎಂಬ ಜನಾಂಗ ಒಂದಿದೆ ಎಂಬುದನ್ನು ಮತ್ತು ಅವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಧಾರ್ಮಿಕ ಸ್ಥಿತಿಗತಿಗಳನ್ನು ಅಧಿಕೃತವಾಗಿ ಸರಕಾರಕ್ಕೆ ತಲುಪಿಸಬೇಕು. ಈ ಜನಗಣತಿಯ ಮೂಲಕ ಸಂಗ್ರಹಿಸಲ್ಪಟ್ಟ ಅಂಕಿ ಅಂಶಗಳ ಆಧಾರದ ಮೇಲೆ ನಮ್ಮ ಮುಂದಿನ ಪೀಳಿಗೆಯ ಭವಿಷ್ಯ ನಿರ್ಧರಿಸಲ್ಪಡುತ್ತದೆ ಎಂಬ ಸತ್ಯವನ್ನು ತಿಳಿಯಬೇಕು. ಪ್ರತಿ ನಮ್ಮ ಸಮಾಜಗಳಲ್ಲಿ ಈ ಬಗ್ಗೆ ಜನ ಸಾಮಾನ್ಯರಿಗೆ ಮಾಹಿತಿ ನೀಡಬೇಕು. ಅರೆಭಾಷೆ ಗೌಡ ಸಂಘಟನೆಗಳು, ಅರೆಭಾಷಿಕ ಯುವಕರು ಈ ಬಗ್ಗೆ ಜನಜಾಗೃತಿ ಮೂಡಿಸಬೇಕು.

ಜನಗಣತಿಯವರು ಮನೆಗೆ ಬಂದಾಗ ಅರೆಭಾಷಿಕರ ಕರ್ತವ್ಯ : ಅತ್ಯಂತ ಮಹತ್ತರ ಜವಾಬ್ದಾರಿಯನ್ನು ಹೊತ್ತ ಸಹಸ್ರಾರು ಜನಗಣತಿಯ ಅಧಿಕಾರಿಗಳು ಈ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಲು ಹಗಲಿರುಳು ದುಡಿಯುತ್ತಿದ್ದಾರೆ. ಅವರು ಮಾಡುತ್ತಿರುವ ಈ ಅಪೂರ್ವ ಕಾರ್ಯಕ್ಕೆ ನಮ್ಮ ಬೆಂಬಲ ಹಾಗೂ ಸಹಕಾರ ನೀಡುವುದು ನಮ್ಮೆಲ್ಲರ ಕರ್ತವ್ಯ. ಅವರು ಮನೆಗೆ ಬಂದಾಗ ಪ್ರೀತಿಪೂರ್ವಕ ಸ್ವಾಗತಿಸಬೇಕು. ಸೌಜನ್ಯದಿಂದ ವರ್ತಿಸಬೇಕು. ಅವರು ಕೇಳುವ 23 ಪ್ರಶ್ನೆಗಳಿಗೆ ಕಿಂಚಿತ್ತೂ ಸಂಕೋಚವಿಲ್ಲದೆ ಮತ್ತು ಅತಿಶಯೋಕ್ತಿಯೂ ಇಲ್ಲದೆ ಸಮರ್ಪಕವಾದ ಮತ್ತು ಸತ್ಯವಾದ ಉತ್ತರಗಳನ್ನು ನೀಡಬೇಕು. ಪ್ರತಿಷ್ಠೆಗಾಗಿ ಖಂಡಿತವಾಗಿಯೂ ಸುಳ್ಳನ್ನು ಹೇಳಬಾರದು. ನಿಮ್ಮ ಎಲ್ಲಾ ಉತ್ತರಗಳನ್ನು ಖಂಡಿತವಾಗಿಯೂ ಗೌಪ್ಯವಾಗಿಡಲಾಗುವುದು. ಪುರುಷರು ಮನೆಯಲ್ಲಿ ಇರುವುದಿಲ್ಲ ಎಂದಾಗಿದ್ದರೆ ಮನೆಯ ಮಹಿಳೆಯರಿಗೆ ಈಬಗ್ಗೆ ತಿಳಿಸಿ ಹೇಳಿರಬೇಕು.

ಜನಗಣತಿಯ ಅಧಿಕಾರಿಗಳು ಕೇಳುವ 23 ಪ್ರಶ್ನೆಗಳಲ್ಲಿ ಅರೆಭಾಷಿಕರ ಪಾಲಿಗೆ ಸಂಖ್ಯೆ (7) ಮತ್ತು (10) ಅತ್ಯಂತ ಮುಖ್ಯವಾದದ್ದು. ಪ್ರಶ್ನೆ (7) ನಿಮ್ಮ ಧರ್ಮ ಯಾವುದು? ಉತ್ತರ 'ಹಿಂದೂ' ಎಂದಾಗಿರಬೇಕು. ಅಂತೆಯೇ ಪ್ರಶ್ನೆ 10ರಲ್ಲಿ ನಿಮ್ಮ ಮಾತೃಭಾಷೆ ಯಾವುದು? ಎಂದು ಕೇಳಿದಾಗ, ನಮ್ಮ ಮಾತೃಭಾಷೆ ಅರೆಭಾಷೆ ಎಂದು ಹೇಳಬೇಕು. ಜನಗಣತಿ ಅಧಿಕಾರಿಗಳು 'ಅರೆಭಾಷೆ' ಎಂದು ನಮೂದಿಸಿಕೊಂಡದ್ದನ್ನು ದೃಢೀಕರಿಸಿಕೊಳ್ಳಬೇಕು. ಈ ಬಗ್ಗೆ ನಿಮಗೆ ಯಾರಾದರೂ ಅಡಚಣೆ ಉಂಟು ಮಾಡಿದರೆ ಅಧ್ಯಕ್ಷರು ಮತ್ತು ಕಾರ್ಯಕಾರಿ ಮಂಡಳಿ, ಕೊಡಗು ಗೌಡ ಸಮಾಜ (ರಿ), ಮಡಿಕೇರಿ, ದೂರವಾಣಿ : 958272 / 29906, 958274 / 58361, 58441 ಇಲ್ಲಿಗೆ ತಿಳಿಸತಕ್ಕದ್ದು.

ಪ್ರಕಟಣೆ : **ಕೊಡಗು ಸಂಗಾತಿ**


### ಮೈಸೂರು ದರದಲಿ ಮಾರಾಟ : ಗ್ರಾಹಕರಿಗೆ ಸುವರ್ಣ ಅವಕಾಶ

## ಶ್ರೀ ಕುಮಾರಸ್ವಾಮಿ ಕೃಪ ಟ್ರೇಡರ್ಸ್

ಭಾರತಿ ಕಾಂಪ್ಲೆಕ್ಸ್, ಮೈನ್ ರೋಡ್, ಗೋಣಿಕೊಪ್ಪ - **571 213**

*ಡೀಲರ್ಸ್ ಇನ್:* ಪ್ಲೈವುಡ್, ಹಾರ್ಡ್ ಬೋರ್ಡ್, ಬ್ಲಾಕ್ ಬೋರ್ಡ್, ಡೆಕರೆ ಟ್ಯೂವ್ (ಸೈನ್ ಮೈಕಾ) ಲ್ಯಾಮಿನೇಟೆವ್ಡ್ ಸೀಟ್ಸ್, ಸಿಂಥೆಟಿಕ್ ರೇಸಿನ್, ಅಡೆಸಿವ್, ಅಲ್ಯೂಮಿನಿಯಂ ಚಾನೆಲ್ಸ್ ಮತ್ತು ಫರ್ನಿಚರ್ ಪಿಟ್ಟಿಂಗ್ ಇತ್ಯಾದಿಗಳು.

"ಒಮ್ಮೆ ಭೇಟಿ ನೀಡಲು ಮರೆಯದಿರಿ. ಗ್ರಾಹಕರ ತೃಪ್ತಿಯೇ ನಮ್ಮ ಸಂತೃಪ್ತಿ"

ನಿಮ್ಮ ಸೇವೆಯಲ್ಲಿ ನಾವು ಸದಾ ಸಿದ್ಧ.

**ತೆಕ್ಕಡೆ ಪಿ. ಕಾಶಿ**
ಗೋಣಿಕೊಪ್ಪ
ದೂರವಾಣಿ : ಮನೆ : **48194**, ಶಾಪ್ : **48422**

## 2001, ಫೆಬ್ರವರಿ 1 ರಿಂದ 15ರ ತನಕ

## ಒಳನೋಟ


| | ಲೇಖಕರು | ಪುಟಗಳು |
|---|---|---|
| **ಕನ್ನಡ ವಿಭಾಗ** | | |
| ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಸೌಲಭ್ಯ | - ಸಂಪಾದಕೀಯ | 02 |
| ಕೊಡಗು ಪ್ರತ್ಯೇಕತೆ ವಿರುದ್ಧ ಜಿ. ಪಂ. ನಿರ್ಣಯ ಸಮರ್ಥನೀಯವಾಗಿದೆ | - ಸಂಗಾತಿ | 02 |
| ಪ್ರೊ|| ದೇಜಗೌ ಅವರಿಗೆ ಪದ್ಮಶ್ರೀ ಪ್ರಶಸ್ತಿ | - ಸಂಗಾತಿ | 03 |
| ಕವನ : ಓ ಗೆಳತಿ ಬಾಳ ಸಂಗಾತಿ | - ತುಂತಜೆ ಕೃತಿಕುಮಾರ್ ಚೆಟ್ಟಪ್ಪ | 03 |
| ವಿಶಿಷ್ಟ ವ್ಯಕ್ತಿತ್ವದ ಡಾ. ದೇ. ಜ. ಗೌ. ರ ವ್ಯಕ್ತಿ ಪರಿಚಯ | - ಪಿ. ಆರ್. ತಿಪ್ಪೇಸ್ವಾಮಿ | 04 |
| ಪಿಯುಸಿವರೆಗೆ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ | - ಸಂಗಾತಿ | 05 |
| ಅಪರೂಪದ ಮೂರು ಶಿಲಾಶಾಸನಗಳ ಪತ್ತೆ | - ಎಂ. ಜಿ. ಶೇಟ್ | 06 |
| ಬಸಳೆ | - ಸಂಗಾತಿ | 07 |
| ಹಕ್ಕಿಗಂಡಿ | - ಬಿ. ಆರ್. ಜೋಯಪ್ಪ | 08 |
| ಸಂಗಾತಿ ಭವಿಷ್ಯ | - ಜ್ಯೋತಿಷ್ ಗಿರೀಶ್ ಕುಮಾರ್ | 10 |
| ಜನವರಿ 26 ರ ಮಹತ್ವಗಳು | - ಆಜಡ್ಕ ರಾಣಿ ಬಾಲಕೃಷ್ಣ | 10 |
| ಕ್ಷಣ ಕಾಲದ ಮರಣ | - ಡಾ|| ಪ್ರವೀಣ ಯನ್. ಎಸ್. | 11 |
| ಕವನ : ಇರ್ಪು | - ಮೂಡಗದ್ದೆ ಕೃಪಾ ಈರಪ್ಪ | 11 |
| **ಅರೆಭಾಷಿಕ ವಿಭಾಗ** | | |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 26 | - ಶಂಕರನ ಬಸಪ್ಪ | 12 |
| "ಹದಿಹರೆಯದಲ್ಲೇ ಹಲ್ಲ್‌ಗಳ ಸಮಸ್ಯೆ" | - ಅಣ್ಣೆಚೀರಾ ಭಾರತೀ ಸೋಮಣ್ಣ | 14 |
| ನುಡಿ ಮುತ್ತುಗ | - ಕೊಳಂಬೆ ಮಮತಾ ಲಕ್ಷ್ಮಣ | 14 |
| "ಕೊರೆತ" | - ಕಾನಡ್ಕ ಹನೀಶ್ ಅಪ್ಪಾಜಿ | 15 |
| ಕುಞಿಪ್ಪನ ವಿಧ್ಯಾಭ್ಯಾಸ | - ಆಜಡ್ಕ ರಾಣಿ ಬಾಲಕೃಷ್ಣ | 17 |
| ಮಿಲ್ಟ್ರಿ ಮೈದ | - ಕೊರಂಬಡಕ ಹೇಮ ಕುಶಾಲಪ್ಪ | 18 |
| ಬಳ್ಳಿಗೆ ಹೋಲ್ಸುದು ಬ್ಯಾಡ | - ಕುಂಜಿಲನ ಆರ್. ರಾಜ | 19 |
| ಕವನ : ನಿಂಗಾಗಿ | - ಯಾಲದಾಳು ಚಂದ್ರಕಲಾ | 19 |
| ಸಂಗಾತಿ ಪದಬಂಧ — ೧. 'ಸಿಂಚನ' | - ಅಚ್ಚಲ್ಪಾಡಿ ಕವಿತ ಬೋಜಪ್ಪ | 20 |



| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | ಕೊಡಗು ಸಂಗಾತಿ, 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : 0821/516771 |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : 08272/28047 |
| ಚಿಹ್ನೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ | ಚೆರಿಯುಮನೆ ರಮೇಶ್, C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/29620 |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಅಮ್ಮಾಜೀರ ಪೊನ್ನಪ್ಪ, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04, ಫೋನ್ :080/6342822 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,ಫೋನ್ : 080/6500946 |

ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 6 ರೂ., ಅರ್ಧ ವಾರ್ಷಿಕ -75 ರೂ., ವಾರ್ಷಿಕ ಚಂದಾ - 150 ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಸೌಲಭ್ಯ

ಕರ್ನಾಟಕ ಸರ್ಕಾರದ ಮುಖಾಂತರ ಗ್ರಾಮ ಪಂಚಾಯಿತಿ ತಾಲೋಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳ ಮುಖಾಂತರ ಕುಡಿಯುವ ನೀರಿನ ಸೌಲಭ್ಯವನ್ನು ಹತ್ತಿರದ ನದಿ ತೋಡು ಯಾ ಕೆರೆಗಳಿಂದ ಸರಬರಾಜು ಮಾಡುವ ಏರ್ಪಾಡುಗಳು ನಿಜವಾಗಿಯೂ ಶ್ಲಾಘನೀಯವಾಗಿದೆ. ಆದರೆ ಈ ನೀರಿನ ಸೌಲಭ್ಯ ನೇರವಾಗಿ ಫಲಾನುಭವಿಗಳ ಮನೆ ಯಾ ವಠಾರಕ್ಕೆ ಹೋದರೆ ಪ್ರಯೋಜನವಿಲ್ಲ. ಇದನ್ನು ಶುದ್ಧೀಕರಣ ಮಾಡಿಯೇ ಫಲಾನುಭವಿಗಳಿಗೆ ವಿತರಣೆ ಮಾಡುವ ಏರ್ಪಾಡು ಆಗಬೇಕು ಇಲ್ಲದಿದ್ದರೆ ನದಿ, ತೋಡು ಯಾ ಕೆರೆಯ ಕೊಳೆ ನೀರು ನೇರವಾಗಿ ಫಲಾನುಭವಿಗಳಿಗೆ ಹೋಗಿ ಆರೋಗ್ಯಕರವಾದ ನೀರಿನ ಸರಬರಾಜು ಆಗದೆ ಇಲ್ಲದ ರೋಗಗಳ ಉತ್ಪನ್ನಕ್ಕೆ ಕಾರಣವಾದೀತೆಂದು ಸಂಗಾತಿಯ ಸಂದೇಹ.

---

# ಕೊಡಗು ಪ್ರತ್ಯೇಕತೆ ವಿರುದ್ಧ ಜಿ. ಪಂ. ನಿರ್ಣಯ ಸಮರ್ಥನೀಯವಾಗಿದೆ

### ಜೆ. ಎ. ಕರುಂಬಯ್ಯ ಹೇಳಿಕೆಗೆ ಚಂದ್ರಕಲಾ ಪ್ರತಿಕ್ರಿಯೆ

ಕೊಡಗು ಪ್ರತ್ಯೇಕತೆಗಾಗಿ ಕೆಲವು ಸಂಘಟನೆಗಳಿಂದ ಹೋರಾಟ ನಡೆಯುತ್ತಿರುವ ಹಿನ್ನೆಲೆಯಲ್ಲಿ, ಜಿಲ್ಲೆಯಲ್ಲಿ ಅಶಾಂತಿಗೆ ಅವಕಾಶವಾಗದಂತೆ ತಾ. 3ರಂದು ನಡೆದ ಜಿಲ್ಲಾ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ, ಕೊಡಗು ಪ್ರತ್ಯೇಕತಾ ಹೋರಾಟದ ವಿರುದ್ಧ ನಿರ್ಣಯವನ್ನು ಅಂಗೀಕರಿಸಿರುವದು ಸಮರ್ಥನೀಯವಾಗಿದೆಯೆಂದು, ಜಿ. ಪಂ. ಅಧ್ಯಕ್ಷೆ ಕೆ. ಪಿ. ಚಂದ್ರಕಲಾ ಅವರು ಪತ್ರಿಕಾ ಹೇಳಿಕೆಯೊಂದರಲ್ಲಿ ಸಮರ್ಥಿಸಿದ್ದಾರೆ.

ಇತ್ತೀಚೆಗೆ ಜಿಲ್ಲಾ ಪರಿಷತ್‌ನ ಮಾಜಿ ಅಧ್ಯಕ್ಷ ಜೆ. ಎ. ಕರುಂಬಯ್ಯ ಅವರು, ಕೊಡಗು ಪ್ರತ್ಯೇಕತೆಯ ವಿರುದ್ಧ ಕೈಗೊಂಡಿರುವ ನಿರ್ಣಯವು ಜಿ. ಪಂ. ವ್ಯಾಪ್ತಿ ಮೀರಿದ್ದಾಗಿದೆ ಎಂದು ಹೇಳಿಕೆ ನೀಡಿರುವದು ಬಾಲಿಶವಾದುದೆಂದು ಚಂದ್ರಕಲಾ ಟೀಕಿಸಿದ್ದಾರೆ.

ಈ ಹಿಂದೆ ಕರುಂಬಯ್ಯ ಅವರು ಜಿಲ್ಲಾ ಪರಿಷತ್ ಅಧ್ಯಕ್ಷರಾಗಿದ್ದ ದಿನಗಳಲ್ಲಿ ಕೊಡಗು ಸಾಕಷ್ಟು ಮಟ್ಟಿಗೆ ಅಭಿವೃದ್ಧಿ ಕಂಡಿದೆ ಎಂಬ ಭಾವನೆ ಜನತೆಯಲ್ಲಿದ್ದರೂ, ಸ್ವತಃ ಕರುಂಬಯ್ಯ ಅವರು ಕೊಡಗು ಪ್ರತ್ಯೇಕತಾ ಹೋರಾಟದಿಂದ ಜಿಲ್ಲೆಗೆ ಹೆಚ್ಚಿನ ಹಣ ಬಿಡುಗಡೆಯೊಂದಿಗೆ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆಯೆಂಬ ಹೇಳಿಕೆ ನೀಡಿ, ತಮ್ಮ ಅವಧಿಯ ಸಾಧನೆಯನ್ನು ಅಲ್ಲಗಳೆದಂತಾಗಿದೆಯೆಂದು ಅವರು ಅಣಕವಾಡಿದ್ದಾರೆ.

ಸಿಎನ್‌ಸಿಯ ಹೋರಾಟವನ್ನು ಸಮರ್ಥಿಸಿರುವ ಕರುಂಬಯ್ಯ ಅವರು, ಕೊಡಗಿನ ವೀರಸೇನಾನಿಗಳಾದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಜನರಲ್ ತಿಮ್ಮಯ್ಯ, ಮಾಜಿ ಮುಖ್ಯಮಂತ್ರಿ ದಿವಂಗತ ಗುಂಡೂರಾವ್, ಚೆಪ್ಪುಡಿರ ಪೂಣಚ್ಚ ಅಂತಹವರಿಗೆ ಅಪಮಾನ ಮಾಡಿದಂತಾಗಿದೆ ಎಂದು ಚಂದ್ರಕಲಾ ಅಭಿಪ್ರಾಯಪಟ್ಟಿದ್ದಾರೆ.

ಕೊಡಗು ಪ್ರತ್ಯೇಕತೆ ವಿರುದ್ಧ ಹಿಂದಿನ ಮಡಿಕೇರಿ ತಾಲೂಕು ಪಂಚಾಯಿತಿ ಸಭೆಯು ಖಂಡನಾ ನಿರ್ಣಯ ಕೈಗೊಂಡಿದ್ದನ್ನು ಜೆ. ಎ. ಕರುಂಬಯ್ಯ ಅವರು ಅರಿತುಕೊಂಡಿಲ್ಲ ಎಂದು ನೆನಪಿಸಿರುವ ಕೆ. ಪಿ. ಚಂದ್ರಕಲಾ ಅವರು, ಜಿ. ಪಂ. ನಿರ್ಣಯದ ವಿರುದ್ಧ ಪೂರ್ವಾಗ್ರಹ ಪೀಡಿತರಾಗಿ ವರ್ತಿಸಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸ್ವತಃ ಜಿ. ಪ. ಅಧ್ಯಕ್ಷರಾಗಿದ್ದ ಕರುಂಬಯ್ಯ ಅವರ ಅಧಿಕಾರಾವಧಿಯಲ್ಲಿ ಅಂದಿನ ಜಿಲ್ಲಾಧಿಕಾರಿ ಭಾಸ್ಕರ್ ಅವರೊಂದಿಗೆ ಸಂಘರ್ಷದ ಹಾದಿಯಲ್ಲಿ ಸಾಗಿದ್ದರೂ, ಪ್ರಸಕ್ತ ಆಡಳಿತ ವ್ಯವಸ್ಥೆಯೊಂದಿಗೆ ಜಿಲ್ಲಾ ಪಂಚಾಯಿತಿ ಹೊಂದಾಣಿಕೆಯಲ್ಲಿ ಮುಂದುವರಿಯಬೇಕೆಂದು ನೀಡಿರುವ ಸಲಹೆಯು "ಆರು ಹೆತ್ತವಳಿಗೆ ಮೂರು ಹೆತ್ತವಳು ಬುದ್ಧಿ ಹೇಳಿದಂತಾಗಿದೆ" ಎಂದು ವ್ಯಂಗ್ಯವಾಡಿದ್ದಾರೆ.

ಜಿಲ್ಲಾ ಪರಿಷತ್‌ನ ಐದು ವರ್ಷಗಳ ಅವಧಿಯಲ್ಲಿ ಅಧ್ಯಕ್ಷರಾಗಿದ್ದು, ಅನಂತರದ ಮೂವರು ಅಧ್ಯಕ್ಷರುಗಳನ್ನು ಕಂಡ ಜಿಲ್ಲಾ ಪಂಚಾಯಿತಿ ಆಡಳಿತದ ಬಗ್ಗೆಯೂ ಚಕಾರ ಎತ್ತದ ಕರುಂಬಯ್ಯ ಅವರು, ಇದೀಗ ಕೇವಲ ಆರು ತಿಂಗಳ ಅಧಿಕಾರಾವಧಿಯ ಜಿ. ಪಂ. ಆಡಳಿತದಲ್ಲಿ ತಾನು ಶ್ವೇತ ಪತ್ರ ಹೊರಡಿಸುವಂತೆ ಕೇಳಿರುವದು ಅವರ ಅಪ್ರಬುದ್ಧ ರಾಜಕಾರಣಕ್ಕೆ ಸಾಕ್ಷಿಯಾಗಿದೆಯೆಂದು ಚಂದ್ರಕಲಾ ವಿಶ್ಲೇಷಿಸಿದ್ದಾರೆ.

ಅಲ್ಲದೆ, ಜಿಲ್ಲಾ ಪಂಚಾಯಿತಿ ಕೈಗೊಂಡಿರುವ ನಿರ್ಣಯವನ್ನು ಜಿ.ಪಂ. ಕಾರ್ಯನಿರ್ವಹಣಾಧಿಕಾರಿ ಅವರು ತಡೆಹಿಡಿಯಬಹುದಿತ್ತು ಎಂದು ಹೇಳಿಕೆ ನೀಡಿರುವ ಕರುಂಬಯ್ಯ ಅವರಿಗೆ ಪಂಚಾಯಿತಿ ಆಡಳಿತ ವ್ಯವಸ್ಥೆಯ ಬಗ್ಗೆ ಪರಿಪೂರ್ಣ ಮಾಹಿತಿ ತಿಳಿದಿಲ್ಲವೇ ಎಂದು ಪ್ರಶ್ನಿಸಿರುವ ಚಂದ್ರಕಲಾ ಅವರು, ಅಸಂಬದ್ಧ ಟೀಕೆ ಮಾಡುವದು ಕರುಂಬಯ್ಯ ಅವರ ವ್ಯಕ್ತಿತ್ವಕ್ಕೆ ತಕ್ಕುದಲ್ಲ ಎಂಬುದಾಗಿ ಪ್ರತಿಕ್ರಿಯಿಸಿದ್ದಾರೆ.

— ಸಂಗಾತಿ

---

**ಗಾಳಿ, ಮಳೆ ಬಂದ ಹಾಗೆ ಕೊಡೆ (ಛತ್ರಿ) ಹಿಡಿಯಬೇಕು.**

# ಪ್ರೊ|| ದೇಜಗೌ ಅವರಿಗೆ ಪದ್ಮಶ್ರೀ ಪ್ರಶಸ್ತಿ

ಗಣರಾಜ್ಯೋತ್ಸವದ ಸುಸಂದರ್ಭದಲ್ಲಿ ತಮಗೆ ದೊರೆತಿರುವ 'ಪದ್ಮಶ್ರೀ' ಪ್ರಶಸ್ತಿ ಕನ್ನಡಕ್ಕೆ ಸಂದ ಗೌರವ' ಎಂದು ಪದ್ಮಶ್ರೀ ಪ್ರಶಸ್ತಿ ವಿಜೇತ ಮೈಸೂರು ವಿಶ್ವ ವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ದೇ. ಜವರೇಗೌಡರು ತಮ್ಮ ಹರ್ಷ ವ್ಯಕ್ತಪಡಿಸಿದ್ದಾರೆ.

'ಪದ್ಮಶ್ರೀ' ಪ್ರಶಸ್ತಿ ವಿಜೇತ ದೇಜಗೌ ರವರನ್ನು ವಿಜಯನಗರದ ಶ್ರೀ ವಿವೇಕಾನಂದ ಸಂಯುಕ್ತ ಪದವಿಪೂರ್ವ ಕಾಲೇಜಿನ ಶ್ರೀ ಕುವೆಂಪು ಸ್ಮಾರಕೋದ್ಯಾನದಲ್ಲಿ ಈ ವಿಷಯವನ್ನು ತಮ್ಮಲ್ಲಿ ಹಂಚಿಕೊಳ್ಳುತ್ತ ಅವರು ಈ ಕೆಳಗಿನಂತೆ ಪ್ರತಿಕ್ರಿಯಿಸಿದರು.

'ವ್ಯಕ್ತಿ ಸಮಾಜಕ್ಕೆ ಪ್ರಾಮಾಣಿಕ ಕೆಲಸ ಮಾಡಿದ್ದರೆ ತಕ್ಕ ಪ್ರತಿಫಲ ದೊರೆಯುತ್ತದೆ ಎಂಬುದಕ್ಕೆ ತಮಗೆ ದೊರೆತ ಪ್ರಶಸ್ತಿಯೇ ಸಾಕ್ಷಿಯಾಗಿದೆ. ಈ ಪ್ರಶಸ್ತಿ ನನಗೆ ದೊರೆತಿದೆ ಎಂಬುದಕ್ಕಿಂತ ಕನ್ನಡಕ್ಕೆ ದೊರೆತಿದೆ ಎಂದೇ ಹೇಳಲು ಇಷ್ಟಪಡುತ್ತೇನೆ ಎಂದರು.

ನನ್ನ ಗುರು ಕುವೆಂಪು ಅವರು ಹೇಳುವಂತೆ ಕನ್ನಡಕ್ಕೆ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ ಎಂಬ ಮಾತು ನನ್ನ ಜೀವನಕ್ಕೆ ಸಂಬಂಧಿಸಿದಂತೆ ನಿಜವಾಗಿದೆ ಎಂದು ದೇ. ಜವರೇಗೌಡರು ಹೇಳಿದರು.

ನನಗೆ ಶ್ರಮದಲ್ಲಿ ನಿಜವಾದ ನಂಬಿಕೆ ಇದೆ. ಒಳ್ಳೆಯ ಮನಸ್ಸಿನಿಂದ ಕಾರ್ಯಕ್ರಮದಲ್ಲಿ ತೊಡಗಿದ್ದರೆ ದೇಶ, ಜನತೆ ಹಾಗೂ ದುಡಿಯುವ ಕ್ಷೇತ್ರಕ್ಕೆ ಒಳ್ಳೆಯದಾಗುತ್ತದೆ. ಸೋಮಾರಿತನ ಬೆಳೆಸಿ ಕೊಂಡರೆ ಮನಸ್ಸು ಕೆಟ್ಟು ಮತ್ತೊಬ್ಬರಿಗೆ ದ್ರೋಹ ಬಗೆದಂತಾಗುತ್ತದೆ ಎನ್ನುವ ಅಭಿಪ್ರಾಯ.

ಶಿಕ್ಷಣ ಸಾಹಿತ್ಯ ಕ್ಷೇತ್ರಕ್ಕೆ ತಾವು ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿದರೆ ಈ ಪ್ರಶಸ್ತಿ ದೊರೆಯುತ್ತಿರುವುದು ವಿಳಂಬವಾಯಿತೆಂದು ಅನ್ನಿಸುವುದಿಲ್ಲವೇ ಎಂಬ ಪ್ರಶ್ನೆಗೆ 'ಯಾವ ಕಾಲಕ್ಕೆ ಏನು ಆಗಬೇಕಿದೆಯೋ ಅದೇ ಆಗುವುದು ಹಾಗೆಯೇ ಏನು ದೊರಕ ಬೇಕೆಂಬುವುದಿದೆಯೋ ಅದೇ ದೊರಕುವುದು' ಎಂದರು.

'ಯಾವುದೋ ಅಗೋಚರ ಶಕ್ತಿ ಪ್ರಶಸ್ತಿ ದೊರಕಿಸಿದೆ. ಪ್ರಶಸ್ತಿ ನೀಡಲು ಸರಿಯಾದ ಜನರು ಬರಬೇಕಲ್ಲವೇ? ಯಾರೋ ಬರುತ್ತಾರೆ. ನಮ್ಮ ಸೇವೆಯನ್ನು ಗುರುತಿಸುತ್ತಾರೆ. ಆ ಅಗೋಚರ ಶಕ್ತಿ ಇಲ್ಲದೆ ಒಂದು ಹುಲ್ಲು ಕಡ್ಡಿಯೂ ಸಹ ಅಲ್ಲಾಡಲು ಸಾಧ್ಯವಿಲ್ಲ. ಇದು ನಿಸರ್ಗದ ನಿಯಮ ಎಂದು ಗೌಡರು ಹೇಳಿದರು.

ನಾನು ಪ್ರಶಸ್ತಿಗಾಗಿ ಎಂದೂ ಆಸೆ ಇಟ್ಟುಕೊಂಡಿರಲಿಲ್ಲ. ಹಾಗೆಯೇ ಅದಕ್ಕಾಗಿ ಹಾತೊರೆಯುತ್ತಿರಲಿಲ್ಲ. ಪ್ರಶಸ್ತಿ ಬರಲಿಲ್ಲವೆಂದು ಇದುವರೆಗೂ ಅಸಮಾಧಾನವಾಗಿರಲಿಲ್ಲ. ಈಗ ಅಪಾರ ಸಂತೋಷವು ಆಗುತ್ತಿಲ್ಲ. ಒಟ್ಟಾರೆ ಕರ್ನಾಟಕ ಹಾಗೂ ಭಾರತ ಸರ್ಕಾರವನ್ನು ಈ ಸಂದರ್ಭದಲ್ಲಿ ನಾನು ಅಭಿನಂದಿಸುತ್ತೇನೆ ಎಂದರು.

ನನಗೆ ಪ್ರಶಸ್ತಿ ಬಂದಿರುವುದನ್ನು ನಿನ್ನೆ ಬೆಳಿಗ್ಗೆ ಪತ್ರಕರ್ತರೊಬ್ಬರು ದೂರವಾಣಿ ಮೂಲಕ ತಿಳಿಸಿದರು. ಆಗಲೇ ನನಗೆ ಪ್ರಶಸ್ತಿ ದೊರೆತಿರುವುದು ಗೊತ್ತಾಗಿದ್ದು ಎಂದು ಅವರು ಹೇಳಿದರು.

ಪ್ರಸ್ತುತ ಕಥೆಗಳನ್ನು ಬರೆಯಲು ಪ್ರಾರಂಭಿಸಿದ್ದೇನೆ. ಈಗಾಗಲೇ 25 ಕಥೆಗಳನ್ನು ಬರೆದು ಮುದ್ರಣಕ್ಕೆ ಕಳುಹಿಸಿದ್ದೇನೆ. ಬರಹ ನನ್ನ ಜೀವನದ ಒಂದು ಭಾಗವಾಗಿದೆ. ಪ್ರತಿದಿನ ನಾಲ್ಕು ವಾಕ್ಯ ಬರೆಯದೆ ಇರುವುದಿಲ್ಲ. ಒಟ್ಟಾರೆ ಆಯುಷ್ಯ ಹಾಗೂ ಶಕ್ತಿ ಇರುವವರೆಗೆ ಬರೆಯುತ್ತಲೇ ಇರುತ್ತೇನೆ ಎಂ ದು ಪ್ರೊ. ದೇ. ಜವರೇಗೌಡರು ಹೇಳಿದರು.

— ಸಂಗಾತಿ.

---

### ಓ ಗೆಳತಿ ಬಾಳ ಸಂಗಾತಿ

ನನ್ನ ಮನಸ್ಸಲ್ಲೆ ಪ್ರೀತಿಸಿದೆ ನಿನ್ನ ಓ ಗೆಳತಿ
ನನ್ನ ಮನಸ್ಸ ನೀ ಅರಿಯದಾದೆ ಓ ಗೆಳತಿ

ಪ್ರತಿನಿತ್ಯ ನಿನ್ನ ಧ್ಯಾನದಲ್ಲಿ ನಾ ಮುಳುಗಿದೆ ಓ ಗೆಳತಿ
ಇದ ತಿಳಿಯದೆ ನೀ ತೇಲಾಡಿದೆ ಓ ಗೆಳತಿ

ನಿನ್ನ ಧ್ಯಾನದಲ್ಲಿ ನಾ ಜಗವ ಮರೆತೆ ಓ ಗೆಳತಿ
ಆ ಜಗದೊಳು ನನ್ನ ನಾ ಮರೆತೆ ಓ ಗೆಳತಿ

ನನ್ನ ಬಾಳ ಬಂಡಿಯ ಹೂಡಿರುವೆ ಓ ಗೆಳತಿ
ನನ್ನ ಬಾಳ ಬಂಡಿಯ ಗಾಲಿ ನೀನೆ ಓ ಗೆಳತಿ

ನನ್ನ ಬಾಳ ದಾರಿ ಕಾಣದಾಗಿದೆ ಓ ಗೆಳತಿ
ನನ್ನ ಬಾಳ ದಾರಿ ದೀಪ ನೀನಾಗಿರುವೆ ಓ ಗೆಳತಿ

ನನ್ನ ಬಾಳ ಪುಟ ಬರಿದಾಗಿದೆ ಓ ಗೆಳತಿ
ನನ್ನ ಬಾಳ ಪುಟ ತುಂಬಿಕೊಡು ಬಾ ಓ ಗೆಳತಿ

ನನ್ನ ಬಾಳು ಮರುಭೂಮಿಯಾಗಿದೆ ಓ ಗೆಳತಿ
ನನ್ನ ಬಾಳ ಮರುಭೂಮಿಗೆ ಮರಿಚಿಕೆಯಾಗಿ ಬಾ ಓ ಗೆಳತಿ

ನನ್ನ ಬಾಳು ಅಂದಕಾರದ ಸುಳಿಯಲ್ಲಿ ಸಿಲುಕಿದೆ ಓ ಗೆಳತಿ
ನನ್ನ ಬಾಳ ಜ್ಯೋತಿಯ ಅಲೆಯಾಗಿ ದಡಸೇರಿಸು ಓ ಗೆಳತಿ

ನನ್ನ ಬಾಳ ಪಯಣದಿ ಒಂಟಿಯಾಗಿರುವೆ ಓ ಗೆಳತಿ
ನನ್ನ ಬಾಳ ಸಂಗಾತಿಯಾಗಿ ನೀ ಬರುವೆಯ ಓ ಗೆಳತಿ

ನನ್ನ ಮರು ಜನ್ಮದಲ್ಲಿ ಸಂಗಾತಿಗಾಗಿ ಕಾಯುತಿರುವೆ ಓ ಗೆಳತಿ
ನನ್ನ ಮರುಜನ್ಮದಲ್ಲಿ ಕೊಡಗು ಸಂಗಾತಿ, ನೀನಾಗಿ ಬಾ
ಓ ಗೆಳತಿ

— ಬರಹ: ತುಂತಜೆ ಕೃತಿಕುಮಾರ್ ಚೆಟ್ಟಿಯಪ್ಪ
ಅರ್ವತೋಕ್ಲು

---

ಬಾಯಲ್ಲಿ ಬೆಣ್ಣೆ, ಕೈಯಲ್ಲಿ ದೊಣ್ಣೆ.

# ವಿಶಿಷ್ಟ ವ್ಯಕ್ತಿತ್ವದ ಡಾ. ದೇ. ಜ. ಗೌ. ರ ವ್ಯಕ್ತಿ ಪರಿಚಯ

ಮಾಜಿ ಕುಲಪತಿ ಪ್ರೊ|| ದೇ. ಜವರೇ ಗೌಡರ ಹೋರಾಟದ ಬದುಕು ಮತ್ತು ಬರಹ ಅವಿಸ್ಮರಣೀಯ. ಇವರು ಸಲ್ಲಿಸಿರುವ ಗಣನೀಯ ಸೇವೆಯನ್ನು ಪುರಸ್ಕರಿಸಿ ಈ ಭಾರಿಯ ಘಟಿಕೋತ್ಸವದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು 'ಗೌರವ ಡಾಕ್ಟರೇಟ್' ಪದವಿ ನೀಡಿ ಗೌರವಿಸಿದೆ.

ನೇರನುಡಿ, ಸರಳ ವ್ಯಕ್ತಿತ್ವ, ಒಮ್ಮೊಮ್ಮೆ ಯಾರನ್ನಾದರೂ ಮಾತಿನಲ್ಲಿ ದೂಷಿಸಿದರೆ ಅದು ಕೇವಲ ತಾತ್ಕಾಲಿಕ. ಇವರು ಯಾವತ್ತೂ ವಿದ್ವತ್ತಿಗೆ ಬೆಲೆ ಕೊಡುವಂತವರು. ಅಂತಹವರನ್ನು ಪ್ರೋತ್ಸಾಹಿಸುತ್ತಾರೆ. ಇವರ ಮಾತು ಕೆಲವು ಸಾರಿ ಕಠಿಣ ಎನಿಸಬಹುದು, ಆದರೆ ಅದರಲ್ಲಿ ಪರಿಶುದ್ಧತೆ, ಸತ್ಯವಿರುತ್ತದೆ. ಇದರಿಂದಾಗಿ ವಿಶಿಷ್ಟ ವ್ಯಕ್ತಿತ್ವಕ್ಕೆ ದೇಜಗೌ ಹೆಸರಾದವರು.

ಆಡು ಮೇಯಿಸುವುದನ್ನು ಬಿಟ್ಟು, ಶಾಲೆಗೆ ಸೇರಿದ ಹುಡುಗ ತನ್ನ ತಂದೆಯಿಂದ ಪೆಟ್ಟು ತಿಂದ. ಓದಿನ ಶ್ರದ್ಧೆ ಕಂಡ ಅಭಿಮಾನಿಗಳೊಬ್ಬರ ಪ್ರೋತ್ಸಾಹದಿಂದ ಶಾಲೆ ಸೇರಿದ. ಅಧ್ಯಾಪಕನಾದ. ಮುಂದೆ ಪ್ರಾಧ್ಯಾಪಕ ಪದವಿಗೇರಿ ಕುಲಪತಿಯೂ ಆದ.

ಈ ವ್ಯಕ್ತಿಯೇ ಪ್ರೊ.|| ದೇವೇಗೌಡ ಜವರೇಗೌಡ. ಚನ್ನಪಟ್ಟಣ ತಾಲ್ಲೂಕಿನ ಚಕ್ಕರೆ ಇವರ ಊರು. ಇದೇ ತಾಲ್ಲೂಕಿನ ಮುದಿಗೆರೆಯ ಅಣ್ಣನ ಮನೆಯಲ್ಲಿ ಜುಲೈ 9. 1919ರಲ್ಲಿ ಜನಿಸಿದರು.

ಪ್ರಾಥಮಿಕ ಓದು ಚ[illegible]ರೆಯಲ್ಲಿ, ಹೈಸ್ಕೂಲು ಚನ್ನಪಟ್ಟಣದಲ್ಲಿ. ಬೆಂಗಳೂರಿನಲ್ಲಿ ಇಂಟರ್ [illegible] ಮುಗಿಸಿ ಇಂಗ್ಲೀಷ್ ಆನರ್ಸಿಗಾಗಿ ಮೈಸೂರಿಗೆ ಬಂದರು. ಪ್ರೊ.||ವೆಂಕಣ್ಣಯ್ಯ, ಡಾ||ಕುವೆಂಪು ಅವರ ಹೆಸರು ಕೇಳಿ ಆಕರ್ಷಿತರಾದರು. ಕನ್ನಡ ಆನರ್ಸ್ ಸೇರಿದ್ದರು. ಇಲ್ಲಿನ ರಾಮಕೃಷ್ಣ ಆಶ್ರಮದಲ್ಲಿ ನೆಲೆಸಿದರು.

ಕನ್ನಡ ಆನರ್ಸ್ ಮುಗಿಸಿದ ನಂತರ ಕೊಲ್ಲಾಪುರಕ್ಕೆ ತೆರಳಿದರು. ಅಲ್ಲಿ ನ್ಯಾಯ ಶಾಸ್ತ್ರಕಲಿಕೆಯ ಆಸೆ ಕೈಗೂಡದೆ ಬೆಂಗಳೂರಿಗೆ ಬಂದರು. ವಿದ್ಯಾ ಇಲಾಖೆಯ ಪರೀಕ್ಷೆ ಶಾಖೆಯ ಗುಮಾಸ್ತರಾದರು. ಸ್ವಲ್ಪ ಕಾಲದ ನಂತರ ಮೈಸೂರಿನಲ್ಲಿ ಎಂ. ಎ. ವ್ಯಾಸಂಗ ಮಾಡಿ 1943ರಲ್ಲಿ ಪದವಿಗಳಿಸಿದರು. ಸರ್ಕಾರಿ ಕಾರ್ಯಸೌದ ಸೇರಿ ಅಕೌಂಟ್ಸ್ ಪರೀಕ್ಷೆ ಮುಗಿಸಿದರು. 1945ರಲ್ಲಿ ಸೆಂಟ್ರಲ್ ಕಾಲೇಜಿನ ಅಧ್ಯಾಪಕ ವೃತ್ತಿ, ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನ ಶಬ್ದ ಸಂಗ್ರಹದಲ್ಲಿ ಕೂಡಿ ಕೊಂಡರು.

1945ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿಗೆ ವರ್ಗ. ಇಲ್ಲಿ ಸಂಶೋಧನ ಶಾಖೆಯ ಸಂಪರ್ಕ ಹಾಗೂ 'ಪ್ರಬುದ್ಧ ಕರ್ನಾಟಕ'ದ ಸಂಪಾದಕತ್ವ. 1952ರಲ್ಲಿ ಉಪಪ್ರಾಧ್ಯಾಪಕ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಣ ಶಾಖೆಯ ಕಾರ್ಯದರ್ಶಿ ನಂತರ ಪರೀಕ್ಷಣಾಧಿಕಾರಿ. ಮುಂದೆ ಶಿವಮೊ[illegible] ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲರಾಗಿ, ಅನಂತರ ಮೈಸೂರಿ[illegible] ಹಿಂತಿರುಗಿದರು.

ಮಾನಸ ಗಂಗೋತ್ರಿಯ ಕನ್ನಡ ಇಲಾಖೆ ರೀಡರ[illegible] ಆಗಿದ್ದಾಗ ಪ್ರಾಧ್ಯಾಪಕ ಪ್ರೊ.| ತಿ. ನಂ. ಶ್ರೀ ಅವರೊಡಗೂ[illegible] ಆ ವಿಭಾಗಕ್ಕೆ ಶ್ರಮಿಸಿದರು. ಮಹಾರಾಜ ಕಾಲೇಜಿನಿಂ[illegible] ಗಂಗೋತ್ರಿಗೆ ಕೆಲವು ಇಲಾಖೆಗಳು ಬಂದು ಸೇರಲು ದೇಜಗೌ ಅವರ ಹೋರಾಟ ಸ್ಮರಿಸುವಂತಹದು. ಕನ್ನಡ ಇಲಾಖೆ ಇಲ್ಲಿ[illegible] ಮೊದಲು ಬಂದ ಮೇಲೆ ಇತರ ಇಲಾಖೆಗಳೂ ಬರಲು ಪ್ರೇರ[illegible] ಶಕ್ತಿ ಇವರಾದರು.

ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಕನ್ನಡ ಸಂಪಾದನಾ ವಿಭಾಗವನ್ನು ಬೇರ್ಪಡಿಸಿ, ಅದನ್ನು ಕನ್ನಡ ಅಧ್ಯಯನ ಸಂಸ್ಥೆಯ ತೆಕ್ಕೆಗೆ ತಂದು ಹೆಚ್ಚು ಹೆಚ್ಚು ಪ್ರಾಚೀನ ಗ್ರಂಥಗಳು ಸಂಗ್ರಹವಾಗಿ ಸಂಪಾದಿತವಾಗಿ ಮುದ್ರಣ ಕಾಣುವಂತಾಯಿತು. ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಭಾಷಾಂತರ ಗ್ರಂಥ ಪ್ರಕಟಣೆ, ಜಾನಪದ ವಸ್ತು ಸಂಗ್ರಹಾಲಯ ಆರಂಭಿಸಿದರು. ವಿಶ್ವಕೋಶದ ಸಂಪುಟಗಳ ರಚನೆಯ ಜವಾಬ್ದಾರಿಯೂ ಅವರದಾಯಿತು. 1969ರಲ್ಲಿ ಕುಲಪತಿ ಸ್ಥಾನವನ್ನು ಅಲಂಕರಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಅವಿಶ್ರಾಂತವಾಗಿ ದುಡಿದರು.

1970 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದ ವೇಳೆ, ಸಮ್ಮೇಳನದ ಅಧ್ಯಕ್ಷಗಿರಿ ದೇಜಗೌ ಅವರಿಗೆ ದೊರಕಿತು.

ಕನ್ನಡದ ಗದ್ಯ ಲೇಖಕರಲ್ಲಿ 'ದೇಜಗೌ' ಅಗ್ರಗಣ್ಯರು. ಕನ್ನಡ ಮತ್ತು ಇಂಗ್ಲೀಷ್ ಎರಡರಲ್ಲೂ ಭಾಷಾಪ್ರಭುತ್ವಳ್ಳವರು. ಇವರು ಕೆಲವಾರು ಜೀವನ ಚರಿತ್ರೆಗಳನ್ನು ವಿಮರ್ಶಾ ಗ್ರಂಥಗಳನ್ನು ರಚಿಸಿದ್ದಾರೆ. ಆಲ್ಬರ್ಟ್ ಐನ್‌ಸ್ಟೀನ್ , ತೀ. ನಂ. ಶ್ರೀ., ಕುವೆಂಪು, ಬೆಂಗಳೂರು ಕೆಂಪೇಗೌಡ, ಕಡು[illegible]ಲಿ ಕುಮಾರರಾಮ, ಮೋತಿಲಾಲ್ ನೆಹರು, ಶ್ರೀ ರಾಮಾಯಣ ದರ್ಶನಂ, ವಚನ ಚಂದ್ರಿಕೆ, ಷಡಕ್ಷರದೇವ, ಸಾಹಿತಿಗಳ ಸಂಗದಲ್ಲಿ, ಬೆರಕೆಸೊಪ್ಪು ಈ ಮೊದಲಾದ ಗ್ರಂಥಗಳು ಇವರಿಂದ ಹೊರಬಂದವು.

ಕೃಷ್ಣ ಹತೀಸಿಂಗರ 'ನೆನಪು ಕಹಿಯಲ್ಲ' ಟಾಲ್‌ಸ್ಟಾಯ್‌ರ 'ಪುನರುತ್ಥಾನ' (ಸೋವಿಯತ್ ದೇಶದ ಪ್ರಶಸ್ತಿಗಳಿಸಿದ ಕೃತಿ) ಜೇನ್ ಆಸ್ಟಿನ್‌ರ ಕೃತಿ 'ಹಮ್ಮು ಬಿಮ್ಮು' ಇವರಿಗೆ ಕೀರ್ತಿ ತಂದ ಭಾಷಾಂತರ ಕೃತಿಗಳು.

ಬಾವಿ ತೋಡದೆ ನೀರು ಸಿಗದು, ಪ್ರಯತ್ನ ಮಾಡದೆ ಫಲ ಸಿಗದು.

7 ನೇ ಪುಟಕ್ಕೆ

# ಪಿಯುಸಿವರೆಗೆ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ

ಸರಕಾರಿ ಕಾಲೇಜುಗಳಲ್ಲಿನ ಶಿಕ್ಷಣ ಶುಲ್ಕವನ್ನು ಹೆಚ್ಚಿಸಲು ನಿರ್ಧರಿಸಿರುವ ರಾಜ್ಯ ಸರಕಾರ ಸರಕಾರಿ ಶಾಲಾ ಕಾಲೇಜುಗಳಲ್ಲಿ ಪಿ.ಯು.ಸಿವರೆಗೆ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ನೀಡುವುದಾಗಿ ಪ್ರಕಟಿಸಿದೆ.

ಪ್ರಸಕ್ತ ಸಾಲಿನ ಆಯವ್ಯಯ ಪತ್ರದಲ್ಲಿ ಈ ವಿಚಾರ ತಿಳಿಸಲಾಗಿದ್ದು, ಉನ್ನತ ಶಿಕ್ಷಣಕ್ಕೆ ನೀಡುವ ಅನುದಾನದಲ್ಲಿ ಶೇ. 15ರಷ್ಟನ್ನು ಕಡಿತ ಮಾಡುವುದಾಗಿ ಸರಕಾರ ಹೇಳಿದೆ.

ಬಾಲನೊಬ್ಬ ಕಲಿತರೆ ಅವನೊಬ್ಬ ಕಲಿತಂತೆ, ಬಾಲೆಯೊಬ್ಬಳು ಕಲಿತರೆ ಕುಟುಂಬವೆ ಕಲಿತಂತೆ' ಎನ್ನುವುದು ಅನುಭವದ ಮಾತು. ಇದರ ಮೇಲೆ ನಂಬಿಕೆಯಿಟ್ಟಿರುವ ಕಾಂಗ್ರೆಸ್ ಸರಕಾರ ಕಾರ್ಯತಃ ಮಾಡಿ ತೋರಿಸಲು ಉದ್ದೇಶಿಸಿರುವುದರಿಂದ ಎಲ್ಲಾ ಹೆಣ್ಣು ಮಕ್ಕಳಿಗೆ ಸರಕಾರಿ ಶಾಲಾ ಕಾಲೇಜುಗಳಲ್ಲಿ ಪಿಯುಸಿವರೆಗೆ ಉಚಿತ ಶಿಕ್ಷಣ ನೀಡಲಿದ್ದೇವೆ ಎಂದು ಆಯವ್ಯಯದಲ್ಲಿ ತಿಳಿಸಿದೆ.

ರಾಜ್ಯದಲ್ಲಿ ಸುಮಾರು 11 ಸಾವಿರ ಅಪೂರ್ಣ ಶಾಲಾ ಕೊಠಡಿಗಳಿವೆ, ಇವುಗಳನ್ನು ಮಾರ್ಚ್ 2001ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವದು, ಇದಕ್ಕಾಗಿ 45 ಕೋಟಿ ರೂ. ಗಳನ್ನು ಹೊಂದಿಸಲಾಗಿದೆ ಎಂದು ಮುಖ್ಯ ಮಂತ್ರಿ ಎಸ್. ಎಂ. ಕೃಷ್ಣ ಅವರು ಇತ್ತೀಚೆಗೆ ಮಂಡಿಸಿದ್ದ ಆಯುವ್ಯಯದಲ್ಲಿ ತಿಳಿಸಿದರು.

ಸರಕಾರಿ ಶಾಲೆಗಳಲ್ಲಿನ 1ರಿಂದ 4ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ 5ರಿಂದ 7ನೇ ತರಗತಿಯ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ಉಚಿತವಾಗಿ ವಿತರಿಸುವ ಯೋಜನೆ ಜಾರಿಯಲ್ಲಿದೆ. ಈ ಯೋಜನೆಯನ್ನು ಏಳನೇ ತರಗತಿಯವರೆಗಿನ ಎಲ್ಲ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗುವುದು. ಇದರಿಂದ ಹೆಚ್ಚುವರಿಯಾಗಿ 16 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದ್ದು ಸರಕಾರ ವಾರ್ಷಿಕ 5.3ಕೋಟಿ ರೂ.ಗಳನ್ನು ವೆಚ್ಚ ಮಾಡಲಿದೆ.

ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿ ಕೊಂಡು ಶಾಲೆಗಳಲ್ಲಿ ಶಿಕ್ಷಣ ಗುಣಮಟ್ಟವನ್ನು ಸುಧಾರಿಸಲು ಕಾಂಗ್ರೆಸ್ ಸರಕಾರ ಸಂಕಲ್ಪ ತೊಟ್ಟಿರುವುದರಿಂದ ಮಾಹಿತಿ ತಂತ್ರಜ್ಞಾನ ಆಧಾರಿತ ಶಿಕ್ಷಣದ ಬಗ್ಗೆ ಸರಕಾರ ಗಮನ ಹರಿಸಿದೆ. ಮುಂದೆ ಇದನ್ನು 1000ಶಾಲೆಗಳಲ್ಲಿ ಆರಂಭಿಸಲಾಗುವುದು.

ರಾಜ್ಯದಲ್ಲಿನ ಎಲ್ಲ 77 ಎಂಜಿನಿಯರಿಂಗ್ ಕಾಲೇಜುಗಳನ್ನು ಮುಂದಿನ ಹನ್ನೆರಡು ತಿಂಗಳಲ್ಲಿ ನೆಟ್‌ವರ್ಕ್‌ಗೆ ಅಳವಡಿಸಲಾಗುವುದು. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯವು ಜಗತ್ತಿನಾದ್ಯಂತ ಇರುವ ಖಾಯಂ ಶಿಕ್ಷಣ ಸಂಸ್ಥೆಗಳ ಒಕ್ಕೂಟಕ್ಕೆ ಸೇರಿ ಇಂಟರ್‌ನೆಟ್ ಮೂಲಕ ದೂರ ಶಿಕ್ಷಣ ನೀಡಲು ಕ್ರಮ ಕೈಗೊಳ್ಳುತ್ತಿದೆ ಎಂದು ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರು ಮಂಡಿಸಿದರು.

ಸರಕಾರ ಹಲವಾರು ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡುತ್ತಿದೆ. ಆದರೆ ಈ ಸಂಸ್ಥೆಗಳು ಸದೃಢವಾಗಿದ್ದು ತಮ್ಮ ಸ್ವಂತ ಸಂಪನ್ಮೂಲಗಳನ್ನು ಸಂಗ್ರಹಿಸುವ ಶಕ್ತಿ ಹೊಂದಿರುವುದರಿಂದ ಉನ್ನತ ಶಿಕ್ಷಣಕ್ಕೆ ನೀಡುವ ಅನುದಾನದಲ್ಲಿ ಶೇ. 15 ರಷ್ಟನ್ನು ಕಡಿತ ಮಾಡಲು ಉದ್ದೇಶಿಸಲಾಗಿದೆ. ಆದರೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ನೀಡುತ್ತಿರುವ ಅನುದಾನ ಎಂದಿನಂತೆಯೇ ಮುಂದುವರೆಯುತ್ತದೆ. ಕಡಿತದಿಂದ ಉಳಿತಾಯವಾಗುವ ಸಂಪನ್ಮೂಲಗಳನ್ನು ರಾಜ್ಯದಲ್ಲಿ ಶೈಕ್ಷಣಿಕವಾಗಿ ವಂಚಿತವಾಗಿರುವ ಪ್ರದೇಶಗಳ ಪ್ರಾಥಮಿಕ ಶಿಕ್ಷಣದ ವಿಸ್ತರಣೆಗಾಗಿ ಬಳಸಿಕೊಳ್ಳಲಾಗುವುದು ಎಂದು ಮುಂಗಡ ಪತ್ರದಲ್ಲಿ ತಿಳಿಸಲಾಗಿದೆ.

ಸರಕಾರಿ ಕಾಲೇಜುಗಳ ಶಿಕ್ಷಣ ಶುಲ್ಕವನ್ನು ಹೆಚ್ಚಿಸಲೇ ಬೇಕಾಗಿರುವ ಅವಶ್ಯಕತೆ ಕಂಡು ಬಂದಿದೆ. ಉದಾಹರಣೆಗೆ, ನಮ್ಮ ರಾಜ್ಯದಲ್ಲಿ ಬಿ. ಕಾಂ.ನ ಶಿಕ್ಷಣ ಶುಲ್ಕ ವಾರ್ಷಿಕ 180ರೂ. ಗಳಾಗಿದ್ದರೆ, ಮಹಾರಾಷ್ಟ್ರದಲ್ಲಿ 800ರೂ. ಗಳು ಮತ್ತು ಆಂಧ್ರದಲ್ಲಿ 360ರೂ. ಗಳನ್ನು ನಿಗದಿ ಮಾಡಲಾಗಿದೆ. ಶಿಕ್ಷಣ ಶುಲ್ಕದ ಪರಿಸ್ಥಿತಿ ಹೀಗೆಯೇ ಹೆಚ್ಚು ದಿನ ಮುಂದುವರಿಯಲಾಗದು.

ಶುಲ್ಕ ಪರಿಷ್ಕರಣೆಯ ನಂತರ ಅರ್ಹ ವಿದ್ಯಾರ್ಥಿಗಳಿಗೆ ಕಾಲೇಜು ಶಿಕ್ಷಣ ನಿಲುಕದಂತಾಗಬಾರದು ಎಂಬ ಕಾರಣದಿಂದ ಕಾಲೇಜು ಶಿಕ್ಷಣಕ್ಕೆ ಸಾಲ ನೀಡುವ ಯೋಜನೆಯನ್ನು ರೂಪಿಸಲು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ಜೊತೆ ಈಗಾಗಲೇ ಮಾತುಕತೆ ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

## ಆರೋಗ್ಯ

ಈಗಾಗಲೇ ರಾಜ್ಯದಲ್ಲಿ ಆರೋಗ್ಯ ಕಾರ್ಯಪಡೆಯನ್ನು ರಚಿಸಲಾಗಿದೆ. ರಾಜ್ಯದ ಆರೋಗ್ಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪುನರ್‌ರಚಿಸುವ ಬಗ್ಗೆ ಕಾರ್ಯಪಡೆಯು ಮುಂದಿನ ಮೂರು ತಿಂಗಳ ಒಳಗೆ ಸಮಗ್ರ ವರದಿ ನೀಡಲಿದೆ. ಗ್ರಾಮೀಣ ಆರೋಗ್ಯ ರಕ್ಷಣೆಯ ಗುಣಮಟ್ಟ ಸುಧಾರಿಸಲು ತಕ್ಷಣವೇ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಮಿತಿಯು ಪ್ರಮುಖ ಸಲಹೆಗಳನ್ನು ನೀಡಿದೆ.

ಗ್ರಾಮೀಣ ಬಡ ಮಹಿಳೆಯರಿಗೆ ವೈಯಕ್ತಿಕ ಆರೋಗ್ಯ ಕಿಟ್‌ಗಳ ಅಗತ್ಯವಿದೆ. ಹಲವಾರು ಭಾಗಗಳಲ್ಲಿ ಮಹಿಳೆಯರು ಮತ್ತು ಕಿಶೋರಿಗಳ ಋತುಸ್ರಾವ ಸಮಯದಲ್ಲಿ ಅನೈರ್ಮಲ್ಯ ರೂಢಿಯಿಂದಾಗಿ ಯಾತನೆ ಅನುಭವಿಸುತ್ತಿದ್ದಾರೆ ಅಲ್ಲದೆ ಸೂಕ್ತ ಸೌಲಭ್ಯಗಳ ಕೊರತೆಯಿಂದಾಗಿ ಸೋಂಕಿಗೆ ಒಳಗಾಗುವ ಸಂಭವವೇ ಹೆಚ್ಚಾಗಿದೆ. ಇವನ್ನು ನಿವಾರಿಸಲು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ವೈಯಕ್ತಿಕ ಆರೋಗ್ಯ ಕಿಟ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದ್ದು, ಇದಕ್ಕಾಗಿ 18ಕೋಟಿ ರೂ.ಗಳ ವಾರ್ಷಿಕ ಸಹಾಯಧನವನ್ನು ನಿಗದಿಗೊಳಿಸಲಾಗಿದೆ ಎಂದು ಆಯವ್ಯಯ ಮಂಡನೆಯಲ್ಲಿ ಮುಖ್ಯಮಂತ್ರಿ ತಿಳಿಸಿದ್ದಾರೆ.

ಒಳ್ಳೆಯ ಕೆಲಸಕ್ಕೆ ವಿಘ್ನ ಹೆಚ್ಚು.

ಪ್ರಾರಂಭಿಕ ಹಂತವಾಗಿ 1000 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸುಧಾರಿಸಲು ಕ್ರಮ ಕೈಗೊಳ್ಳಲಿದೆ. ಈ ಆರೋಗ್ಯ ಕೇಂದ್ರಗಳು ಪ್ರಯೋಗಾಲಯ, ವೈದ್ಯಕೀಯ ಉಪಕರಣಗಳು ಮತ್ತು ಸಿಬ್ಬಂದಿಯಿಂದ ಸಜ್ಜುಗೊಂಡಿರುತ್ತದೆ. ತಂತ್ರಜ್ಞರ ಜಿಲ್ಲಾವಾರು ನೇಮಕಾತಿ ಪ್ರಕ್ರಿಯೆ ಈಗಾಗಲೇ ಪ್ರಾರಂಭಗೊಂಡಿದೆ.

ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನ ಮಾದರಿ ಎಂದು ವಿಶ್ವಬ್ಯಾಂಕ್ ಮೆಚ್ಚುಗೆ ವ್ಯಕ್ತಪಡಿಸಿದ್ದರಿಂದ ಈ ಯೋಜನೆಯಡಿಯಲ್ಲಿ ಕನಿಷ್ಠ 100 ಸೆಕೆಂಡರಿ ಆಸ್ಪತ್ರೆಗಳನ್ನು ವರ್ಷಾಂತ್ಯಕ್ಕೆ ಸಜ್ಜುಗೊಳಿಸಲಾಗುವುದು ಎಂದು ವಿವರಿಸಿದರು.

ಬೆಂಗಳೂರು ನಗರದ ಜೊತೆಗೆ ಮೈಸೂರು, ಹುಬ್ಬಳ್ಳಿ-ಧಾರವಾಡ, ರಾಯಚೂರು, ಗುಲ್ಬರ್ಗಾ, ಬೆಳಗಾವಿ, ಬಿಜಾಪುರ, ತುಮಕೂರು, ದಾವಣಗೆರೆ, ಶಿವಮೊಗ್ಗ, ಭದ್ರಾವತಿ ಮತ್ತು ಬಳ್ಳಾರಿ ಒಟ್ಟು 11 ನಗರಗಳಲ್ಲಿನ ಕೊಳಚೆ ಪ್ರದೇಶದ ನಿವಾಸಿಗಳಿಗೂ ಆರೋಗ್ಯ ರಕ್ಷಣೆ ಸೌಲಭ್ಯವನ್ನು ವಿಸ್ತರಿಸಲಾಗುತ್ತಿದೆ. ವಿಶ್ವಬ್ಯಾಂಕ್ ನೆರವಿನ ಭಾರತ ಜನಸಂಖ್ಯಾ ಯೋಜನೆ ಏಳರ ಅಡಿಯಲ್ಲಿ 26 ಕೋಟಿ ರೂ. ಗಳ ವೆಚ್ಚದಲ್ಲಿ ಈ ವರ್ಷ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಮಂಡಿಸಿದ್ದಾರೆ.

ರಾಜ್ಯದಲ್ಲಿ ತಲೆದೋರಬಹುದಾದ ಸಾಂಕ್ರಾಮಿಕ ರೋಗಗಳ ಉಸ್ತುವಾರಿ ವಹಿಸಲು ಆರೋಗ್ಯ ಮಾಹಿತಿ ವ್ಯವಸ್ಥೆಯನ್ನು ಮುಂದಿನ ಮೂರು ತಿಂಗಳ ಒಳಗಾಗಿ ಖಾಸಗಿ ವಲಯದ ನೆರವಿನೊಂದಿಗೆ ಸಿದ್ಧಪಡಿಸಲಾಗುವುದು. ಇದರ ಉತ್ತಮ ಉಸ್ತುವಾರಿಗಾಗಿ ಎಲ್ಲ ಜಿಲ್ಲಾ ಆಸ್ಪತ್ರೆಗಳನ್ನು ಬೆಂಗಳೂರಿನಲ್ಲಿರುವ ಆರೋಗ್ಯ ಸಚಿವಾಲಯದೊಡನೆ ಸಂಪರ್ಕ ಜಾಲಕ್ಕೆ ಒಳಪಡಿಸಲಾಗುವುದು. ಬೆಂಗಳೂರು ಮೂಲದ ಖಾಸಗಿ ಕಂಪನಿಯೊಂದು ಇದನ್ನು ಸಾರ್ವಜನಿಕ ಸೇವೆಯೆಂದು ಪರಿಗಣಿಸಿ ನೆರವು ನೀಡಲು ಮುಂದಾಗಿದೆ ಎಂದು ಆಯವ್ಯಯದಲ್ಲಿ ತಿಳಿಸಲಾಗಿದೆ.

— ಸಂಗಾತಿ

# ಅಪರೂಪದ ಮೂರು ಶಿಲಾಶಾಸನಗಳ ಪತ್ತೆ

ಚಿತ್ರದುರ್ಗ **ಜಿಲ್ಲೆಯ** ಹೊಳಲ್ಕೆರೆ ತಾಲೂಕು ಚಿಕ್ಕಜಾಜೂರು ಸಮೀಪದ **2 ಕಿ. ಮೀ.** ದೂರದ ಕೋಟೆಹಾಳ್ ಗ್ರಾಮದಲ್ಲಿ ಇತ್ತೀಚೆಗೆ ಪ್ರಾ**ದೇಶಿಕ** ಇತಿಹಾಸದ ಮೇಲೆ ಬೆಳಕು ಚೆಲ್ಲುವ 3 ಅಪರೂಪದ ಶಿಲಾ**ಶಾಸ**ನಗಳು ಪತ್ತೆಯಾಗಿವೆ.

ಕೋಟೆಹಾಳ್ ಗ್ರಾಮದ **ಸಮೀಪ** ರಸ್ತೆ ಬದಿಯಲ್ಲಿ ಒಂದು ಕಲ್ಲಿನ ಪಾಳು ಮಂಟಪವಿದೆ. ಇದು ಮಣ್ಣಿನಿಂದ ಮುಚ್ಚಿ ಹೋಗಿತ್ತು. ಇತ್ತೀಚೆಗೆ ಚಿಕ್ಕ ಜಾಜೂರು-ಹಿರೇ ಎಮ್ಮಿಗನೂರು ರಸ್ತೆ ವಿಸ್ತರಣೆ ಕಾರ್ಯ ನಡೆಯುತ್ತಿದ್ದಾಗ ಮಣ್ಣಿನ ಗುಡ್ಡೆಯ ಕೆಳಗೆ ಸುಮಾರು 5 ಅಡಿ ಆಳದಲ್ಲಿ ಮೂರು ಅಡಿ ಎತ್ತರದ ಸುಂದರವಾದ ಈಶ್ವರಲಿಂಗ ಪತ್ತೆಯಾಯಿತು. ಕುತೂಹಲಗೊಂಡ ಯುವಕರು ಮತ್ತು ಗ್ರಾಮಸ್ಥರು ಅದೇ ಸ್ಥಳದಲ್ಲಿ ಇನ್ನಷ್ಟು ವಿಗ್ರಹಗಳು ದೊರೆಯಬಹುದು ಎಂಬ ನಂಬಿಕೆಯಿಂದ ಮಂಟಪದ ಸುತ್ತ ಇದ್ದ ಇನ್ನಷ್ಟು ಮಣ್ಣನ್ನು ತೋಡಿದಾಗ ಅಪೂರ್ವ ಶಿಲಾ ಶಾಸನಗಳು ಪತ್ತೆಯಾದವು.

ಈಶ್ವರ ಲಿಂಗ ದೊರೆತ ಸ್ಥಳದಿಂದ ಸ್ವಲ್ಪ ದೂರದಲ್ಲಿ ಮೂರು ಅಪರೂಪದ ಶಿಲಾಶಾಸನ ಮತ್ತು 3 ಅಡಿ ಎತ್ತರದ ಭಗ್ನ ನಂದಿ ಸಿಕ್ಕಿದೆ. ಈ ಮೂರು ಶಿಲಾಶಾಸನಗಳಲ್ಲಿ ಒಂದು ದಾನ ಶಾಸನವಾಗಿದ್ದು ಇನ್ನೆರಡು ವೀರಗಲ್ಲು ಶಾಸನವಾಗಿದೆ.

**ದಾನ ಶಾಸನ :** ಈ ದಾನ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ದೇವನು (ಆರನೇ ವಿಕ್ರಮಾದಿತ್ಯ) ಆಳುತ್ತಿದ್ದಾಗ ಅವನ ಮಾಂಡಲೇಶ್ವರನಾಗಿ (ದಂಡನಾಯಕ) ನೊಳಂಬವಾಡಿ ಪ್ರಾಂತ್ಯವನ್ನು ತ್ರಿಭುವನಮಲ್ಲ ಪಾಂಡ್ಯ ದೇವನು ಆಳುತ್ತಿದ್ದ. ಆಗ ಗಂಗ ವಂಶದ ಕೊಂಗಣಿವರ್ಮ ದೊರೆಯ ದಂಡನಾಯಕ ರಾಯರಸ ಎಂಬುವನು ಜಾದಿಪೂರು (ಈಗಿನ ಚಿಕ್ಕಜಾಜೂರು) ಪ್ರದೇಶವನ್ನು ಆಳುತ್ತಿದ್ದ. ಆ ಊರಿನ ಪ್ರಮುಖನಾದ ಚಾಮುಂಡಿರಾಯ ಮತ್ತು ಇತರರು ಕ್ರಿ. ಶ. 1116ರಲ್ಲಿ ನಿರ್ಮಾಣ ಮಾಡಿಸಿದ್ದ ನಾರಾಯಣ ದೇವರ ನೈವೇದ್ಯಗಾಗಿ ರಾಯರಸನು ಗದ್ದೆಯನ್ನು ಕೊಂಡುಕೊಂಡು ರುದ್ರಶಕ್ತಿ ಎಂಬ ಗುರುಗಳಿಗೆ ಧಾನಪೂರ್ವಕವಾಗಿ ಸಮರ್ಪಿಸಿದ ಎಂದು ಈ ದಾನ ಶಾಸನದಲ್ಲಿ ವಿವರಿಸಲಾಗಿದೆ.

R12ØS2PSyದೊರೆತಿರುವ ಎರಡು ವೀರಗಲ್ಲುಗಳಲ್ಲಿ ತನ್ನದೇ ಆದಂತಹ ವೀರ ಪುರುಷರ ಪರಾಕ್ರಮವನ್ನು ಬಿತ್ತರಿಸುವ ವೀರಗಲ್ಲು ಶಾಸನಗಳಾಗಿವೆ.

ಒಂದು ವೀರಗಲ್ಲುವಿನಲ್ಲಿ ಕನ್ನಡಿಯ ಮಲ್ಲಯ್ಯನಾಯಕ ಎಂಬ ಸಾಮಾಂತನ ಆಳು ಹೊನ್ನಯ್ಯನಾಯಕ ಎಂಬುವನ ಮಗನಾದ ವೇಮಣ್ಣ ಎಂಬುವನು ಕಾಳಗದಲ್ಲಿ (ಯುದ್ಧ) ಮಡಿದ. ಈ ಕುರಿತಾದ ವೀರಗಲ್ಲಿನಲ್ಲಿ ಪುರಾತನ ಅಕ್ಷರದಲ್ಲಿ ಬರೆಯಲಾಗಿದೆ.

ಇನ್ನೊಂದು ವೀರಗಲ್ಲಿನಲ್ಲಿ ಈ ಪ್ರಾಂತ್ಯದಲ್ಲಿ ಸುಮಾರು 900 ವರ್ಷಗಳ ಹಿಂದೆ ನಡೆದ ಒಂದು ಪರಾಕ್ರಮದ ರೋಮಾಂಚಕ ಘಟನೆಯನ್ನು ತಿಳಿಸುತ್ತದೆ. ಈ ಪ್ರಾಂತ್ಯವನ್ನು ಕನ್ನಡಿ ಮಲ್ಲಯ್ಯನಾಯಕ ಮಹಾಸಾಮಂತನಾಗಿ ಜಾದಿವಾರು ಪ್ರಾಂತವನ್ನು ಆಳುತ್ತಿದ್ದಾಗ ಸಾಮಂತನಾದ ವೈಜಣ್ಣ ಎಂಬುವನಿಗೆ ಹುಲಿಯನ್ನುಕೊಲ್ಲಲು ಅಪ್ಪಣೆ ಮಾಡಿದನಂತೆ. ಆಗ ವೈಜಣ್ಣ ಈ ಹುಲಿಯನ್ನು ಕೊಂದು ತರುವಾಯ ತಾನು ಸಹ ಮೃತಪಟ್ಟ. ಆಗ ಅವನ ಅಕ್ಕ ಚಿಕ್ಕವ್ವ ವೀರಗಲ್ಲು ನಿಲ್ಲಿಸಿದಳು ಎಂದು ಬರೆಯಲಾಗಿದೆ.

— ಎಂ. ಜಿ. ಶೇಟ್

**ಬರ ಬರುತ್ತಾ ರಾಯನ ಕುದುರೆ ಕತ್ತೆ ಆಯಿತು.**

# ಬಸಳೆ

ನಮ್ಮಲ್ಲಿ ಸೊಪ್ಪು ತರಕಾರಿಗಳ ಸಂಖ್ಯೆ ಅಪಾರ. ಅವುಗಳಲ್ಲಿ ಅನೇಕ ವಿವಿಧ ಸೊಪ್ಪು ತರಕಾರಿಗಳನ್ನು ಹೊಲ ಗದ್ದೆಗಳಲ್ಲಿ ಬೆಳೆಯಲಾಗುತ್ತದೆ. ಕೆಲವು ದಿನನಿತ್ಯದ ಆಹಾರದ ಉಪಯೋಗಕ್ಕೆ ಬಚ್ಚಲು ಮನೆಯ ನೀರು ಹೋಗುವ ಸ್ಥಳದಲ್ಲಿ ಅಥವಾ ಕೈತೋಟದಲ್ಲಿ ಬೆಳೆಯುವ ಪದ್ಧತಿಯು ರೂಢಿಯಲ್ಲಿದೆ. ಬೇಯಿಸಿದ ಸೊಪ್ಪು ತರಕಾರಿಗಳು ಇತರ ತರಕಾರಿಗಳಷ್ಟೆ ಪೌಷ್ಠಿಕಾಂಶದಿಂದ ಕೂಡಿದ್ದು, ತಿನ್ನಲು ರುಚಿಕರವಾಗಿರುತ್ತದೆ. ಆರೋಗ್ಯದ ದೃಷ್ಟಿಯಿಂದಲೂ ಮಿತವ್ಯಯದ ದೃಷ್ಟಿಯಿಂದ ಉತ್ತಮ. ಮನೆಯಂಗಳದಲ್ಲಿ ಬೆಳೆಯಬಹುದಾದ ಸೊಪ್ಪು ತರಕಾರಿಗಳಲ್ಲಿ ಬಸಳೆ ಸೊಪ್ಪು ಪ್ರಮುಖವಾದದ್ದು.

'ಬಾಸೆಲ್ಲೇಸಿ' ಎಂಬ ಸಸ್ಯ ಕುಟುಂಬಕ್ಕೆ ಸೇರಿದ ಈ ಬಳ್ಳಿ ಜಾತಿಯ ಬಸಳೆಯನ್ನು ಸಸ್ಯಶಾಸ್ತ್ರದಲ್ಲಿ 'ಬಾಸಲ್ಲಾ ರುಬ್ರಾ' ಎಂದು ಕರೆಯುತ್ತಾರೆ. ಸಾಧಾರಣವಾಗಿ ಎಲ್ಲರ ಮನೆಯಂಗಳ ಗಳಲ್ಲಿ ಚಪ್ಪರ ಮೇಲೆ ಬೆಳೆಯುವ ಎಲ್ಲರಿಗೂ ಚಿರಪರಿಚಿತವಾದ ಬಸಳೆ ಸೊಪ್ಪನ್ನು ಭಾರತ ಮಾತ್ರವಲ್ಲದೆ, ಚೀನಾ, ಆಫ್ರಿಕಾ, ಅಮೆರಿಕಾ ಹಾಗೂ ಏಷ್ಯಾ ಖಂಡದ ಇತರ ಉಷ್ಣ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಬಾಯಿಗೆ ರುಚಿ, ದೇಹಕ್ಕೆ ಹಿತಕರವಾದ ಬಳ್ಳಿ ರೂಪದ ಸಸ್ಯವಾದ ಈ ಬಸಳೆಯಲ್ಲಿ ಎರಡು ಪ್ರಕಾರದ ಜಾತಿಗಳಿವೆ. ಒಂದು ಬಿಳಿ ಬಸಳೆ ಹಾಗೂ ಕೆಂಪು ಬಸಳೆ. ಬಿಳಿ ಬಣ್ಣದಿಂದ ತಿಳಿ ಹಸಿರು ಎಲೆ ಮತ್ತು ಕಾಂಡವನ್ನು ಹೊಂದಿದ್ದ, 'ಬಸೆಲ್ಲ ಅಲ್ಬ' ಎನ್ನುವ ಈ ಜಾತಿಯಲ್ಲಿ ಔಷಧೀಯ ಗುಣಗಳು ಅಡಕವಾಗಿರುವುದರಿಂದ ಇದರ ಸೇವನೆಯಿಂದ ಹಸಿವು ಅಧಿಕಗೊಳಿಸುವುದು ಮಾತ್ರವಲ್ಲ, ಎಳೆಯ ಮಕ್ಕಳು ಮತ್ತು ಗರ್ಭಿಣಿ ಸ್ತ್ರೀಯರಲ್ಲಿ ಕಬ್ಬಿಣದ ಅಂಶ ಅಧಿಕವಾಗುತ್ತದೆ. ಇದರಲ್ಲಿರುವ ಅಂಟು ದ್ರವ ಪದಾರ್ಥಗಳು ದೇಹದ ಉಷ್ಣತೆಯನ್ನು ಕಡಿಮೆ ಮಾಡುತ್ತದೆ. ನಿರಂತರ ಸೇವನೆಯಿಂದ ಕಣ್ಣಿನ ದೃಷ್ಟಿಯನ್ನು ಉತ್ತಮಪಡಿಸುತ್ತದೆ.

ಅಧಿಕ ಪ್ರಮಾಣದಲ್ಲಿ ನೀರು ಹಾಗೂ ಹೆಚ್ಚಿನ ಪೋಷಕಾಂಶದಿಂದ ಕೂಡಿದ ಬಸಳೆಯನ್ನು ಕರಾವಳಿಯ ಗ್ರಾಮೀಣ ಪ್ರದೇಶದಲ್ಲಿ ವಾರಕ್ಕೊಮ್ಮೆಯಾದರೂ ನಿರಂತರ ವಾಗಿ ಸೊಪ್ಪು ಮತ್ತು ಕಾಂಡದ ಪದಾರ್ಥಗಳನ್ನು ಮಾಡಿ ಸೇವಿಸುವ ಪದ್ಧತಿ ರೂಢಿಯಲ್ಲಿದೆ. ಇದರ ಸೊಪ್ಪಿಗೆ ತೊಗರಿ, ಹೆಸರು ಮುಂತಾದ ಬೇಳೆ ಕಾಳುಗಳನ್ನು ಸೇರಿಸಿ ರುಚಿಯಾದ ಸಾಂಬಾರು ಮತ್ತು ಬಸಳೆ ಸೊಪ್ಪಿನ ರುಚಿಕರವಾದ ದೋಸೆಯನ್ನು ತಯಾರಿಸುತ್ತಾರೆ.

ನೀರು ನಿಲ್ಲದೆ ಬಸಿದು ಹೋಗುವಂತಹ ಯಾವ ಪ್ರದೇಶದಲ್ಲಿಯೇ ಬಸಳೆಯನ್ನು ಬೆಳೆಯಬಹುದು. ಕರಾವಳಿಯ ಪ್ರದೇಶದಲ್ಲಿ ಸಾಮಾನ್ಯವಾಗಿ ಬಚ್ಚಲು ಮನೆಯ ನೀರು ಹರಿದು ಹೋಗುವ ಪ್ರದೇಶದಲ್ಲಿ ಬಸಳೆ ಸೊಪ್ಪಿನ ಕಾಂಡವನ್ನು ನೆಟ್ಟು ಸುಮಾರು ಐದಡಿ ಎತ್ತರದ ಚಪ್ಪರವನ್ನು ನಾವು ಸಾಮಾನ್ಯವಾಗಿ ಕಾಣುತ್ತೇವೆ. ಬಲಿತ ಕಾಂಡದ 5-6ಕಣ್ಣುಗಳಿಂದ ಅಥವಾ ಬೀಜದ ಮೂಲಕ ವೃದ್ಧಿ ಮಾಡಬಹುದು. ನೆಟ್ಟ 3ರಿಂದ 4ತಿಂಗಳಲ್ಲಿ ಪ್ರತಿ ಎರಡು ಅಥವಾ ಒಂದು ವಾರಕ್ಕೊಮ್ಮೆ ಕಾಂಡ ಸಹಿತ ಸೊಪ್ಪನ್ನು ಕತ್ತರಿಸಿ ತೆಗೆಯಬೇಕು. ಬಚ್ಚಲು ಮನೆಯ ಹೊರಗೆ ಅಥವಾ ಕೈತೋಟದಲ್ಲಿ ಸ್ವಲ್ಪ ಮಟ್ಟಿನ ನೆರಳಿನ ಜಾಗದಲ್ಲಿ ನೆಟ್ಟು ಚಪ್ಪರಕ್ಕೆ ಹಬ್ಬಲು ಬಿಡುವುದು ಉತ್ತಮ. ಮಳೆಗಾಲದಲ್ಲಿ ಹೂ ಮತ್ತು ಹಣ್ಣುಗಳನ್ನು ಬಿಡುವುದರಿಂದ ಇವುಗಳನ್ನು ಆಗಿಂದಾಗ್ಗೆ ಕತ್ತರಿಸುವುದು ಒಳ್ಳೆಯದು. ಬಚ್ಚಲು ಮನೆಯಲ್ಲಿ ಪ್ರತಿನಿತ್ಯ ಬಿಟ್ಟ ನೀರು ಹರಿದು ಹೋಗುವ ವ್ಯವಸ್ಥೆ ಮಾಡಿ. ನೆಲಗಡಲೆ ಹಿಂಡಿ ಅಥವಾ ಹಸಿರು ಸೊಪ್ಪಿನ ಸಾವಯವ ಗೊಬ್ಬರವನ್ನು ಪ್ರತಿ ತಿಂಗಳು ನಿರಂತರ ಹಾಕುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಬಸಳೆ ಸೊಪ್ಪು ಮತ್ತು ಕಾಂಡದ ಇಳುವರಿಯನ್ನು ಪಡೆಯಬಹುದಾಗಿದೆ.

— ಸಂಗಾತಿ

---

4 ನೇ ಪುಟದಿಂದ

ಕಬ್ಬಿಗರ ಕಾವ್ಯ ಜೈಮಿನಿ ಬಾರತ ಸಂಗ್ರಹ, ಶ್ರೀ ರಾಮಾಯಣ ದರ್ಶನಂ, ಹೊಸ ಗನ್ನಡ ಕಥಾ ಸಂಗ್ರಹ, ದೇಜಗೌ ಅವರ ಸಂಪಾದಿತ ಗ್ರಂಥಗಳು. ತಮ್ಮ ಆತ್ಮಕಥೆ 'ಹೋರಾಟದ ಬದುಕು' ಮತ್ತೊಂದು ಅವರ ಮೇರು ಕೃತಿ. ಎಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ಅವರು ರಚಿಸಿದ್ದಾರೆ.

ರಷ್ಯಾ, ಯೂರೋಪ್ ಮತ್ತು ಆಫ್ರಿಕಾ ದೇಶಗಳ ಪ್ರವಾಸ ಸಾಹಿತ್ಯ ಕೃತಿಗಳಲ್ಲಿ ಶೈಕ್ಷಣಿಕ ಆಸಕ್ತಿ, ಉನ್ನತ ಶಿಕ್ಷಣದ ಬಗೆಗಿನ ಅವರ ಕಾಳಜಿಯನ್ನು ಕಾಣಬಹುದು.

ಬಹುಮುಖ ಪ್ರತಿಭೆಯ 'ದೇಜಗೌ' ಅವರನ್ನು ಕರ್ನಾಟಕ ವಿಶ್ವವಿದ್ಯಾನಿಲಯ 1978ರಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ನಿವೃತ್ತರಾದಮೇಲೆ 'ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನ ಪ್ರಗತಿಗಾಗಿ ತಮ್ಮ ವಾಸದ ಮನೆಯನ್ನೇ ಧಾನಮಾಡಿದರು. ಈಗ ಅದರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ನಿವೃತ್ತಿಯ ಇಂದಿನ ವೇಳೆಯಲ್ಲೂ ಬರಹದ ದುಡಿಮೆಯನ್ನು ಮುಂದುವರಿಸಿದ್ದಾರೆ. ಅದೊಂದೇ ಬಾಳಿನಲ್ಲಿ ಸ್ಥಿರವಾದುದು ಎಂಬುದನ್ನು ಅವರು ತಿಳಿದಿದ್ದಾರೆ. ಡಾ|| ದೇಜಗೌ ಅವರ ಬದುಕು ಬರಹಗಳು ನಮ್ಮಂತಹ ಅನೇಕರಿಗೆ ಸ್ಫೂರ್ತಿ ನಿಡಿದೆ, ಮಾರ್ಗದರ್ಶನ ಮಾಡಿದೆ.

— ಪಿ. ಆರ್. ತಿಪ್ಪೇಸ್ವಾಮಿ

---

**ಗಂಡ ಸೀರೆ ತರುತ್ತಾನೆಂದು ಹೆಂಡತಿ ನಗ್ನ ಕೂತ ಹಾಗೆ.**

# ಹಕ್ಕಿಗಂಡಿ

— ಬಿ. ಆರ್. ಜೋಯಪ್ಪ

ಈರನ ತಲೆಗೂದಲು ಗುಂಗುರು. ಅದು ಅವನ ತಲೆ ಮೇಲೆ ಚಪ್ಪರದಂತೆ ವಿಶಾಲವಾಗಿ ಹರಡಿಕೊಂಡಿತ್ತು. ಒಂದು ಸೇರು ಕಾಳನ್ನು ಅವನ ತಲೆ ಮೇಲೆ ಸುರಿದರೂ ನೆಲಕ್ಕೆ ಬೀಳಲಿಕ್ಕಿಲ್ಲ. ಜನ ಅವನನ್ನು 'ಚಪ್ಪರ ತಲೆ ಈರ ಚಪ್ಪರ ತಲೆ ಈರ' ಎಂದೇ ಕರೆಯುತ್ತಿದ್ದರು.

ಹಕ್ಕಿ ಮಾಂಸದ ರುಚಿ ಹಿಡಿದ ಈರ ಕೇರೆ ಹಾವಿನ ಥರದವನು. ಹಕ್ಕಿಗಳನ್ನು ಬಿಲದಲ್ಲಿರಲಿ ಪೊಟರೆಯಲ್ಲಿರಲಿ ಬಿಡದೆ ಹಿಡಿಯುತ್ತಿದ್ದ.

ಬಿಲದ ಹಕ್ಕಿಗಳನ್ನು ಕತ್ತಲಾದ ಮೇಲೆ ಹಿಡಿಯುವುದು ರೂಢಿ. ಮೀನುಕುಳ್ಳ ಹಕ್ಕಿ ಬರೆಯ ಬಿಲದಲ್ಲಿ ವಾಸಿಸುತ್ತದೆ. ಈರ ಕೈಗೆ ಬಟ್ಟೆಯನ್ನು ಸುತ್ತಿಕೊಂಡು ಬಿಲಕ್ಕೆ ಕೈ ಹಾಕುತ್ತಿದ್ದ. ಹಕ್ಕಿ ಕುಟುಕಿಯಾತು ಅಥವಾ ಹಾವುಗೀವು ಇದ್ದರೆ.... ಎಂಬ ಭಯ! ಹಕ್ಕಿ ಸಿಕ್ಕಿದೊಡನೆ ಎಳೆದು ಕತ್ತು ಹಿಸುಕಿ ಕೊಲ್ಲುವನು.

ಮರದ ಪೊಟರೆಯಲ್ಲಿರುತ್ತಿದ್ದ ಗಿಳಿಮರಿಗಳನ್ನೂ ಬಲಿತೆಗೆಯದೆ ಬಿಡನು. ಒಮ್ಮೆ ಮರ ಹತ್ತಿ ಮರಿಯನ್ನು ಹೊರಗೆಳೆಯಲು ಯತ್ನಿಸಿದ. ಆದರೆ ಪೊಟರೆ ಚಿಕ್ಕದಾಗಿತ್ತು. ಅದರ ಬಾಯನ್ನು ಕಡಿದು ಅಗಲ ಮಾಡಿದ. ಮತ್ತೆ ಕೈ ಹಾಕಿದ. ಕುಕ್ಕಲು ಬಂದ ತಾಯಿ ಗಿಳಿಯನ್ನು ಹಿಡಿಯಲು ಕೈ ಚಾಚಿದ. ಅದು ಸಿಗದಿರಲು ಗದರಿಸಿ ಹಾರಿಸಿದ. ಪೊಟರೆಯೊಳಗಿದ್ದ ಮರಿಗಿಳಿಯನ್ನು ಹೊರಗೆಳೆದ. ಕತ್ತು ಅಮುಕಿ ನೆಲಕ್ಕೆಸೆದ. ಬಿದ್ದ ರಭಸಕ್ಕೆ ಮರಿಗಿಳಿಯ ಎದೆ ಒಡೆದಿತ್ತು. ಬೆತ್ತಲಾಗಿದ್ದ ಅದು ಒದ್ದಾಡಲಿಲ್ಲ. ಎಳೆಮೈಯ ರಕ್ತ ಚೆಲ್ಲಿತ್ತು. ಈರ ಸರಸರನೆ ಮರದಿಂದ ಇಳಿದ. ಇಳಿದನೆಂಬುದಕ್ಕಿಂತ ಜಾರಿದನೆಂದೇ ಹೇಳಬಹುದು. ಎದೆಯೊಡೆದು ಸತ್ತ ಮರಿಯನ್ನು ನೋಡಿ 'ಸಧ್ಯ ಮಾಂಸದ ತುಕುಡ ಹಾರಿಲ್ಲವಲ್ಲ'ವೆಂದುಕೊಂಡು ಜೋಪಾನವಾಗಿ ಎತ್ತಿಕೊಂಡು ಮನೆಯತ್ತ ಹೊರಟ. ತುಪ್ಪಟ ಸುಲಿವ ಕೆಲಸವೇ ಇಲ್ಲ. ಹೊಟ್ಟೆ ಬಗಿದು ಕೆಂಡದ ಮೇಲಿಟ್ಟು, ಹಾ! ತುಪ್ಪದ ಗಟ್ಟಿ ಎನ್ನುತ್ತ ತುಟಿ ನೆಕ್ಕಿಕೊಂಡ.

ಒಮ್ಮೆ ಕಾಡಿನಲ್ಲಿ ಸುತ್ತಾಡುತ್ತಿರಬೇಕಾದರೆ ಬೈನೆ ಗುತ್ತಿಯನ್ನು ನೋಡಿದ. ಬೈನೆ ಮರವನ್ನು ಕಡಿದು ತುಂಬಾ ದಿನಗಳೇ ಆಗಿದ್ದವು. ತೆರೆದ ಮಡಿಕೆಯಂತಿದ್ದ ಆ ಗುತ್ತಿಯೊಳಗೆ ಇಣುಕಿದ. ಕಾಡುಕೋಳಿ ಮೊಟ್ಟೆ ಇಕ್ಕಿದೆ. ಕೋಳಿ ಮೇಚಿಗೆ ಹೋಗಿತ್ತು. ಈರ ಮೊಟ್ಟೆಯನ್ನು ಮುಟ್ಟಲಿಲ್ಲ. ಮುಟ್ಟಿದರೆ ಕೋಳಿ ಮೊಟ್ಟೆಯ ಮೇಲೆ ಕೂತುಕೊಳ್ಳುವುದಿಲ್ಲ. ಯಾಕೆಂದರೆ ಮೊಟ್ಟೆಯ ಮೇಲೆ ಶತೃವಿನ ವಾಸನೆ ಇರುವುದನ್ನು ಕೋಳಿಯೂ ಗೊತ್ತು ಮಾಡಿ ಇತ್ತ ಬರುವುದಿಲ್ಲ ಎಂದು ಇವನಿಗೆ ಗೊತ್ತಿತ್ತು. ರಾತ್ರಿ ಬಂದು ಕೋಳಿ ಸಹಿತ ಗದ್ದಾಳ* ಮಾಡಬಹುದೆಂದು ಜೊಲ್ಲು ಸುರಿಸಿದ.

ಆ ರಾತ್ರಿ ಈರ ಜೊತೆಗೊಬ್ಬನನ್ನು ಕರೆದುಕೊಂಡು ಬೈನೆ ಗುತ್ತಿಯತ್ತ ಹೊರಟ. ಗಂವ್ ಕತ್ತಲು. ಚಾಲೆಮುಂಡನ್ನು ಒದ್ದೆ ಮಾಡಿ ಹಿಡಿದುಕೊಳ್ಳಲು ಮರೆತಿರಲಿಲ್ಲ. ಇಬ್ಬರು ಗುತ್ತಿಯನ್ನು ತಲುಪಿದರು. ಕೂಡಲೆ ಗುತ್ತಿಯೊಳಗೆ ಕೈ ಹಾಕಲು ಈರ ಹಿಂಜರಿದ. ಹಾಳಾದ ಹಾವು ಗೀವು..... ಕಡ್ಡಿ ಗೀರಿದ. ಮೆಲ್ಲ ಮೆಲ್ಲನೆ ಗುತ್ತಿಯೊಳಗೆ ಇಣುಕಿದ. ಓ! ಕೋಳಿ!, ಹಾಗೇ ಕೈ ಹಾಕಿದರೆ ಹಾರಿ ಹೋದೀತೆಂದು ಹೆದರಿದ. ಕಡ್ಡಿ ಕೆಟ್ಟಿತು. ಒದ್ದೆ ಬಟ್ಟೆಯನ್ನು ಅದರ ಮೇಲೆ ಹಾಕಿ ಕವುಚಲೆಂದು ಎರಡೂ ಕೈಗಳಿಂದಲೂ ಬಟ್ಟೆಯನ್ನು ಹಿಡಿದುಕೊಂಡು ಹತ್ತಿರ ಹತ್ತಿರ ಇನ್ನೂ ಹತ್ತಿರ ಹೋದ. ಇಡೀ ಗುತ್ತಿಯನ್ನು ಮುಚ್ಚಲು ಅದರ ಮೇಲೆ ಬಿದ್ದ. ಹಾಗೆ ಬೀಳುವುದಕ್ಕೂ ಚೆಂಡೆ ಮುಳ್ಳು ಬಟ್ಟೆಗೆ ಸಿಕ್ಕಿಕೊಳ್ಳುವುದಕ್ಕೂ ಸರಿಯಾಯಿತು. ಬಟ್ಟೆ ಮುಳ್ಳಿನಲ್ಲಿ ನೇತಾಡಿತು. ಈರ ಗುತ್ತಿಯ ಮೇಲೆ ಬಿದ್ದುಬಿಟ್ಟ. ಎದೆಗೆ ಬಲವಾದ ಹೊಡೆತ ಬಿತ್ತು. ಈರನಿಗೆ ಇದೇನೂ ಲೆಕ್ಕಕ್ಕೆ ಬರುವಂತಿರಲಿಲ್ಲ. ಎದ್ದು ಮತ್ತೆ ಅದರೊಳಗೆ ಕೈ ಹಾಕಿದ. ಕೋಳಿ ಯಾವ ಮಾಯೆಯಲ್ಲೋ ಹಾರಿ ಹೋಗಿತ್ತು. ಮೊಟ್ಟೆಗಳು ಚೂರು ಚೂರಾಗಿದ್ದವು. ಈರ ಎದೆನೋವಿನಿಂದ ನರಳಿದ.

ಇಂಥ ಈರ ಅದೆಷ್ಟೋ ಕಿರ್ಕೋಳಿಗಳನ್ನು ಹಿಡಿದಿದ್ದ. ಆ ಕೋಳಿಗಳು ಬಹು ಚುರುಕು. ಮನುಷ್ಯನ ಇರವನ್ನು ತಿಳಿದೊಡನೆ 'ಕಿರ್ ಕಿರ್ ಕಿರ್' ಎಂದು ಧ್ವನಿ ಮಾಡಿ ಹಾರಿ ಬಿಡುತ್ತವೆ. ಆದರೆ ಅಂಥವು ಸಿಡಿಗೆ ಸಿಕ್ಕಿ ಬೀಳುತ್ತಿದ್ದವು. ಕೋಳಿಗಳು ಮೇಚಿ ಮಾಡುವಲ್ಲಿ ಅಷ್ಟು ದೂರದವರೆಗೆ ಕಿರುದಾರಿ ಮಾಡುತ್ತಿದ್ದ. ಆ ದಾರಿಲಿ ಬತ್ತದ ಕಾಳನ್ನು ಹಾಕುತ್ತ ಒಂದೆಡೆ ಹೆಚ್ಚಾಗಿ ಸುರಿಯುತ್ತಿದ್ದ. ಆ ಜಾಗದಲ್ಲೇ ಸಿಡಿಹಾಕಿ ದಿನಕ್ಕೆರಡು ಸಾರಿ ನೋಡಿ ಹೋಗುತ್ತಿದ್ದ. ಸಿಡಿಗೆ ಸಿಕ್ಕಕೊಂಡ ಕೋಳಿಗಳೆಲ್ಲವೂ ಇವನಿಗೆ ಸಿಕ್ಕಿಲ್ಲ. ಕೆಲವು ಕುರ್ಕಾಗಳ * ಇಲ್ಲವೇ ಕೀರಿಗಳ* ಪಾಲಾಗುತ್ತಿದ್ದವು. ಇದನ್ನರಿತ ಈರ ಸಿಡಿಯ ಬಗ್ಗೆ ಬಹು ಕಾಳಜಿ ವಹಿಸುತ್ತಿದ್ದ.

ಅದೊಂದು ದಿನ ಕಿರುಕೋಳಿ ಸಿಡಿಗೆ ಸಿಕ್ಕಿಕೊಂಡಿತ್ತು. ಅದು ಸಿಕ್ಕಿಕೊಂಡಿದ್ದು ಕಾಲಿಗೆ. ಅದು ತಪ್ಪಿಸಿಕೊಳ್ಳಲು ರೆಕ್ಕೆ ಬಡಿದು ಬಡಿದು ಸುಸ್ತಾಗಿ ನೇತಾಡುತ್ತಿತ್ತು. ಈರ ಓಡೋಡಿ ಬಂದು ಅದನ್ನು ಹಿಡಿದುಕೊಂಡ. ಸಿಡಿಯ ಉರುಳನ್ನು ಸಡಿಲಿಸುತ್ತಿರಬೇಕಾದರೆ ಕೋಳಿ ಪ್ರಾಣದಾಸೆಯಿಂದ ರೆಕ್ಕೆ ಬಡಿದು ಹಾರಲು ಯತ್ನಿಸಿತು. ಈರನಿಗೇನಾಯ್ತೋ? 'ಅಯ್ಯೋ ನನ್ನ ಕೈ ಎಂದು ಕಿರುಚಿದ. ಇವನ ಅಂಗೈ ಸೀಳಿಹೋಗಿತ್ತು. ಕೋಳಿಯ ಕಾಲಿನ ಚೂಪಾದ ಮುಳ್ಳು ಈರನಿಗೆ ಮೂರು ಲೋಕವನ್ನು ತೋರಿಸಿತ್ತು. ಕೋಳಿ ಕ್ಷಣದಲ್ಲಿ ಹಾರಿ ಮಾಯವಾಗಿತ್ತು. ಈಗ ಕಾಡುಕೋಳಿಯೇನು ನಾಡುಕೋಳಿಯನ್ನು ಕಂಡರೂ ಆ ದಿನದ ನೆನಪು ಬಂದು 'ಈ ಕೋಳಿ ಸಾಸ* ಬೇಡಪ್ಪಾ' ಎಂದು ಕೊಳ್ಳುವನು.

ಹಕ್ಕಿಗಳಿಗೆ ಹಣ್ಣಿನ ಸುಗ್ಗಿಯ ಕಾಲವೆಂದರೆ ಈರನಿಗೆ ಆಗ ಹಕ್ಕಿ ಮಾಂಸದ ಸುಗ್ಗಿಯ ಕಾಲ. ಗೋಳಿ ಮರದ ಹಣ್ಣು ಊರಿಂದೂರಿನ ಹಕ್ಕಿಗಳನ್ನು ಆಕರ್ಷಿಸುತ್ತದೆ. ಹಳದಿ ಬಣ್ಣದ ಹಣ್ಣು ರೆಂಬೆ ರೆಂಬೆಗಳಲ್ಲಿ ಅಲಂಕಾರಗೊಂಡಿರುತ್ತದೆ. ಅಂಥ ಮರಕ್ಕೆ ಇಂಥ ಹಕ್ಕಿಗಳೇ ಎನ್ನುವಂತಿಲ್ಲ. ಹತ್ತಾರು ಬಗೆಯ ಹಕ್ಕಿಗಳು ತಮ್ಮದೇ ಧ್ವನಿಗೈಯುತ್ತಾ ಹಣ್ಣನ್ನು ಸವಿಯುತ್ತವೆ. ಆಗ ಈರನ ಕಣ್ಣು ಹಕ್ಕಿಗಳನ್ನು ಸವಿಯುತ್ತವೆ.

ಎಮ್ಮೆಗೆ ಅದರ ಕೋಡು ಭಾರವಾಗುತ್ತದೋ?

ಬಿಲ್ಲು ಕಲ್ಲಿಗೆ ಒಂದೆರಡು ಬಿದ್ದಾವು. ಆದರೆ ಉಳಿದವು? ಹಾರಿಹೋದರೆ ನಷ್ಟವಾದೀತೆಂಬ ಕೊರಗು. ಜೀವಂತ ಹಿಡಿಯಲು ಮೇಣದ ಕಡ್ಡಿ! ಹಕ್ಕಿಗಳು ನೇರ ಹಣ್ಣಿನ ಮರಕ್ಕೇ ಹಾರಿ ಬರದೆ ಪಕ್ಕದ ಮರದಲ್ಲಿ ಕುಳಿತುಕೊಳ್ಳುವುದು ಸಾಮಾನ್ಯ. ಇದನ್ನರಿತ ಈರ ಪಕ್ಕದ ಮರದ ರೆಂಬೆಗಳಲ್ಲಿ ಹತ್ತಾರು ಮೇಣದ ಕಡ್ಡಿಗಳನ್ನಿಟ್ಟು, ರೆಕ್ಕೆ ಚಡಪಡಿಸಿ ಬೀಳುವ ಭೋಜನ್ನು ನೋಡುವನು. ಭರ್ರೆಂದು ಹಾರಿ ಕುಳಿತ ಹಕ್ಕಿಗಳು ಪಕ್ಕದ ಹಣ್ಣಿನ ಮರದತ್ತ ಹಾರಲು ಪ್ರಯತ್ನಿಸುತ್ತವೆ. ಕಾಲಿಗೆ ಅಂಟಿಕೊಂಡ ಅಂಟನ್ನು ಬಿಡಿಸಲು ಕುಕ್ಕುತ್ತವೆ. ರೆಕ್ಕೆ ಬಡಿಯುತ್ತವೆ. ಕಾಲು, ರೆಕ್ಕೆ, ಪುಕ್ಕ-ಕೊಕ್ಕು, ಮೇಣದಲ್ಲಿ ಅಂಟಿಕೊಂಡು ಸುರುಟಿ ಬೀಳುತ್ತದೆ. ಈರ ಒಂದೊಂದಾಗಿ ಹಿಡಿದು ಕತ್ತು ಮುರಿದು ಚೀಲಕ್ಕೆ ತುಂಬಿಕೊಳ್ಳುತ್ತಾನೆ. ಹಲಸಿನ ಮೇಣಕ್ಕೆ ಗೇರು ಬೀಜದ ಎಣ್ಣೆಯನ್ನು ಮಿಶ್ರಮಾಡಿದರೆ ಮೇಣ ಚಳಿಗೂ ಬಿಸಿಗೂ ಹಾಳಾಗದಂತಿರುತ್ತದೆ. ಈ ರೀತಿ ಮೇಣ ತಯಾರಿಸಿ ಕಡ್ಡಿಗಳಿಗೆ ಅದನ್ನು ಚೆನ್ನಾಗಿ ಸವರಿ ಹಕ್ಕಿ ಹಿಡಿವ ಈರನ ತಲೆ ಅಂದರೆ ತಲೆ.

ಒಮ್ಮೆ ಬೆಟ್ಟತ್ತೂರಿನ ಹಕ್ಕಿಗಂಡಿಯ ವಿಚಾರ ಇವನ ಕಿವಿಗೆ ಬಿದ್ದು ಮುಖ ಅರಳಿಸಿತ್ತು. ಒಂದೇ ದಿನದಲ್ಲಿ ನೂರಾರು ಹಕ್ಕಿಗಳನ್ನು ಹಿಡಿದು ಮಾರಿ ಹಣ ಸಂಪಾದಿಸುವ ಕನಸು ಕಂಡ. ಕೊಡಗಿನ ಸುಂದರವಾದ ಸ್ಥಳಗಳಲ್ಲಿ ಬೆಟ್ಟತ್ತೂರು ಒಂದು. ಮಳೆಗಾಲದಲ್ಲಿ ಹಕ್ಕಿಗಳು ಜೀವ ಉಳಿಸಿಕೊಳ್ಳುವುದೇ ಹೆಚ್ಚು. ಆ ಚಳಿ, ಆ ಮಳೆ, ಆ ಗಾಳಿ! ಕ್ಷಣವೊಂದು ಯುಗದಂತೆ ಕಳೆದು ಬದುಕುಳಿದ ಹಕ್ಕಿಗಳು ಮಳೆ ನಿಂತೊಡನೆ ಆಹಾರಕ್ಕಾಗಿ ಊರಿಂದೂರಿಗೆ ಸಾಗುತ್ತವೆ. ಕಾಳಿಂಗ ಹಕ್ಕಿಗಳಂತೂ ಕಂಚಿನ ಸ್ವರದಲ್ಲಿ ಕೂಗುತ್ತ ಏರಿ ಇಳಿದು ಹಾರುತ್ತವೆ. ಒಮ್ಮೆ 'ಕೀಂವ್' ಎಂದು ಧ್ವನಿ ಗೈದರೆ ಬೆಟ್ಟಗುಡ್ಡಗಳಲ್ಲಿ ಪ್ರತಿಧ್ವನಿ!

ಬೆಟ್ಟತ್ತೂರಿನ ಬೆಟ್ಟಗಳ ಸಾಲಿನಲ್ಲಿಯ ಕಣಿವೆಗಳೇ ಹಕ್ಕಿ ಹಾರುವ ಸುಂದರ ಮಾರ್ಗ. ಮಳೆಗಾಲದಲ್ಲಿ ಕವಳ ಮುಚ್ಚಿಕೊಂಡರೆ ಮುಂದೆ ಏನೇನೂ ಕಾಣದು. ಅಂಥದ್ದರಲ್ಲಿ ಕಣಿವೆಯ ಆಚೀಚೆಯ ಮರಗಳಿಗೆ ಸೇರದಂತೆ ಬಲೆಯನ್ನು ಕಟ್ಟಿದರೆ ಏನಾದೀತು?

ಈರನ ಬಳಗ ಇದನ್ನೆಲ್ಲಾ ಗ್ರಹಿಸಿದ್ದರು. ಮಳೆಯಿಲ್ಲದ ಆದರೆ ಕವಳ ತುಂಬಿದ ದಿನ ಆ ಕಂಡಿಯಲ್ಲಿ ಬಲೆಯೊಡ್ಡಲು ಅತ್ತ ಹೊರಟರು. ಬಲೆ ಕಟ್ಟುವ ಕೆಲಸವೂ ಆಯಿತು. ಅದರ ಬೆನ್ನಲ್ಲೇ ಮಳೆಯೂ ಶುರುವಾಯಿತು. ಕೆಲಸ ಕೆಟ್ಟಿತಲ್ಲಾ ಎಂದು ಚಿಂತಿಸಿದರು. ಹಕ್ಕಿಗಳ ಸವಾರಿ ಬರಲೇ ಇಲ್ಲ. ಒಂದರ್ಧಗಂಟೆ ಜಡಿದ ಮಳೆ ನಿಂತಿತು. ವಾತಾವರಣ ತಿಳಿಯಾಗುತ್ತಾ ಬಂತು. ಸೂರ್ಯ ಕಣ್ಣು ತೆರೆದ. ಕಾಳಿಂಗ ಹಕ್ಕಿಗಳ ಧ್ವನಿಗೆ ಈರನ ಗುಂಪು ಚಳಿಯಲ್ಲೂ ಕುಣಿಯುವಂತೆ ಮಾಡಿತು. ಗುಂಪು ಹಾರುತ್ತಾ ಬರುತ್ತಿದ್ದಂತೆ ಇನ್ನೇನು ಬಲೆಯೊಳಗೆ ಬೀಳಬೇಕು. ಆದರೆ ಹಾಗೆ ಆಗಲಿಲ್ಲ. ಕೆಲವು ಹಕ್ಕಿಗಳು ಬಲೆಗಿಂತ ಕೆಳಗೆ ಹಾರಿದವು. ಇನ್ನು ಕೆಲವು ಬಲೆಗಿಂತ ಮೇಲೆ ಹಾರಿಹೋದವು. ಆ ಕ್ಷಣದಲ್ಲಿ ಮತ್ತೂ ಒಂದು ಗುಂಪು ಹಾರಿ ಬಂದಿತು. ಬಲೆಯ ಕೆಳಗೆ ಮತ್ತು ಮೇಲೆ ಹಾರಿದವು. ಬೇಟೆಗಾರರು ಆಕಾಶ ನೋಡಿ ತಲೆ ಕೆರೆದುಕೊಂಡರು. ಈ ನಡುವೆ ಈರನ ಬೇಟೆಯ ತಲೆಗೆ ಹೊಸದೊಂದು ಉಪಾಯ ಹಾರಿಬಂತು. ಒಂದಿಬ್ಬರನ್ನು ಬಲೆ ಕಟ್ಟಿದ ಮರಕ್ಕಿಂತ ದೂರದಲ್ಲಿ ನಿಲ್ಲಿಸಿದ. ಏಕೆಂದರೆ ಹಕ್ಕಿಗಳು ಬಹು ಸೂಕ್ಷ್ಮ. ತಾವು ಹಾರುತ್ತ ಬರುವಾಗ ಏನಾದರೂ ಅಡಚಣೆ ಕಂಡುಬಂದರೆ ಕೂಡಲೆ ತಮ್ಮ ಮಾರ್ಗವನ್ನು ಬದಲಿಸಿಬಿಡುತ್ತವೆ. ಈಗ ಈರನ ಬಲೆಯೂ ಅವುಗಳಿಗೆ ಅಡಚಣೆ ತಾನೆ? ಬಲೆಯನ್ನು ಕಂಡೊಡನೆ ಹಕ್ಕಿಗಳು ಬಲೆಗಿಂತಲೂ ಕೆಳಗೆ ಹಾರಬೇಕು. ಆದರೆ ಹಾರುವಂತಿಲ್ಲ, ಈರನ ಗುಂಪು ನಿಂತಿದೆ. ಬಲೆಗಿಂತ ಮೇಲೆ ಹಾರಬೇಕು ಆಗ ಇವರು ಆ ಕಡೆಗೆ ಬಡಿಗೆಯನ್ನು ಎಸೆಯಬೇಕು. ಬೇರೆ ದಾರಿ ಕಾಣದ ಹಕ್ಕಿಗಳು ನೇರ ಬಲೆಯತ್ತಲೇ ನುಗ್ಗುತ್ತವೆ. ಹೀಗಿರುವಾಗ ಹಕ್ಕಿಗಳು ಹಾರಿ ಬರುವುದು ಕಾಣಿಸಿತು. ಈರನ ಗುಂಪು ಬಲೆಯ ಮೇಲ್ಭಾಗದತ್ತ ಬಡಿಗೆ ಎಸೆದರು. ಆಗ ಹಕ್ಕಿಗಳು ಮೇಲೆಯೂ ಹಾರಲಾಗದೆ ತೀರಾ ಕೆಳಗೂ ಹಾರಲಾಗದೆ ನೇರ ಬಲೆಯತ್ತಲೇ ನುಗ್ಗಿದವು. ಇಡೀ ಗುಂಪೇ ಬಲೆಯೊಳಗೆ ಸಿಕ್ಕಿಕೊಂಡಿತು.

ಈರ ಸಂಪತ್ತು ಸಿಕ್ಕಂತೆ ಸರಸರನೆ ಮರವನ್ನೇರಿ ಬಲೆಯನ್ನು ಬಿಚ್ಚಿದ. ಹಕ್ಕಿಗಳ ಗುಡ್ಡೆಯೇ ಅವನ ಹಿಡಿಯೊಳಗಿತ್ತು. ಹಾಗೆಯೇ ಅವನ್ನು ಮನೆಗೆ ಹೊತ್ತು ತಂದರು. ಹಕ್ಕಿಗಳ ಕಿಚಕಿಚ ಧ್ವನಿ ಈರನ ಪರಿವಾರಕ್ಕೆ ಸಂಗೀತವಾಗಲಿಲ್ಲ. ವಾರಗಟ್ಟಲೆ ಮಳೆಯಿಂದಾಗಿ ಹಸಿವಿನಿಂದ ಕಂಗಾಲಾಗಿದ್ದ ಆ ಹಸಿವಿನ ಹಕ್ಕಿಗಳು ಈರನ ಪರಿವಾರದ ಅಂದಿನ ಹಸಿವನ್ನು ನೀಗಿಸಿದವು.

ಈರ ಥರಾವರಿಯ ಮನುಷ್ಯ. ಅವನು ಇಂಥ ಹಕ್ಕಿಯನ್ನೇ ಹಿಡಿಯಬೇಕೆಂಬ ನಿಯಮದವನೇನಲ್ಲ. ಇನ್ನೊಮ್ಮೆ:

ಅವರಿವರ ಗದ್ದೆಯಲ್ಲಿ ಸಿಡಿ ಹಾಕಿ ಹಕ್ಕಿಗಳನ್ನು ಹಿಡಿವ ಹುಚ್ಚು ಈರನಿಗಿತ್ತು. ಒಂದು ದಿನ ಇವನ ಸಿಡಿಗೆ ಕೊಕ್ಕರೆಯೊಂದು ಸಿಕ್ಕಿ ಬಿದ್ದು ರೆಕ್ಕೆ ಬಡಿದುಕೊಳ್ಳುತ್ತಿತ್ತು. ಈರ ಓಡಿದ. ಹಿಡಿದುಕೊಂಡು ಅದರ ರೆಕ್ಕೆಯ ಗರಿಗಳನ್ನು ಕಿತ್ತ. ಅದನ್ನು ಕೊಲ್ಲದೆ ಮನೆಯತ್ತ ತಂದು ಅಂಗಳದಲ್ಲಿ ಬಿಟ್ಟ. ಆ ಕೊಕ್ಕರೆ(ಪೋಳೆ) ಹಾರಲಿಲ್ಲ, ಓಡಿತು. ಬಹು ದೂರ ಓಡಿತು. ಇಂವ ಜೊತೆಯಲ್ಲೇ ಓಡಿದ. ಕೈಗೆ ಸಿಗಲಿಲ. ಇನ್ನು ಇದು ತಪ್ಪಿಸಿಕೊಳ್ಳುತ್ತದೆಂದು ಕಲ್ಲು ಹೊಡೆದ. ಕೊಕ್ಕರೆ ರೆಕ್ಕೆ ಬಡಿದಾಡಿ ಉರುಳಿತು. ಅದು ಸತ್ತಿರಲಿಲ್ಲ. ಕೊಲ್ಲದೆ ಅದನ್ನು ತಂದು ಮಗುವಿನ ಕೈಯಲ್ಲಿತ್ತ. ಮಗುವಿಗೆ ಪರಮಾನಂದ. ಬಿಳಿಯ ಬಣ್ಣದ ಕೊಕ್ಕರೆಯೊಡನೆ ಆಟಕ್ಕಿಳಿಯಿತು. ರೆಕ್ಕೆ-ಗರಿ ಕಳೆದುಕೊಂಡ ಕೊಕ್ಕರೆ ಮೊದಲೇ ನರಳಾಡಿತ್ತು. ಅನಂತರ ಹೊಡೆತ ತಿಂದು ನರಳಿತ್ತು. ಅದಕ್ಕೂ ಮೊದಲು ಸಿಡಿಯಲ್ಲಿ ಸಿಕ್ಕಿ ಕೊಸರಾಡಿ ಆಯಾಸಪಟ್ಟಿತ್ತು. ಅದಕ್ಕಿಂತಲೂ ಮುಖ್ಯ ಆ ಕೊಕ್ಕರೆ ಹಸಿವಿನಿಂದ ಬಳಲಿತ್ತು. ಇಂಥ ಕೊಕ್ಕರೆ ಈಗ ಪುಟಾಣಿಯ ಕೈಸೆರೆ. ಬದುಕುವ ಆಸೆಗಾಗಿ ಕಾತರಿಸಿದ್ದ ಅದರ ಕಣ್ಣಿಗೆ ಫಳಫಳನೆ ಹೊಳೆವ ಮಗುವಿನ ಕಣ್ಣು ಹೇಗೆ ಕಂಡಿತೋ ಏನೋ? ತನ್ನ ನೀಳವಾದ ಕುತ್ತಿಗೆಯನ್ನು ನೀಡಿ ಕೊಕ್ಕು ಹಾಕಿ ಎಳೆಯಿತು. ಮಗುವಿನ ಕಣ್ಣ ಗೋಲಿ ಇದರ ಹೊಟ್ಟೆ ಸೇರಿತು!

---

* ಗದ್ದಾಳ-ವಿಶೇಷ. * ಕುರ್ಕಾ- ಗುಳ್ಳೆನರಿ* ಕೀರಿ- ಮುಂಗುಸಿ
*ಸಾಸ- ಸಾಹಸ

## ಸಂಗಾತಿ ಭವಿಷ್ಯ : ಫೆಬ್ರವರಿ 1- 15ರ ತನಕ

ಜ್ಯೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡು

**ಮೇಷ ರಾಶಿ** : ದೈವಾನು ಕೂಲವಿಲ್ಲ ಹಣಕಾಸಿನ ವ್ಯವಹಾರದಲ್ಲಿ ಅಡ್ಡಿ ಆತಂಕಗಳು ಬರುವುದು. ಸಂಸಾರವಲಯದಲ್ಲಿ ಕಿರಿಕಿರಿ ತಪ್ಪಿದ್ದಲ್ಲ. ದೇವತಾರಾಧನೆ ಮಾಡಿಕೊಂಡು ಬನ್ನಿ.

**ವೃಷಭ ರಾಶಿ** : ದೈವಾನುಕೂಲವಿಲ್ಲ. ಸ್ವಂತದವರಿಂದ ಅಪವಾದ ಕೇಳಲಿದ್ದೀರಿ. ಅನಾರೋಗ್ಯ ಕಾಡುವುದು. ಹಣಕಾಸಿನ ವ್ಯವಹಾರದಲ್ಲಿ ನಷ್ಟ ಅನುಭವಿಸುವಿರಿ. ಶನಿ ಜಪಮಾಡಿಕೊಂಡು ಬನ್ನಿ.

**ಮಿಥುನ ರಾಶಿ** : ದೈವಾನು ಕೂಲವಿದೆ. ಹಣಕಾಸಿನ ಸ್ಥಿತಿ ಉತ್ತಗೊಳ್ಳುವುದು. ಗೃಹವಲಯದಲ್ಲಿ ಶಾಂತಿಯಿದೆ. ಸ್ನೇಹಿತರಿಂದ ಕಿರಿಕಿರಿ ಇರುವುದು. ಅನಾವಶ್ಯಕ ವ್ಯವಹಾರಕ್ಕೆ ಕೈ ಹಾಕಬೇಡಿ.

**ಕರ್ಕಾಟಕ ರಾಶಿ** : ದೈವಾನುಕೂಲವಿಲ್ಲ ಅನಾರೋಗ್ಯ ಕಾಡಲಿದೆ. ಹೊಟ್ಟೆ ನೋವು ಸಂಬಂಧ ರೋಗಬರಬಹುದು. ಅಪಮಾನಕ್ಕೆ ಒಳಗಾಗುವಿರಿ. ಸ್ವಜನರಿಂದ ಕಿರುಕುಳ ತಪ್ಪಿದ್ದಲ್ಲ. ಹಣಕಾಸು ಸ್ಥಿತಿ ಸುಧಾರಿಸುವುದು.

**ಸಿಂಹ ರಾಶಿ** : ದೈವಾನುಕೂಲವಿದೆ. ಗೃಹವಲಯದಲ್ಲಿ ತುಸು ನೆಮ್ಮದಿ. ಹಣಕಾಸಿನ ವ್ಯವಹಾರದಲ್ಲಿ ಖರ್ಚುವೆಚ್ಚಗಳು ಹೆಚ್ಚುವುದು. ಶತ್ರುಗಳಿಂದ ಮುಕ್ತರಾಗುವಿರಿ.

**ಕನ್ಯಾರಾಶಿ** : ದೈವಾನುಕೂಲವಿಲ್ಲ. ಗೃಹವಲಯದಲ್ಲಿ ಕಿರಿಕಿರಿ ತಪ್ಪಿದ್ದಲ್ಲ. ವಂಚನೆಗೆ ಒಳಗಾಗುವಿರಿ. ವಾಹನದಲ್ಲಿ ಸಂಚರಿಸುವಾಗ ಎಚ್ಚರ ಅಗತ್ಯ. ದೇವತಾರಾಧನೆ ಮಾಡಿ.

**ತುಲಾ ರಾಶಿ** : ದೈವಾನುಕೂಲವಿಲ್ಲ. ಗೃಹವಲಯದಲ್ಲಿ ಕಿರಿ ಕಿರಿ ತಪ್ಪಿದ್ದಲ್ಲ. ಹಣಕಾಸಿನ ವ್ಯವಹಾರದಲ್ಲಿ ಖರ್ಚು ಹೆಚ್ಚಾಗುವುದು. ಮನಸ್ಸಿಗೆ ನೆಮ್ಮದಿ ಇಲ್ಲ. ಸಂತಾನಭಾಗ್ಯ ದೊರೆಯುವುದು. ದೇವತಾರಾಧನೆ ಮಾಡಿಕೊಂಡು ಬಂದಲ್ಲಿ ಕ್ಷೇಮಕಾರಕ.

**ವೃಶ್ಚಿಕ ರಾಶಿ** : ದೈವಾನುಕೂಲವಿದೆ. ಹಣಕಾಸಿನ ವ್ಯವಹಾರದಲ್ಲಿ ತುಂಬಾ ಲಾಭಾಂಶವಿದೆ. ದೇವರ ಕೃಪೆಗೆ ಒಳಗಾಗುವಿರಿ. ಗೃಹವಲಯದಲ್ಲಿ ನೆಮ್ಮದಿ. ಶತ್ರುಗಳು ದೂರಾಗುವರು.

**ಧನಸ್ಸು ರಾಶಿ** : ದೈವಾನುಕೂಲವಿಲ್ಲ. ಪ್ರಯಾಣದಿಂದ ತೊಂದರೆ. ಅನ್ಯರಿಂದ ವಂಚಿತರಾಗುವಿರಿ. ಅನಾವಶ್ಯಕ ತೊಂದರೆ ಇದೆ. ಹಣಕಾಸು ವ್ಯವಹಾರದಲ್ಲಿ ಸ್ವಲ್ಪ ನೆಮ್ಮದಿ. ನಿಮ್ಮ ಸಿಟ್ಟಿನಿಂದ ಅಲ್ಲೋಲ ಕಲ್ಲೋಲವಾಗುವುದು.

**ಮಕರ ರಾಶಿ** : ದೈವಾನು ಕೂಲವಿದೆ. ಗೃಹವಲಯದಲ್ಲಿ ಕಿರಿ ಕಿರಿ ತಪ್ಪಿದ್ದಲ್ಲ. ಅನೇಕ ಮೂಲಗಳಿಂದ ಹಣವು ಕೈಗೂಡುವುದು. ಸಮಾಜದಲ್ಲಿ ಗೌರವ ಕೀರ್ತಿ ಲಭಿಸುವುದು. ಶನಿಯಾರಾಧನೆ ಮಾಡಿ.

**ಕುಂಭ ರಾಶಿ** : ದೈವಾನುಕೂಲವಿಲ್ಲ. ಸಂಶಯ ಬಂದ ವ್ಯವಹಾರ ಮಾಡದಿರಿ. ಪಂಚೇಂದ್ರಿಯಗಳಿಗೆ ಕಡಿವಾಣ ಹಾಕಿ ವ್ಯವಹರಿಸಿ. ಮೃತ್ಯುಂಜಯ ಜಪ ಮಾಡಿಕೊಂಡು ಬಂದಲ್ಲಿ ಉತ್ತಮ.

**ಮೀನ ರಾಶಿ** : ದೈವಾನುಕೂಲವಿದೆ. ಗೃಹದಲ್ಲಿ ಮಂಗಳಕರ ವಾತಾವರಣ. ಹಣಕಾಸು ಸ್ಥಿತಿ ಲಾಭಾಂಶವಾಗುವುದು. ಹೊಸ ಮಿತ್ರರು ಭೇಟಿಯಾಗುವರು. ಮನಸ್ಸಿಗೆ ನೆಮ್ಮದಿ.

---

## ಜನವರಿ 26 ರ ಮಹತ್ವಗಳು

ಸಂಗ್ರಹ : ಆಜಡ್ಕ ರಾಣಿ ಬಾಲಕೃಷ್ಣ,
ಕುಶಾಲನಗರ.

1) ಜನವರಿ 26 — 1539ರಂದು ಹುಮಾಯೂನನು ಶೇರ್ ಷಾಹನನ್ನು ಸೋಲಿಸಿದನು.
2) ಜನವರಿ 26 — 1554ರಂದು ಜಹಾಂಗಿರನ ಜನನವಾಯಿತು.
3) ಜನವರಿ 26 — 1632ರಂದು ಇಂಗ್ಲೀಷರು ಪ್ರಥಮ ಬಾರಿಗೆ ಕಾಬೂಲನ್ನು ತಲುಪಿದರು.
4) ಜನವರಿ 26 — 1730ರಂದು ನಾದಿರ್‌ಶಹನು ಭಾರತದ ರಾಜಧಾನಿ ದಿಲ್ಲಿಯನ್ನು ಪ್ರವೇಶಿಸಿದನು.
5) ಜನವರಿ 26 — 1762ರಂದು ಟಿಪ್ಪುವಿನೊಡನೆ ಇಂಗ್ಲೀಷರ ಕಾಳಗವಾಯಿತು.
6) ಜನವರಿ 26 — 1869ರಂದು ಸೂಯೆಜ್ ಕಾಲುವೆಯ ನಿರ್ಮಾಣವಾಯ್ತು.
7) ಜನವರಿ 26 — 1879ರಂದು ಪ್ರಥಮ ರೈಲು ಕಲ್ಕತ್ತದಿಂದ ಮುಂಬಯಿತನಕ ಬಂದಿತು.
8) ಜನವರಿ 26 — 1950ರಂದು ರಂದು ಭಾರತದಲ್ಲಿ ಗಣರಾಜ್ಯವೆಂದು ಘೋಷಿಸಲ್ಪಟ್ಟಿತ್ತು.

---

**ನೂರು ರೋಗಿಯವರನ್ನು ಕೊಂದು ಒಂದು ವೈದ್ಯನಾದ ಹಾಗೆ.**

---

# ಕ್ಷಣ ಕಾಲದ ಮರಣ

80 ವರ್ಷದ ಮುದುಕನೊಬ್ಬ ಬಾಯಿಗೆ ಬಟ್ಟೆ ತುರುಕಿಸಿಕೊಳ್ಳುವುದರ ಮೂಲಕ ಆತ್ಮಹತ್ಯೆ ಮಾಡಿಕೊಂಡ. ವೈದ್ಯರು ಆತನು ಸತ್ತಿದ್ದಾನೆಂದು ದೃಢೀಕರಿಸಿದರು. ಜನರು ಆತನ ಅಂತ್ಯ ಸಂಸ್ಕಾರ ಮಾಡಲು ಸಿದ್ಧತೆ ನಡೆಸಿ ಚಿತೆಯ ಮೇಲೆ ದೇಹವನ್ನಿರಿಸಿದರು. ಕೂಡಲೇ ವ್ಯಕ್ತಿಯು ಎಚ್ಚೆತ್ತು ಕುಳಿತು ಕೊಂಡು ಯಾರ ಸಹಾಯವಿಲ್ಲದೆ ಮನೆ ಕಡೆ ನಡೆದ!

ಕೆಲವೊಂದು ಬಾರಿ ಜನರು ವ್ಯಕ್ತಿ ಸತ್ತು ಹೋಗಿದ್ದಾನೆಂದು ಭಾವಿಸಿ ಅಂತ್ಯಕ್ರಿಯೆ ಶುರುಮಾಡುವಾಗ ವ್ಯಕ್ತಿ ಜೀವಿತವಾಗುವ ಈ ರೀತಿಯ ತೀರಾ ಅಪರೂಪದ ಘಟನೆಗಳನ್ನು ನೀವು ಕೇಳಿರಬಹುದು. ಇದು ಸಾಧ್ಯವೆ?

ಉಸಿರಾಟ ಮತ್ತು ರಕ್ತ ಪರಿಚಲನಾ ಕ್ರಿಯೆಗಳು ಜೀವತ್ವದ ಲಕ್ಷಣಗಳು. ಈ ಎರಡು ಕ್ರಿಯೆಗಳು ಕೆಲ ಸಂದರ್ಭಗಳಲ್ಲಿ ಸ್ವಲ್ಪ ಸಮಯದವರೆಗೆ ತಾತ್ಕಾಲಿಕವಾಗಿ ನಿಂತು ಹೋಗಬಹುದು. ಆಗ ನಾವು ವ್ಯಕ್ತಿಯು ಸತ್ತಿದ್ದಾನೆಂದು ಭಾವಿಸುತ್ತೇವೆ. ಆದರೆ ಸ್ವಲ್ಪ ಸಮಯದ ಅನಂತರ ವ್ಯಕ್ತಿಯು ಪುನಃ ಮೊದಲಿನಂತಾಗುತ್ತಾನೆ.

ಅರಿವಳಿಕೆ(Anaesthesia) ನೀಡಿದ ಬಳಿಕ, ನೀರಿನಲ್ಲಿ ಮುಳುಗಿದ ವ್ಯಕ್ತಿ, ವಿದ್ಯುತ್ ಶಾಕ್, ಆಗತಾನೆ ಜನಿಸಿದ ಮಗು, ಅತಿಯಾದ ಆಲ್ಕೋಹಾಲ್ ಅಥವಾ ಇತರ ವಿಷ ಸೇವನೆ, ಯಾವುದೇ ತೆರನಾದ ಶಾಕ್ ಮುಂತಾದ ಕೆಲ ಸಂದರ್ಭಗಳಲ್ಲಿ ಇದು ಕಂಡು ಬರುತ್ತದೆ.

ಇನ್ನು ಕೆಲ ವ್ಯಕ್ತಿಗಳು ತಾತ್ಕಾಲಿಕವಾಗಿ ಕೆಲ ನಿಮಿಷಗಳ ವರೆಗೆ ಈ ಕ್ರಿಯೆಗಳನ್ನು ನಿಲ್ಲಿಸಿಕೊಳ್ಳುವ ಅಭ್ಯಾಸ ಬೆಳೆಸಿ ಕೊಂಡಿರುತ್ತಾರೆ.

ಉದಾ :- ಯೋಗಿಗಳು ಕೆಳಗಿನ ಉದಾಹರಣೆಯನ್ನು ಗಮನಿಸಿ —

'ಕಾರ್ಲ್‌ಟೌನ್‌ಸೆಂಟ್' ಎಂಬ ಯೋಗಿ ಒಮ್ಮೆ ಡಾ|| ಜಾರ್ಜ್ ಎಂ. ಡಿ., ಎಫ್. ಆರ್. ಸಿ. ಪಿ., ಎಫ್. ಆರ್. ಎಸ್. ಹಾಗೂ ಬಳಗದ ವೈದ್ಯರನ್ನು ಬರಹೇಳಿದನು. ವೈದ್ಯರು ಆತನ ನಾಡಿ ಬಡಿತವನ್ನು ಹಾಗೂ ಉಸಿರಾಟ ಕ್ರಿಯೆಯನ್ನು ಪರೀಕ್ಷಿಸಿದರು. ಇದ್ದಕ್ಕಿದ್ದ ಹಾಗೆಯೇ ಆತನ ಹೃದಯ ಬಡಿತ, ಉಸಿರಾಟ ಕ್ರಿಯೆ ನಿಂತು ಹೋಯ್ತು. ಜೀವತ್ವದ ಲಕ್ಷಣವೇ ಆತನಲ್ಲಿರಲಿಲ್ಲ. ವೈದ್ಯರು ಆತ ಸತ್ತು ಹೋಗಿದ್ದಾನೆಂದೇ ಭಾವಿಸಿ ಅಲ್ಲಿಂದ ಹೊರಡುವವರಿದ್ದರು! ಆದರೆ ಆಗ ಆತನ ದೇಹ ಅಲುಗಾಡ ತೊಡಗಿತು, ಹೃದಯ ಬಡಿತ ಮತ್ತೆ ಬಂತು! ವೈದ್ಯರು ಸಮಾಧಾನದಿಂದ ನಿಟ್ಟುಸಿರು ಬಿಟ್ಟರು. !!

— ಡಾ|| ಪ್ರವೀಣ ಯನ್. ಎಸ್.
MD, DNB ಕೇರಳ.

## ಇರ್ಪು

ಆಹಾ ! ಎಂತಹ ಸುಂದರ,
ಆ... ರಮ್ಯ ಪರಿಸರ..
ಸಾವೇರಿದೆವು ಆ ಬೆಟ್ಟ
ತಡೆಯ್ಲಾದೆವು ಸಂಕಷ್ಟ

ಹತ್ತಿದೆವು ಏರುದಾರಿ,
ಹೇಗೇಳಲಿ ಆ ಪರಿ?
ಸೆಳೆಯುತ್ತಿತ್ತು ಕಣ್ಮನ,
ತಣಿಯುತ್ತಿತ್ತು ಮೈಮನ,

ಹಾ ! ಲಕ್ಷ್ಮಣ ತೀರ್ಥ,
ಎನಿತು ಸುಂದರ ಜಲಪಾತ,
ಆ ಬೆಡಗಿಯ ನರ್ತನ..,
ಸುತ್ತ ಅಮೃತ ಸಿಂಚನ,

ಬಂಡೆಯಿಂದ ಬಂಡೆಗೆ,
ಎಂಥ ಸೊಬಗು ನಿನಗೆ!
ನಿನಗಿಲ್ಲ ಭೇದ -ಭಾವ,
ಯಾರಾದರೇನು? ಬಲ್ಲಿದ ಬಡವ!

ಬೇಗುದಿಯ ಮನವ,
ಬೆವರಿದ ತನುವ,
ನೀ ತಣಿಸುವೆ.....,
ನಮ್ಮ ನಲಿಸುವೆ.....

ಹೇಗೇಳಲಿ? ಏನ್ಹೇಳಲಿ?
ಭಾವಗಳು ಅಸಂಖ್ಯೆಯಲಿ.
ಸವಿ-ಸವಿಯುತಾ,
ನಲಿ-ನಲಿಯುತಾ...,

ನನಗೆ ಅರಿಯದು,
ವೇಳೆ ಸರಿದದು.
ಹೇಗೇಳಲೆನ್ನ ಬವಣೆ
ಹತ್ತುತಿತ್ತಲ್ಲಾ ಸುತ್ತಾ ಜಿಗಣೆ

ಆ ನೀರ ರಸದಾಟ,
ಸಿಕ್ಕ.. ಆ ರಸದೂಟ,
ಮರೆಯ ಬಲ್ಲೆನೆ..?
ನೆನೆಯದಿರುವೆನೆ...?

— ಮೂಡಗದ್ದೆ ಕೃಪಾ ಈರಪ್ಪ
ತಿತಿಮತಿ.

ಅಡಕೆಯಾಗಿರುವಾಗ ಮುಗ್ಗುಲಲ್ಲಿಟ್ಟು ಕೊಳ್ಳಬಹುದು, ಮರವಾದರೆ ಸಾಧ್ಯವೋ ?

# ವಾಂಟೆಡ್ ಮಿಸ್ಟರ್ ರಾಜು : [ನಮ್ಮ ರಾಜು ಮುಂಜ ಕಥೆ]

ಲೇಖನ : ಶಂಕರನ ಬಸಪ್ಪ

ಧಾರಾವಾಯಿ - 26

ಕಳ್ದ ಸಂಚಿಕೆಲಿ ......

ಗಣಪತಿ ಅಜ್ಜಂಗೆ ಅವರ ಮಗಳ್ನ ಮದ್ವೆಗೋಸ್ಕರ ವಳ್ಳೆ ಬಟ್ಟೆ ಬರೆಗಳ ಕಮ್ಮಿ ಬೆಲೆಗೆ ಕೊಡ್ಸಿತ್. ಮಾರನೆದಿನ ಬೆಳಿಗ್ಗೆ ಹೋಟೆಲ್ ರಮ್ಮಲಿ ತಿಂಡಿ ತಿಂಬಕೆ ಕುದ್ದಿರ್‌ಕಾಕನ ಒಂದ್ ಮನೆ ಮಾರಾಟ ವ್ಯವಹಾರದ ಮಾತ್‌ಕಥೆನ ಕೇಳ್ಸ್ ಕಂಡ Mr. ರಾಜು, ಆ ಪಾರ್ಟಿಗಳಿಗೆ ಗೊತ್ತಾಗದಂಗೆ ಅವುಕಿಂತ ಮೊದ್ಲೆ ಹೋಗಿ ಆ ಪಾರ್ಟಿಗೆ ಈ ಮನೆನ ಕೊಡ್ಸಿ ಈ ವ್ಯವಹಾರಲಿ ಒಳ್ಳೆ ಕಮಿಷನ್ ಹಣನ ಸಂಪಾದಿಸಿದೆ. ಈಗ ಅಂವಂಗೆ ಕುಂಟಿ ಶಾಂತಿ ಗೂಡೆನ ನೋಡಿಕೆ ಆಸೆ ಆದೆ........

ಮುಂದಕೆ ........

Mr. Raju ಹಾಸಿಗೆಲಿ ಮಲಗಿದಂಗೆ ಮೊದ್ಲ್ ಒಂದ್ ಸಾರಿ ತನ್ನ ಕಣ್ಣಿಗೆ ಕಾಣದ ಗುರುನ ವಂದಿಸಿಕಂಡ್ ಇಂ ದ್‌ನ ನನ್ನ ಕರ್ತವ್ಯಲಿ ಲೋಪ ಆಗಿದ್ರೆ ಕ್ಷಮಿಸಿ ಮುಂದಕ್ಕೆ ವಳ್ಳೆ ಜ್ಞಾನ ಕೊಡು ಮಹಾಗುರುವೇತ್ತೇಳಿ ನಮಸ್ಕಾರ ಹೇಳಿ ನಿದ್ರೆ ಮಾಡುವ ಅಭ್ಯಾಸ. ಆದ್ರೆ ಇಂದ್ ತನ್ನ ಗುರುನ ಚಿಂತೆ ಮಾಡಿ ಆದ ಮೇಲೆ ಅಡ್ರಸ್ ತಿಳಿಯದ ಕುಂಟಿ ಶಾಂತಿ ಗೂಡೆನ ಕೂಡಾ ಒಂದ್ ಘಳಿಗೆ ಜ್ಞಾಪಿಸಿಕಂಡ್ ಕಣ್‌ಮುಚ್ಚಿ ನಿದ್ರೆ ಹೋತ್.

ಕೆಟ್ಟ ಕನ್ಸ್ ತುಂಬಾ ಕೆಟ್ಟದಾದ ಕನ್ಸ್ ಬೀತ್ Mr. Rajuಗೆ. ಅಬ್ಬಾ! ಅದರ ಹೇಳಿಕೇ ಭಯ ಆದೆ. ಇವನ ಶಾಂತಿ ಹರಿಯುವ ಹೊಳೆ ನೀರ್‌ಲಿ ಕೊಚ್ಚಿಕಂಡ್ ಹೋದಂಗೆ ಅವಳ ಹಿಡ್ದ್ ಬಚಾವ್ ಮಾಡಿಕೆ ಎಷ್ಟ್ ಪ್ರಯತ್ನ ಪಟ್ಟರೂ ಕೈಗೆ ಸಿಕ್ಕದಂಗೆ ಮುಳುಗಿ ಹೋಗಿ ಪ್ರಾಣ ಹೋದ ಮೇಲೆ ಹೊಟ್ಟೆ ಎಲ್ಲಾ ಊದಿಕಂಡ್ ಹೆಣ ಮೇಲೆ ಎದ್ದಂಗೆ ಈ ನೀರ್‌ಲಿ ಕೊಚ್ಚಿಕಂಡ್ ಹೋಗ್‌ತಿದ್ದ ಹೆಣನ ಹಿಡಿಯಕೆ ಹೋಗಿ ತಾನೂ ಅಯತಪ್ಪಿ ಬಿದ್ ಜೋಲಿ ಹೊಡ್ದಾಕನ ಆ ಹಿಡ್‌ಕಂಡಿದ್ದ ಅವಳ ಶರೀರನೂ ಕೈಜಾರಿ ಕೆಳಗೆ ಹರ್ದ್ ಹೋದಂಗೆ ಆಗ ಹೋ... ನನ್ನ ಶಾಂತಿ, ನನ್ನ ಶಾಂತೀ... ತ ಜೋರಾಗಿ ಕಿರುಚಿಕಂಡ್ ಬುಡ್ತ್. Mr. Raju ಕಿರುಚಿಕಂಡ ಸೌಂಡಿಗೆ ಅಂವಂಗೆ ನಿದ್ರೆ ಬುಟ್ಟ್ ಎಚ್ಚರ ಆಗಿ ಹೋತ್. ಆಗ ಹೆದ್ರಿ ಹಾರಿ ಎದ್ ಕುದ್ದ್ ಕಂಡತ್. ಕೈಲಿದ್ದ ವಾಚ್ ನೋಡ್ತ್ ಗಂಟೆ 4-30 ಬೆಳಗಿನ ಜಾವ " ಕೆಟ್ಟ ಕನ್ಸ್" ಬೀಳ್‌ಕಾಗದ್ ಗಡ ತ್ತೇಳಿ ಅವನ ಅಜ್ಜಿ ಹೇಳ್‌ತಿದ್ದ ಜ್ಞಾಪಕ. ಆದ್ರೂ ಹಂಗೇ ಪುನಃ ಕಣ್ ಮುಚ್ಚಿಕಂಡ್ ಮಲಗಿರೂ ನಿದ್ದೆ ಬಾತ್‌ಲೆ.

ಬೇಗ ಎದ್ ಹೊತ್ತಾರೆಯ ಎಲ್ಲಾ ಕೆಲ್ಸಗಳ ಬೇಗನೆ Mr Raju ಮುಗ್ಸಿಕಂಡತ್. ಈ ದಿನ ನಂಗೆ ಏನೂ ಸಂಪಾದನೆ ಬೇಡ ಏನೂ ಕೆಲ್ಸನೂ ಬೇಡ ಸದ್ಯ ತಂಗೆ ಮೊದುವೆಗೆ ಇರುವ ಒಂದು ಲಕ್ಷ ರೂಪಾಯಿ ಆಗಿರ್ದು. ಆದ್ರೇ ನನ್ನ ಶಾಂತಿನ ಮೊದ್ವೆಗೆ ಇನ್ ಒಂದ್ ವಾರಮಾತ್ರ ಇರ್ದು ನಾನ್ ಅವಳ ಹತ್ರ ಹೋಗಿ ನನ್ನ ಮುಖನ ಅವಳಿಗೆ ತೋರ್ಸಿ ಸಮಾಧಾನ ಹೇಳಿ ನಮ್ಮ ಮದುವೆ ದಿನ ಅವಳೂ ಮಡಿಕೇರಿಗೆ ಬರುವ ಹಂಗೆ ಮಾಡಿ ಹೇಳಿ ಬರೋಕು ಆದ್ರೇ ಅವಳ ಮನೆ ಅಡ್ರಸ್ ಗೊತ್ತಿಲೆಲ್ಲಾ? ಹೆಂಗೆ ಹುಡ್ಕುದು? ಅವಳು ಯಾವ ಊರವಳು. ಯಾವ ಬೀದಿಯವಳು ತ್ತೇಳಿನೂ ಅಡ್ರಾಸ್ ಗೊತ್ತಿಲೆಲ್ಲಾ? ದೊಡ್ಡದಾಗಿ ನಾನ್ ಅವಳಿಗೆ ಮದುವೆ ಆನೆತ್ತೇಳಿ ಪ್ರಾಮಿಷ್ ಮಾಡಿ ಬುಟ್ಟಳೊ. ಆದ್ರೆ ಈಗ? ಇಂತಹ ದಿನ ಇಂತಹ ಕಡೆ ತಾ ಗ್ಯಾರಂಟಿ ಆಗಿ ಹೇಳಿ ಬರೋಕಲ ಪಾಪ ಮೊದ್ಲೇ ಮೈಸೂರು ಹಳ್ಳಿ ಕಡೆಯ ಗೂಡೆಗ ನಮ್ಮೂರು ಗೂಡೆಗಳಂಗೆ ಇವ್ರ ಎದೆಲಿ ಧೈರ್ಯ ಇರ್ದುಲೆ ಏನ್ ಮಾಡ್ದು ಈಗ? ತ್ತೇಳಿ ಚಿಂತೆ ಮಾಡಿಕೆ ಶುರ್ ಮಾಡ್ತ್.

ಒಂದ್ ಐಡಿಯಾ! ಊರು ಊರು ಬೀದಿ ಬೀದಿ ಹುಡುಕ್ಕೊಕಾದ್ರೆ ಒಬ್ಬ ಬಿಕ್ಷುಕನಂಗೆ ಹೋಕು: ಇಲ್ಲದಿದ್ರೆ ಕೈ ಸಾಸ್ತ್ರ ಹೇಳುವವರ ವೇಷ ಹಾಕಂಡ್ ಹೋಕು. ಕೈಸಾಸ್ತ್ರ ಹೇಳುವ ಶಾಸ್ತ್ರಿಗಳ ವೇಷನೇ ಇದಕ್ಕೆ ಸರಿಯಾದ ವೇಷತ್ತೇಳಿ ತೀರ್ಮಾನ ಮಾಡ್ತ್. ಇದಾದ್ರೆ ಪ್ರತೀ ಮನೆ ಮನೆ ಬಾಗ್‌ಲ್ ತೆಗ್ಸಿ ನೋಡಿಕ್ಕಾದೆ ಒಳ್ಳೆ ಐಡಿಯಾ ಮನಸ್ಸಿಗೆ ಬಾತ್.

ಒಳ್ಳೆ ಬಿಳಿ ಟೊಪ್ಪಿ, ರೇಶ್ಮೆ ಬಿಳಿ ಉದ್ದದ ಜುಬ್ಬ ಒಂದ್ ಕೆಂಪ್ ಕಲರ್ ರೇಶ್ಮೆ ಶಾಲು ಮಾರಾರಿ ಕಚ್ಚೆ ಪಂಚೆ, ಕೈಯ್ಯಲ್ಲೊಂದ್ ಕಪ್ ಕ್ಯಾನ್‌ವಾಸ್ ಬೇಗ್, ಕತ್ತಲಿ ದಪ್ಪ ದಪ್ಪ ಕೆಂಪು ಹವಳದ ಮಣಿ ಸರಗಳ ನೇತ್‌ಹಾಕಂಡತ್. ಬೆರಳ್‌ಗಳ್ಗೆ ಎಂಟ್ ತರದ ಹವಳದ ಕಲ್‌ಗಳ ದಪ್ಪದಪ್ಪ ಉಂಗುರ ಹಣೆಗೆ ಅಗಲದ ಕುಂಕುಮಬೊಟ್ಟು, ಉದ್ದದ ಗಡ್ಡ ಮೀಸೆನ ಅಂಟಿಸಿ ಕಂಡತ್. ಚೀಲಲಿ ಹೊಸ ಹಳೆ ಪಂಚಾಂಗಗ, ತಾಳೆಗರಿ ಗ್ರಂಥಗ ಕಾಲಿಗೆ ಕೊಲ್ಲಾಪುರದ ಇರ್ರಮೊರ್‌ತ್ತೇಳುವ ಒಂದ್ ಜೊತೆ ದಪ್ಪ ಕಡಾವ್‌ನ ಮೆಟ್ಟೆಕಂಡತ್. ನೆಟ್ಟಂಗೆ ನಡಕಂಡ್ ಮೈಸೂರು ಅರಮನೆ ಹಿಂದೆ ಗನ್ ಹೌಸ್‌ನ ದಾಟಿಕಂಡ್ ನಂಜನಗೂಡ್‌ರಸ್ತೆಗಾಗಿ ನಡೆತಿತ್ತ್. ಅಲ್ಲೇ ಬೇಕಾದಷ್ಟ್ ಮ್ಯಾಕ್ಸಿಕ್ಯಾಬ್‌ಗ ಜನರ ತುಂಬಿಸಿಕಂಡ್ ನಂಜನಗೂಡ್ ಕಡೆಗೆ ಹೊರಡುತಿದ್ದೊ. ಅಲ್ಲೇ ಸ್ವಲ್ಪ ಹೊತ್ತ್ ನಿಂತ ಒಂದ್ ಮ್ಯಾಕ್ಸಿಕ್ಯಾಬ್ ಹತ್ತಿ ಕುದ್‌ಕಂಡತ್, ಅಲ್ಲಿಂದ ಹೊರಟ್ ¾ ಗಂಟೆ ಒಳಗೆ ಆಟೆಂಪ್ರೊಲಿ ಈ ಶಾಸ್ತ್ರಿಗಳ ಕಪಿಲಾ ಹೊಳೆ ಸೇತುವೆ ಹತ್ರದ ಹ್ಯಾಂಡ್ ಪೋಸ್ಟ್‌ಗೆ ಬಾತ್. ಈ ಶಾಸ್ತ್ರಿ ಆ ಜಾಗನ ನೋಡಿ ಅಲ್ಲೇ ಇಳ್ದ್ ಕಂಡ್ ಬುಡ್ತ್.

ಕಬಿನಿ ಹೊಳೆಯ ಎಡಬಲ ಜಾಗಲಿ ಹರಡಿಕಂಡ್ ಕಾಂಬುವ ಆ ಸಣ್ಣದಾದ ಊರ್‌ನ ಹೆಸರ್ ಕರ್ಕಳ್ಳಿ ತ್ತೇಳಿಕಂಡ್, ಊರು ಸುತ್ತಮುತ್ತಾ ಎಲ್ಲಾ ಒಳ್ಳೆ ಹಸಿರ್ ಆಗಿ ಬೆಳದ್‌ನಿಂತ ಕಬ್ಬಿನ ತೋಟಂಗ, ಬತ್ತದಗದ್ದೆಗ, ಮತ್ತೆ ಮೆಣಸಿನಕಾಯಿ, ಟೊಮೆಟ, ಕಡಲೆಕಾಯಿ ಬೆಳೆಗ ನೋಡಿದಷ್ಟು ದೂರಕ್ಕೂ ಕಾಣುತಾ ಉಟ್ಟು. ಇಲ್ಲಿ ಎಷ್ಟ್ ಬೆಳೆ ಬೆಳ್ದರೆ ಏನ್ ಪ್ರಯೋಜನ

ಆ ಊರಿನ ಜನರ ಜೀವನ ಮಟ್ಟ ಮಾತ್ರ ಇನ್ನೂ 30% ಗೆ ಏರ್‌ತ್ಲೆತ್ತೇಳುವಂಗೆ ಎಲ್ಲವೂ ಹಸಿರುಕಾರ್ಡ್ ಹೋಲ್ಡರ್‌ಗಳೇ ಜಾಸ್ತಿ ಕೇವಲ ಬೆರಳ್‌ಲಿ ಎಣಿಸುವಷ್ಟು ಊರು, ಗೌಡ ಜನಂಗ ಸ್ವಲ್ಪ ಸ್ಥಿತವಂತರಾಗಿದ್ದರ್ ಅವರ ನಿತ್ಯ ಜೀವನದ ಆಗುಹೋಗ್‌ಗ ಮಾತ್ರ ಇನ್ನೂ ಮಾರ್ಡನ್ ಸ್ಟೈಲ್‌ಗೆ ತಿರುಗಿತ್ತಿಲ್ಲೆ. ಆದ್ರೂನೂ ಕೂಡಾ ಈ ಹಳ್ಳಿಲಿ ಅಲ್ಪ ಸ್ವಲ್ಪ ಓದಿ ಬುದ್ದಿವಂತರ್ ತಾ ಹೇಳಿ ಕೊಂಬುವರ ಬಾಯಿಲಿ ಯಾಗ ನೋಡ್ರೂನೂ ಬರೆ ರಾಜಕೀಯದ ಮಾತ್‌ಗಳೇ. ಆ ಪಾರ್ಟಿ ಹಂಗೆ, ಈ ಪಾರ್ಟಿ ಹಿಂಗೆ ತ್ತೇಳಿಕಂಡ್ ತಾವೇ ಬುದ್ದಿವಂತರಂಗೆ ತೋರ್ಸಿಕಂಡ ಊರ್ ಮುಂದಿನ ಮಾರಿಗುಡಿ ಹತ್ರದ ನಾರಾಯಣ್ ಬಟ್ಟನ ಹೋಟೆಲ್‌ಲಿ ಬೆಳಿಗ್ಗೆ 7 ಗಂಟೆಗೆಲ್ಲಾ ಆ ತಲೆ ಬೆಳ್ದ ಜನ ಎಲ್ಲಾ ಖಾಲಿ ಚಾಯ ಕುಡಿಯಕೆ ಬಂದ್ ಸೇರಿಕಂಡ್ ಬುಟ್ಟವೆ. ಇಲ್ಲಿ ಊರ್‌ನ ದೊಡ್ಡ ಯಜಮಾನ್‌ಗ ಬೀಡಿ ಸೇದಿಕಂಡ್ ಬಟ್ಟನ ಹೋಟೆಲ್ ಚಪ್ಪರದ ಎದ್‌ರ್‌ಗಡೆ ಕಲ್ಲು ಬೆಂಚಿಲಿ ಕುದ್ದಿದ್ರೆ, ಈ ಊರು ಪಡ್ಡೆ ಹೈದಂಗಳ ಗುಂಪ್ ಅಲ್ಲೇ ಪಕ್ಕದ ಇನ್ನೊಬ್ಬ ಮಳಿಯಾಳಿ ಚೀಕಡಲಿ ಶುರು ಆಗಿದ್ದದೆ. ಇದನೆಲ್ಲಾ ಅಬ್ಸರ್‌ವ್ ಮಾಡಿಕಂಡಾ ಶಾಸ್ತ್ರಿಜಿ, ಈ ಬೈರಪ್ಪನವರ ಮಗಳು ಕುಂಟಿ ಶಾಂತಿ ಅನ್ನುವ ಗೂಡೆನ ಮನೆ ಎಲ್ಲಿ ಇರ್ದುತ್ತೇಳಿ ಯಾರ್‌ನ್ನ ಕೇಳ್ದ್ ತೇಳಿ ಕಂಡ್ ತಲೆ ಕೆರಕಂಡ್ ಗ್ಯಾನ ಮಾಡ್‌ತಿತ್. ಅಷ್ಟೊತ್ತಿಗೆ ಒಬ್ಬ ಹಲ್ಲುಬ್ಬು ಹೈದ ಸ್ವಲ್ಪ ಪೆದ್ ಪೆದ್ದಾಗಿ ಕಾಂಬತಿತ್. ಅವನ ಹತ್ರಕ್ಕೆ ಕರ್ದ್ ನಿನ್ನ ಹೆಸ್ರ್ ಕರಿಯ ಅಂತಲ್ವೇನೋ ತ ಕೇಳ್ತ್. ಇಲ್ಲಾ ಬುದ್ದಿ ನನ ಹೆಸ್ರ್ ನಾಗ ಅಂತ. ಓಹೋ ಅದೇ ನೀನ್ ಆ ಕುಂಟಿ ಶಾಂತಿ ಇದ್ದಾಳಲ್ಲಾ ಅವಳ ಮನೆ ಬೀದಿ ಅಲ್ವಾ? ತಾ ಕೇಳ್ತ್ ಊಹೂಂ? ಅದೇ ಅವತ್ತು ಸೇತುವೆ ಮೇಲ್ಗಡೆಂದ ನದಿಗೆ ನೆಗ್ದಳಲ್ಲಾ ಆ ಶಾಂತಿ ಅಕ್ಕನ ಮನೆನಾ? ಅದೂ ನಮ್ಮ ಬೀದಿಲಲ್ಲಾ. ಅವಳ್ದ್ ಮೇಲ್ಗಡೆ ಬೀದಿಲಿರೋದು. ಮೇಲ್ಗಡೆ ಬೀದೆ ಅಂದ್ರೆ ಎಷ್ಟನೆ ಬೀದಿ ಕಣೋ ಜಾಣ ಮರಿ. ಒಸಿ ಅವಳ ಮನೆನ ನಂಗೆ ತೋರ್ಸಿಕೊಡು, ಅಂತ ಹೇಳಿಕಾಕನ 2ಗ್ಲಾಸ್ ಬೆಲ್ಲದ ಚಾಯ ಬಾತ್. ಒಂದ್‌ನ್ನ ಈ ಹೈದಂಗೆ ಕೊಟ್ಟ್ ಒಂದನ್ನ ಈ ಶಾಸ್ತ್ರಿ ಕಣ್ ಮುಚ್ಚಿಕುಡ್ತ್. ಆಮೇಲೆ ನೋಡಿ ಬುದ್ದಿ ಆ ಕಡೆ ಕಾಣ್‌ತದಲ್ಲಾ ಆ ದೊಡ್ಡ ಹುಣ್ಸೆಮರ ಮತ್ತೆ ತೆಂಗಿನ ಮರ ಅದರ ಪಕ್ಕದಲ್ಲೇ ಆ ಶಾಂತಿ ಅಕ್ಕನ ಮನೆ ಇರೋದು ಬುದ್ದಿತ್ತಾ ಕೈಬೆರಳ್ ಮಾಡಿ ಆ ಹೈದ ತೋರ್ಸಿ ಕೊಟ್ಟತ್. ಈ ಶಾಸ್ತ್ರಿಜೀಗೆ ಬಹಳ ಖುಷಿ ಆಗಿ ಹೋತ್.

ಈ ಶಾಸ್ತ್ರಿಯ ಕೈ ಶಾಸ್ತ್ರ ಹೇಳ್ವ ಕೆಲಸ ಆ ಮ್ಯಾಗಡೆ ಬೀದಿಯಿಂದ ಶುರುಆತ್. ಆಗಳೇ ಗಂಟೆ 10½ ಆಗಿತ್. ಇಷ್ಟೊತ್ತಿಗೆಲ್ಲಾ ಅಲ್ಲಿನ ರೈತ ಜನಂಗ ಆಳುಕಾಳುಗಳೆಲ್ಲಾ ಗದ್ದೆಕಡೆ, ತೋಟದ ಕಡೆಗೆ ಕೆಲ್ಸಮಾಡಿಕ್ಕೆ ಹೋಗಿದ್ದೊ.

ಕೈ ಶಾಸ್ತ್ರ, ಅಂಜನ ಶಾಸ್ತ್ರ, ಕವಡೆ ಶಾಸ್ತ್ರ, ಗಿಣಿಶಾಸ್ತ್ರ, ಶಾಸ್ತ್ರ ಕೇಳ್ರಮ್ಮಾ ಶಾಸ್ತ್ರ, ಶಾಸ್ತ್ರ ಕೇಳ್ರಮ್ಮಾ ಶಾಸ್ತ್ರ ಅಂತ ಜೋರಾಗಿ ಕಿರ್‌ಚಿಕಂಡ್ ಹೋತ್. ಆ ಬೀದಿಲಿ ಮೊದಲಿನ ಬಲಗಡೆ ಮನೆ ಒಬ್ಬಳು ಮುದಕಮ್ಮ ಈ ಶಾಸ್ತ್ರಿಜೀನ ಸ್ವರ ಕೇಳಿ ಹೊರಗಡೆಗೆ ಬಾತ್. ಅವಳ ಹಿಂದೆನೇ ಒಂದು ದೊಡ್ಡಗೂಡೆ ಸಮೇತ ಬಂದ್ ಮುಖ ತೋರ್ಸಿತ್, ಬಾರಯ್ಯ ಶಾಸ್ತ್ರದವನೆ ತ್ತೇಳಿ ಆ ಅಜ್ಜಿ ಮನೆಗೆ ಕರ್ತ್ ಅಷ್ಟೊತ್ತಿಗೆ ಮಗಳು ಒಂದ್ ಚಾಪೆ (ಮಂದಲಿಗೆ) ನ ತಂದ್ ಅಲ್ಲೇ ಜಗುಲಿ ಮೇಲೆ ಹಾಸಿ ಕೊಡ್ತ್. ನೋಡ್ ಒಸಿ ನನ್ನ ಮಗಳಿಗೆ ಈ ವರ್ಷ ಲಗ್ನಗಿಗ್ನಾ ಏನಾದ್ರೂ ಆಗುವ ಲಕ್ಷಣ ಐತಾ ಅಂತ ಕೇಳ್ತ್. ಆಯ್ತು ತಾಯಿ ಬಾ ಮಗಳೆ ಈ ಚಾಪೆ ಮೇಲೆ ಕುಳಿತ್ಕೊಮ್ಮಾ ಹಿಡಿ ಈ ಕವಡೆಗಳನ್ನು ನಿನ್ನ ಇಷ್ಟದೇವತೆಯನ್ನು ನೆನೆದು ಬಿಡಮ್ಮಾತ್ತೇಳಿ ಅವಳಿಗೆ ಒಂದ್ ಪುಂಡಿ ಕವಡೆಗಳನ್ನ ಚಾಪೆ ಮೇಲೆ ಉರುಳಿಸಿಕೆ ಹೇಳ್ತ್. ಶಾಸ್ತ್ರಿ ಶ್ರೀ ರಾಘವೇಂದ್ರಾಯ ನಮಃ ತ್ತಾ ಏನೇನೋ ಮಂತ್ರನ ಹೇಳಿಕೆ ಶುರ್ ಮಾಡಿಕಂಡ್, ಈ ಶ್ರೀ ಚಕ್ರದ ಒಳಗಡೆ 10ರೂಪಾಯಿ ದಕ್ಷಿಣೆ ಇಡು ತಾಯಿ. ಈ ಮನ್ಯಾಗೆ ಲಕ್ಷ್ಮಿ ಒಲಿದಿದ್ದಾಳೆ ತಾಯಿ. ಈ ಮನೆ ಒಡೆಯರಿಗೆ ಶುಕ್ರದೆಶೆ ಶುರುವಾಗು ತ್ತೈದೆ. ಮನೆ ತುಂಬಾ ಸಂಸಾರ ಸೌಭಾಗ್ಯ ಕೂಡಿ ಬರುತ್ತೈತೆ. ಈ ಮನೆ ಮಗಳ ಮೇಲೆ ಆ ರಾಘವೇಂದ್ರಸ್ವಾಮಿಯ ಕೃಪೆ ಉಂಟಾಗಿದೆ. ನಿನ್ನ ಹೆಸರೇನು ಮಗಳೇ? ತ್ತಾ ಕೇಳಿ ಅವಳ ಅಂಗೈನ ಕೈಗೆ ತಕಂಡ್ ಅಂಗೈನ ನಿಧಾನವಾಗಿ ಬಿಡಿಸಿ ಹರಡಿ ಅಂಗೈನ ಸವರಿಕಂಡ್ ಕಣ್ಮ ಮುಖನ ದೃಷ್ಟಿನ ನೋಡಿಕೊಂಡ್ ತಾಯಿ, ನೀನ್ ರೇವತಿ ನಕ್ಷತ್ರಲಿ ಹುಟ್ಕೊಳ. ನೀನ್ ಶಾರದೆ ದೇವಿಯೇ ಆಗ ಬೇಕಿತ್ತ್. ನಿನ್ನ ನಕ್ಷತ್ರ ನಾಮ ಏನ್ ಮಗಳೇ ತಾ ಕೇಳ್ತ್. ಅವ್ಳು ಮೆತ್ತಂಗೆ ಸಣ್ಣಧ್ವನಿಲಿ ಸರಸ್ವತಿ ತಾ ಹೇಳ್ತ್. ನೋಡಮ್ಮಾ ನೀನ್ ಈವಾಗ ದೊಡ್ಡವಳಾಗಿದ್ದಿಯಾ, ಹಂಗಾಗಿ ನಿನ್ನ ವಿದ್ಯಾಭ್ಯಾಸನ ಇಷ್ಟಕೆ ಸಾಕ್ ತಾ ನಿನ್ನ ಅಪ್ಪಹೇಳಿ ನಿಲ್ಸಿದ್ದೋ ಸರಿತಾನೆ? ಆದ್ರೇ ನೀನ್ ಹೆದ್ರ್ ಬೇಡ ಈ ಬೀದಿ ಮಕ್ಕಳ್‌ಗಳಿಗೆಲ್ಲಾ ಕರಕಂಡ್ ಮನೆಪಾಠ ಹೇಳಿಕೊಡು. ನಿಂಗೂ ಒಳ್ಳೆದಾದೆ. ಈ ಬೀದಿಮಕ್ಕಿಗೂ ಅನುಕೂಲ ಆದೆ. ಇನ್ ಮೂರು ತಿಂಗ್ಲಲಿ " ಮಂಟೆಲಿಂಗಯ್ಯ ಸ್ವಾಮಿ" ಜಾತ್ರೆ ನಡ್ದದೆ. ಅಲ್ಲಿಗೆ ನೀನ್ ನಿನ್ನ ಅಜ್ಜಿನ ಕರ್ಕಂಡು ಹೋಗು. ನಿಂಗೆ ಅಲ್ಲಿ ಆ ಸ್ವಾಮಿಯ ದಯಂದ ಒಂದು ಲಗ್ನ ಆಗುವ ಅವಕಾಸ ಒದಗಿ ಬಂದದೆ. ನಿನ್ನ ಹುಡಿಕಿಕೊಂಡು ಬರುವ ವರ ಒಳ್ಳೆ ಸರ್ಕಾರಿ ಹುದ್ದೆಲಿರವಂವ. ಒಳ್ಳೆ ಲಕ್ಷಣವಾದ ಚೆನ್ನಗರಾಯ. ಅವನ ಜೊತೆ ನಿನ್ನ ಕಂಕಣಬಲ ಕೂಡಿ ಬಂದ್ ನಿನ್ನ ಕೊರಳಿಗೆ ಮಾಂಗಲ್ಯಕಟ್ಟಿದೆ. ನಿನ್ನ ಹಣೆ ಮಧ್ಯೆ ಒಂದು ಸುಳಿ ಇದೆ. ಅದು ನಂಗೆ ಮಾತ್ರ ಕಂಡದೆ. ನಿಂಗೆ ರಾಜಯೋಗದ ಲಕ್ಷಣ ಕಂಡುಬರುತಾ ಉಟ್ಟು. ನಿಂಗೆ ಮುಂದೆ ಒಳ್ಳೆ ಮಹಾರಾಣಿತರ ಬಾಳುವ ಯೋಗ ಉಟ್ಟು. ಅಮ್ಮಾಮಗಳ್ ಸರಸ್ವತಿ ನೀನು ನಿನ್ನ ಅಜ್ಜಿ ಜೊತೆಲೆ ದಕ್ಷಿಣ ದಿಕ್ಕ್‌ಲಿರುವ ಆ ಮಂಟೇಸ್ವಾಮಿ ಜಾತ್ರೆಗೆ ಹೋಗೋದನ್ನ ಮರೀ ಬೇಡ. ಇನ್ನು ಬರೇ ಮೂರು ತಿಂಗಳಲ್ಲೇ ನಿನ್ನ ಒಳ್ಳೆ ಅದೃಷ್ಟ ಕೂಡಿ ಬಂದದೆ ತಾ ಪುನಃ ಒತ್ತಿ ಹೇಳ್ತ್.

ಈ ಮಾತ್‌ನ ಕೇಳ್ದ ಅಜ್ಜಿಗೆ ಬಹಳ ಖುಷಿ ಆಗಿ ಹೋತ್. ಶಾಸ್ತ್ರಿಗಳೇ ನಿಮ್ಮ ಬಾಯಿ ಹಾರೈಕೆಂದ ಆ ಅದೃಷ್ಟ ನನ್ನ ಮೊಮ್ಮಗಳಿಗೆ ಕೂಡಿ ಬರಲಿ ಶಾಸ್ತ್ರಿಗಳೇತ್ತೇಳಿ ಕೈ ಮುಗ್ತ್, ಈ ಶಾಸ್ತ್ರಿ ಅಜ್ಜಿನ ಕೈಗೆ ರಾಘವೇಂದ್ರ ಸ್ವಾಮಿದ್ ಮೃತಿಕೆ ಮಣ್ಣ್‌ನ ಪ್ರಸಾದನ ಕೊಡುತಾ ಓಂ ರಾಘವೇಂದ್ರಾಯ

ಮನಸ್ಸಿಲ್ಲದೆ ಹೆಣ್ಣಿಗೆ ಮನ್ಮಥನೂ ಆಗಲಾರನು.

19 ನೇ ಪುಟಕ್ಕೆ

# "ಹದಿಹರೆಯದಲ್ಲೇ ಹಲ್ಲ್‌ಗಳ ಸಮಸ್ಯೆ"

ಪ್ರತಿಯೊಬ್ಬ ಮನುಷ್ಯನ ಮುಖದ ಸೌಂದರ್ಯಕ್ಕೆ ದಾಳಿಂಬೆ ಬೀಜದಂತ ದಂತ ಪಂಕ್ತಿಗಳೇ ಆಧಾರ. ಪ್ರತಿಯೊಬ್ಬನ ಆರೋಗ್ಯಕ್ಕೆ ಬೇಕಾದ ಆಹಾರ ಸೇವನೆಗೂ ಹಲ್ಲ್‌ಗಳೇ ಅತೀ ಅವಶ್ಯಕ. ಹಂಗಾದರೆ ನಾವು ನಮ್ಮ ಹಲ್ಲ್‌ನ ಬಗ್ಗೆ ಎಷ್ಟೊಂದು ಕಾಳಜಿವಹಿಸಕ್ಕು. ಆದರೆ ಇಂದ್ ನಾವ್ ದಂತ ವೈದ್ಯರಲ್ಲಿಗೆ ಹೋಗಿ ತಿಳ್ಕಂಡರೇ ನಿಜಕ್ಕೂ ಅಲ್ಲಿಗೆ ಬರವು ಹೆಚ್ಚ್ ವಯಸ್ಸಾದವು ಅಲ್ಲ. ನಮ್ಮಂತ ಗೂಡೆಗ, ಹೈದಗ, ಸಣ್ಣಮಕ್ಕ, ಇಂತವೇ ಜಾಸ್ತಿ. ಹೆಚ್ಚಾಗಿ ಹಲ್ಲ್ ಹುಳಾಗಿರುದು, ಮುಂದಕ್ಕೆ ಬಂದಿರುವುದು, ಒಂದರ ಮೇಲೊಂದು ಬಂದಿರುದು, ಹಿಂಗೆ ಏನೆಲ್ಲಾ ಸಮಸ್ಯೆಗ. ಇಂತಾ ವಯಸ್ಸ್‌ಲೇ ಹಿಂಗೆ ಇದ್ದರೆ ಇನ್ ಮುಂದಕ್ಕೆ ಹೆಂಗಿರುದು ನಮ್ಮ ಸಮಸ್ಯೆಗ. ನೋಡಿ ನಮ್ಮ ಮನೆಗಳಲ್ಲಿ ಇರುವ ಅಜ್ಜ ಅಜ್ಜಿಕ ಇನ್ನಾದರು ತಮ್ಮ ಹಲ್ಲ್‌ನ ಕೈಲಿ ಕುಟ್ಟಿ ತೋರ್ಸುವೆ. ನೋಡಿನೆ ನಮ್ಮ ಹಲ್ಲ್ ಇನ್ನಾದರು ಹೆಂಗೆಟ್ಟುತಾ ... ಕೇಳ್ಕನ ನಮ್ಮಂತವು ನಾಚಿಕೆ ಆಗಿ ತಲೆ ತಗ್ಗಿಸಕ್ಕು. ಅವು ಹಿಂಗೆ ಹೇಳುವೆ. ಅವರ ಕಾಲಲೀ ಹೆಚ್ಚಾಗಿ ಗಟ್ಟಿಯಾದ ಪದಾರ್ಥಗಳ್ನ ತಮ್ಮ ಹಲ್ಲ್‌ಗಳ ಸಹಾಯದಿಂದ ಸೇವಿಸ್ತಿದ್ದೊ ಮತ್ತೆ ತಾವೇ ಸ್ವತ ತಯಾರಿಸಿದ ಪೇಸ್ಟ್, ಉಪ್ಪು, ಮಸಿ, ಇದ್‌ರ್‌ಂದ ತಮ್ಮ ಬೆರ್‌ಳ್‌ಗಳ ಸಹಾಯಂದ ಹಲ್ಲ್ ಉಜ್ಜಿ ಸರಿಪಡಿಸ್ತಿದ್ದೊ. ಹಿಂಗೆ ಕೈ ಬೆರ್‌ಳ್‌ಗಳಿಂದ ಒತ್ತಿ ಹಲ್ಲ್ ಉಜ್ಜಿರೇ ಹಲ್ಲ್ ಒಂದೇ ಸಮವಾಗಿ ಬಂದೆತಾ ಅವರ ಅಭಿಪ್ರಾಯ. ಆದರೆ ನಮ್ಮ ಈಗಿನ ಕಾಲಲೀ ಗಟ್ಟಿಯಾದ ಪದಾರ್ಥಗಳ್ನ ಅಗಿಯಕ್ಕೆ ಯಾರು ಇಷ್ಟಪಡ್ಲೆ. ಕಬ್ಬುತಿನ್ನಕ್ಕುತಾದರೆ ಯಂತ್ರದ ಮುಖಾಂತರ ರಸ ತೆಗಿಯಕ್ಕು, ಸೀಬೆಕಾಯಿ, ಜಾಮ್, ಹಲ್‌ವಗ, ಐಸ್‌ಕ್ರೀಮ್, ಚಾಕ್‌ಲೇಟ್, ಅಕ್ಕಿಂದ್ ತಯಾರಿಸುವ ತಿಂಡಿಗ ಮರೆಯಾಗಿ ಮೆದುವಾದ ಬೇಕರಿ ತಿಂಡಿಗ, ಹುರ್‌ದ ಬೀಜ ಹೋಗಲಿ ಕಡ್ಲೆಕೂಡ ತಿನ್ನವೆ ಇಲ್ಲ. ಮತ್ತೆ, ಪೆಪ್ಸಿ, ಕೊಕೊಕೋಲಾ, ಪಾನ್‌ಟಾ, ಮುಂತಾದವುಗಳಿಂದ ಕೂಡ ನಮ್ಮ ಹಲ್ಲ್‌ಗಳ ಮೇಲೆ ಎಷ್ಟೊಂದು ಪ್ರಭಾವ ಬೀರ್‌ದೆ. ಮಸಿ, ಉಪ್ಪು ತೇಳ್ರೆ ಗೊತ್ತೆ ಇಲ್ಲೆ. ತ್ರರತರದ ಪೇಸ್ಟ್‌ಗ, ಸಣ್ಣ ಕೂಸ್‌ಗೆ ಸಹ ಹಲ್ಲುಜ್ಜಿಕ್ಕೆ ಬ್ರೆಸ್ ಬೇಕು. " ನೋಡಪ್ಪಾ ಕೂಸಿಗೆ ಹೊಸ ಬ್ರೆಸ್ ತಂದೊಳೆ ಎಷ್ಟ್ ಪೋಚಿ ಉಟ್ಟು ನೋಡು" ತಾ ಹೇಳ್ರೆ ಸಾಕ್ ! ಎಂತಾ ಹಟ ಮಾಡಿಕಂಡ್ ಕುದ್ದ ಕೂಸಾದರು ಎದ್ದ್ ಹಲ್ಲುಜ್ಜಿಕ್ಕೆ ಹೋದೆ. ಸಿಹಿಯಾದ ಪೇಸ್ಟ್‌ನ ತಿಂದ್ ಮುಖಕ್ಕೊಂದಿಷ್ಟ್ ನೀರ್ ಹಾಕಂಡ್ ಬಂದರೆ ಸಾಕ್. ಅವ್ವಂದ್ರ್ ಎಲ್ಲಿ ತೋರ್ಸಪ್ಪಾ ಕೂಸ್‌ದ್ ಹಲ್ಲ್ ಲಾಯಿಕ್ಕ ಕೀ.... ಕೀ..... ಹೇಳ್ದೆ ಅಲ್ಲಲ್ಲೊ ತೇಳಿ" ಒಂದ್ ಗ್ಲಾಸ್ ಕಾಫಿ ಕೊಟ್ಟವೆ. ಮಕ್ಕ ಕುಡ್ದ್ ಅವರ ಪಾಡಿಗೆ ಹೋದವೆ. ಮತ್ತೆ ತಮ್ಮ ಹಲ್ಲ್‌ಗಳ ಬಗ್ಗೆ ತಿಳುವಳಿಕೆ ಬಾಕನ ಬ್ಯಾರೆ ಬ್ಯಾರೆ ದಾರಿ ಹಿಡ್ದಿದ್ದದೆ. ಮತ್ತೆ ನೋಡ್ದವು ಬ್ಯಾರೆ ಹೆಸರ್‌ಗಳಿಂದ ಶೂನೆ ಹೇಳುವೆ. ಗೊಗ್ಗರೆ, ಕೊಂಬಟೆ, ಪಾರೆಕಲ್ಲ್, ಕಾಯಿತುರಿಯುವಮಣೆ, ಗದ್ದೆ ಹೂಡುವ ಟ್ರಾಕ್ಟ್ರ, ಹಿಂಗೆ ಹೇಳ್ಕನ ಅವು ಎಷ್ಟೊಂದು ನೊಂದ್‌ಕಂಡವೆ. ಹೆಚ್ಚಾಗಿ ಬಾಯಿಲೇ ಉಸಿರಾಡುವಂತ ಮಕ್ಕಳ್ಲೆ, ಹೆಬ್ಬೆರ್‌ಳ್ ಚೀಪುವಂತ ಮಕ್ಕಳ್ಲೆ ಹಲ್ಲ್ ಮುಂದಕ್ಕೆ ಬಾದು ಸರ್ವೆ ಸಾಮಾನ್ಯ. ಇಂತಾ ಹಲ್ಲ್‌ಗಳ್ನ ಪುನ ಹಿಂದಕ್ಕೆ ಎಳ್ದ್ ಪಿನ್ಸ್ ಹಾಕ್ಸುದ್. ಇದರ್‌ಂದ ನರಗಳ ಮುಖಾಂತರ ಮೆದುಳಿಗೆ ಅದೆಷ್ಟೊ ಹಾನಿಯಾದೆ. ಅಬ್ಬಾ! ನಮ್ಮ ಹಲ್ಲ್ ಒಳಿತು ಕೆಡುಕುಗಳ್ಲ ಇಷ್ಟೊಂದು ಹೆಸರುವಾಸಿಯಾಗಿರ್‌ಕನ ಇದರ ಬಗ್ಗೆ ಹೆಚ್ಚ್ ಕಾಳಜಿ ವಹಿಸಿ ಇಂಥ ಸಮಸ್ಯೆಗಳಿಂದ ದೂರಾಗಿರಿಕ್ಕೆ ನಾವು ಯಾಕ್ಕೆ ಹೆಚ್ಚ್ ಪ್ರಯತ್ನ ಪಡ್‌ಕ್ಕಾಗದ್ ?

— ಅಣ್ಣೆಚೀರಾ ಭಾರತಿ ಸೋಮಣ್ಣ ಮಕ್ಕಂದೂರು .

## ನುಡಿ ಮುತ್ತುಗ

☆ ಕಷ್ಟತ ಎಂದ್ ಹೇಳಿಕಣ್‌ಬೇಡಿ ಏಕೆಂತೆಳ್ರೆ ನಕ್ಷತ್ರಗ ಕತ್ತಲೆಲ್ ಬೆಳ್‌ಗುವೆ.

☆ ವಿದ್ಯೆ ಸಿರಿವಂತಿರಿಗೆ ಶೃಂಗಾರಾದರೆ ಬಡವರಿಗೆ ಐಶ್ವರ್ಯ ಆದೆ.

☆ ಯಾವ ಹೃದಯಲಿ ಕರುಣೆ ಇಲ್ಲೆಯೇ ಆ ಹೃದಯ ಕಲ್ಲ್‌ಕ್ಕಿಂತ ಕಡೆ.

☆ ಜಗತ್‌ಲಿ ಎಲ್ಲಾ ವಸ್ತುಕ್ಕಿಂತ ಸಮಯಕ್ಕೆ ಬೆಲೆ. ಬಾಳ್‌ವ ಶೀಲ ಅದನ ಕಳ್‌ದರೆ ಮತ್ತೆ ಪಯಲಾಧ್ಯಾ.

☆ ವಿದ್ಯೆ ಕತ್ತಲೆಯ ಜೀವಕ್ಕೆ ಬೆಳ್‌ಕ್ ನೀಡ್‌ದೆ.

☆ ನೀನ್ ಯುದ್ಧ ಮಾಡಿಯತಾದರೆ ಅನ್ಯಾಯಡ ವಿರುದ್ಧ ಯುದ್ಧ ಮಾಡ್.

☆ ತನ್ನಷ್ಟಕ್ಕೆ ತಾನೇ ವಿದ್ಯಾವಂತಂತೇಳಿ ಕಣಂವ ಮೂರ್ಖ. ಹಂಗೇನೆ ಕೆಟ್ಟಂವಂತೇಳ್ ಕಣಾವ ಪಾಪಿಷ್ಠ.

— ಕೊಳಂಬೆ ಮಮತಾ ಲಕ್ಷ್ಮಣ, ಕೊಡಗು.

## Change

ಯಾಗೋಳ್ ದುಂಡ್ ದಪ್ಪ ಮಾಡಿಕಂಡ್
ಇರ್ತಿದ್ದ ಪಕ್ಕದ ಮನೆಯ ವೃಂದ
ಮಂದಹಾಸ ಬೀರ್‌ತಾ ಉಟ್ಟು
ನಮ್ಮ ಮನೆಗೆ ಫೋನ್ ಬಂಡಲ್ಲಿಂದ.

— ಘೂಲದಾಳು ಚಂದ್ರಕಲಾ ಮಡಿಕೇರಿ.

**ತಾಯಿ ಇಲ್ಲದ ಮನೆ, ನೀರಿಲ್ಲದ ಬಾವಿಯು ಹಾಗೆ.**

# "ಕೊರೆತ"

"ಕೊರೆತ" ಇದರ ಬಗ್ಗೆ ಹೆಂಗೆ ಕೊರಿಯದುತನೇ ಗೊತ್ತಾದುಲೆ!. ಮೊನ್ನೆ ಸಾಯಂಕಾಲ ಏನಾತ್‌ತೇಳ್ರೆ... ಸಣಪ ಕಾಟಿ ಶಾಪ್ ಎದ್‌ರ ಸಿಕ್ಕಿತ್. ಇನ್ನ್ ಪೆಗ್ಗ್-ಗಿಗ್ಗ್ ಏರ್‌ಸಿದಕೆ ಏನೊ?, ಮಾತಾಡಿಕೆ ಸುರುಮಾಡ್ತ್‌ಲ, ನಾನ್ ಅಂತದ್ ಮಾಡ್ಯೊಳೆ, ಇಂತದ್ ಮಾಡ್ಯೊಳೆ, ಅವನ ಹಂಗೆ ಮಾಡ್ನೆ, ನಾನ್ ಆ ಊರಿಗೆ ಹೋಗೊಳೆ, ಅಲ್ಲಿ ಅವರ್‌ನ ಗೊತ್ತುಟು ತ ಇಡೀ ದೇಶನೆ ಸುತ್ತಿ ಬಂದಂಗೆ ಬರಿಮಾತ್‌ಲೆ ಕೊರಿಯಕೆ ಸುರು ಮಾಡ್ತ್. ಏರ್‌ಸಿದ ಪೆಗ್ಗ್‌ದ್ ಪವು ಎಲ್ಲ ಇಳ್ದ್ ಮಾತ್ ನಿಲ್ಲಕ್‌ಕಾಕನ ನಡುರಾತ್ರಿ ದಾಟಿಟು. ಆಗ ನಂಗೆ ಗೊತ್ತಾದ್ ಕೊರೆತ ತೇಳ್ದು ಹಿಂಗೆನೂ ಇದ್ದದೇತ. ಈಗ ನಿಮಿಗೆ ಗೊತ್ತಾತಲ ಕೊರೆತ ತೇಳ್ರೆ ಎಂತತ.

ಅಂದ್ ರಾತ್ರಿ ಮಾತ್ರ ಸಣಪ, ನನ್ನ ಮನೆವರೆಗೆ ಬುಡಿಕೆ ಕರ್‌ದ್ತ್‌ಲೆ. ಯಾಕೆತೇಳ್ರೆ ಪೆಗ್ಗ್‌ದ್ ಪವು ತಲೆಲಿ ಇದ್ದದ್‌ರ್‌ಂದ ಮನೆವರೆಗೆ ನಡ್‌ಕಂಡ್ ಹೋಗುವಷ್ಟ್ ಧೈರ್ಯ ಉಟ್ಟುತ ಗ್ಯಾನ ಮಾಡ್ದ ಏನೊ? ಇಲ್ಲದಿದ್ದರೆ?ಕತ್ತಲಾದ ಮೇಲೆ ಎಲ್ಲಿಗಾರ್ ಹೋಕುತಾದರೆ ಒಬ್ಬ ಜೊತೆಲಿ ಬೇಕೆಬೇಕು. ಯಾಕೆತೇಳ್ರೆ, ಕಣ್ಣು ಕಾಂಬದುಲೆತ ಅಲ್ಲ. ಕಣ್ಣೆಲ್ಲ ಲಾಯ್ಕ ಕಂಡದೆ, ಮತ್ತೆ ಎಂತತೇಳ್ರೆ ಸ್ವಲ್ಪ ಹೆದರಿಕೆ. ಹೆದರಿಕೆ ತೇಳ್ರೆ ಹೆಂಗೆ ಗೊತ್ತುಟಾ...?, ರಾತ್ರಿ ಮಲ್‌ಗಿದ ಮೇಲೆ ಅಡಿಗೆ ಮನೇಲಿ ಪಾತ್ರ ಏನಾರ್ ಸದ್ದ್ ಗಿದ್ದ್ ಆದರೆ ಎದ್ದ್-ಗಿದ್ದ್ ನೋಡುದು ಎಂತ ಇಲ್ಲೆ. ಮಲ್‌ಗಿದ್ದಲಿಂದಲೆ ಬಾಯಿ ಬಡಿಯದು. ಎಲ್ಲಾರ್ ಸದ್ದ್ ಜೋರು ಆತ್‌ತೇಳ್ರೆ, " ನಿಂಗೆ ಎದ್ದ್ ನೋಡಿಕೆ ಆಲೆನೆ, ಆಗಳೆಂದ ಹೊರಗೆ ಎಂತೊ ಸದ್ದ್ ಆಗ್‌ತ ಉಟ್ಟು. ಕಿವಿ ಕೇಳ್ಸದುಲೆನ ನಿಂಗೆ, ಹೋಗಿ ನೋಡು...." ತ ಸಣವಂಗೆ ಬೈಯದು. ಈ ವಿಷಯ ಗೊತ್ತಾದ್ ನಂಗೆ ಸಣವನ ಬಾಯಿಂದ ಇಂತಾ ಹೆದರಿಕೆ ಸಣಪಂಗೆ.

ಹೆದರಿಕೆ ತೇಳ್ಕನ ಸುಮಾರ್ ಸಮಯದ ಹಿಂದೆ ಆದ ಒಂದು ಸಣ್ಣ ಘಟನೆ ಗ್ಯಾನ ಬಾತ್. ಆಗ, ಸಣಪನವರ ದನದ ಹಟ್ಟಿ ಹತ್ರ ಇದ್ದ ಬೈನೆ ಮರಲಿ ಹಣ್ಣ್ ಇದ್ದದ್‌ರ್‌ಂದ ಕಬ್ಬೆಕ್ಕ್ ಹಣ್ಣ್ ತಿಂಬಕೆ ಬರ್‌ತಿತ್. ಅದ್ ಹೆಂಗೊ ಸಣಪಂಗೆ ಗೊತ್ತಾಗಿ ಕಬ್ಬೆಕ್ಕ್ ಹೊಡಿಯಕೆ ಪ್ಲಾನ್ ಮಾಡ್ತ್. ಇಂದ್ ರಾತ್ರಿ ಕಬ್ಬೆಕ್ಕ್‌ನ ಹೊಡ್ದೆ ಹೊಡಿಯಕುತ ಗ್ಯಾನ ಮಾಡಿಕಂಡ್ ಸಣಪ ಬ್ಯಾಗ ಎದ್ದ್, ಗದ್ದೆಗೆ ಹುಲ್ಲು ಕುಯ್ಯಕೆ ಸನ ಹೋಗದೆ, ಹೊಗೆ ಹಿಡ್ದ ಕೇಪುನ ಕೋವಿನ ಬೆಸಗೆಂದ ತೆಗ್ದ್, ತೊಳ್ದ್, ನೀರ್ ಎಲ್ಲ ಆರ್‌ಸಿರೆಡಿ ಮಾಡ್ತ್. "ನಮ್ಮವು ಹೊತಾರೆಂದ ಏನೋ ಕೆಲ್ಸ ಮಾಡುವೆಲ"ತ ಅಡಿಗೆ ಮನೇಲಿ ರೊಟ್ಟಿ ತಟ್ಟ್‌ತ್ತಿದ್ದ ಸಣವ ಬಂದ್ ನೋಡ್ಕನ ಸಣಪ ಕೋವಿಗೆ ತುಂಬು(ಮದ್ದುಗುಂಡು) ತುಂಬುಸ್ತಿದ್ದೊ. ಏನ್ ವಿಷಯ ತ ಕೇಳ್ಕನ, ಸಣಪ ವಿಷಯ ಎಲ್ಲ ಹೇಳ್ತ್. "ಮೊನ್ನೆ ಹಿಂದ್‌ಗಡೆ ಹುಣುಸೆ ಮರದ ಹತ್ರ ಗುಮ್ಮ ಮರ್‌ಬಸದ್ದ್‌ಕೇಳಿ ಬಚ್ಚಿ ಓಡಿ ಬಂದವು. ಮತ್ತೆ ಇಂದ್ ರಾತ್ರಿ ಬೆಕ್ಕ್ ಹೊಡಿಯಕೆ ಹೊರ್‌ಟ್ಯೊರಿಯ..."ತ ಹಂಗ್‌ಸಿಕಂಡ್ ಸಣವ ಹೇಳ್ಕಾಕನ ಸಣಪಂಗೆ ಚಪ್ಪಲ್‌ಲಿ ಮುಖಕ್ಕೆ ಹೊಡ್ದಂಗೆ ಆತ್. ಇಂದ್ ಎಂತಾರ್ ಆಗಲಿ ರಾತ್ರಿ ಬೆಕ್ಕ್‌ನ ಹೊಡ್ದ್ ನನ್ನ ಧೈರ್ಯನ ತೋರ್‌ಸಿ ಬುಡಕುತ ಹಠಲಿ ಒಂದು ನಿರ್ಧಾರ ಮಾಡ್ತ್ ಸಣಪ. ಆಗಳೆ ಅಂಗಡಿಗೆ ಹೋಗಿ ಹೆಡ್‌ಲೈಟ್‌ಗೆ ಹೊಸ ಬ್ಯಾಟರಿ ತಕಂಡ್ ಬಂದ್. ಲೈಟ್‌ಗೆ ಬ್ಯಾಟರಿ ಹಾಕಿ, ಬೆಳ್‌ಕ್ ಪಾಯಿಂಟ್‌ಲಿ ಬೀಳ್ವಂಗೆ ಮಾಡಿ, ರಾತ್ರಿ ಆಕೆ ಇನ್ನ್ ಎಷ್ಟ್ ಹೊತ್ತು ಉಟ್ಟು, ಕಬ್ಬೆಕ್ಕ್‌ನ ಹೆಂಗೆ ಹೊಡಿಯದುತ, ಹಗಲ್ ಕನ್ಸ್ ಕಾಂಬಕೆ ಸುರು ಮಾಡ್ತ್ ಸಣಪ.

ಹೆಂಗೂ ಸಾಯಂಕಾಲ ಆಗಿ ಸೂರ್ಯ ಮುಳ್‌ಗಿತ್. ಸ್ವಲ್ಪ ಕತ್ತಲೆ ಕತ್ತಲೆ ಆಕನ ಚಂದ್ರ ಮೂಡ್‌ಕಾತ್. ಈಗ ಸಣಪಂಗೆ, ಒಬ್ಬನೆ ಹೋಕಲತ ಹೆದರಿಕೇಲಿ ಮೈ ನಡ್‌ಗಿಕೆ ಸುರು ಆತ್. ಇಂದ್ ಕಬ್ಬೆಕ್ಕ್‌ನ ಮಾತ್ರ ಬುಡಿಕೆ ಆಗದ್. ಯಾಕೆತೇಳ್ರೆ, ಕಬೆಕ್ಕ್‌ನ ಆಸೆ ಒಂದು ಕಡೆ, ಮತ್ತೆ ಸಣವ ಬೆಳಿಗ್ಗೆ ಹೇಳ್‌ದ ಮಾತ್ ಉಟ್ಟಲ ಅದ್ ಸಣಪನ ಮನಸ್ಸಿಗೆ ಕಂತಿ ಹೋಗುಟು. ಅದರ್‌ದೆ ಗ್ಯಾನಲಿ ರಾತ್ರಿ ಸಣಪ ಸರಿಯಾಗಿ ಊಟನೂ ಮಾಡ್ತ್‌ಲೆ. ಸಣವ ಮಾತ್ರ ಲಾಯ್ಕ ಊಟ ಮಾಡಿ ಮಲ್ಗಿತ್. ರಾತ್ರಿ ಸುಮಾರು ಹತ್ತ್‌ಗಂಟೆಗೆ ಚಂದ್ರಕಂತಿದ ಮೇಲೆ ಹೊರಗೆ ಹೋಗಿ ನೋಡ್ರೆ ಕರಿಕತ್ತಲೆ. ಆ ಕತ್ತಲೆನ ನೋಡಿ ಸಣಪನ ಧೈರ್ಯನೇ ಉಡುಗಿ ಹೋದಂಗೆ ಆತ್. ಒಂದು ಕಡೆಂದ ಕಬ್ಬೆಕ್ಕ್‌ನ ಆಸೆ. ಇನ್ನೊಂದು ಕಡೆಂದ ಸಣವನ ಮಾತ್. ಮತ್ತೊಂದು ಕಡೆಂದ ನೋಡ್ರೆ ಒಬ್ಬನೆ ಹೋಕೆ ಧೈರ್ಯ ಇಲ್ಲೆ. ಇಂತಹ ಇಕ್ಕಟ್ಟಿನ ಪರಿಸ್ಥಿತಿಲಿ ಸಣಪ ಈಗ ಸಿಕ್ಕಿ ಹಾಕಂಡ್ತ್. ಎಂತ ಮಾಡ್ದು. ಹೆಂಗೆ ಹೋದುತ ಗ್ಯಾನ ಮಾಡ್ಕನ, " ರಾತ್ರಿ ಹೊರಗೆ ಹೊಕನ ಹಣೆಲಿ ಬಸ್ಮ(ವಿಭೂತಿ) ಇದ್ದರೆ ಕೊಲೆ ಪಿಶಾಚಿಗ ಹತ್ರ ಬಾದುಲೆ..."ತ, ಅಜ್ಜಂದರ್ ಹೇಳ್‌ತ್ತಿದ್ದ ಮಾತ್ ಸಣಪಂಗೆ ಆಗ ಗ್ಯಾನಬಾತ್. ಸಣಪ ಆಗಳೇ ದೇವರ ಕ್ಯಾಂಬರೆಗೆ ಹೋಗಿ ಹಣೆಗೆ ದೊಡ್ಡ ನಾಮ ಹಾಕಂಡ್ತ್. ಈಗ ಸಣಪಂಗೆ ಸ್ವಲ್ಪ ಧೈರ್ಯ ಬಂದಂಗೆ ಆತ್. ತಲೆಗೆ ಲೈಟ್ ಕಟ್ಟಿ, ಕೋವಿನ ಹಿಡ್‌ಕಂಡ್ ಹೋಗೇ... ಬುಡ್ನತ, ಹೊರಗೆ ಹೋದರೆ..., ಮನೇದ್ ಮೆಟ್ಲ್ ಇಳಿಯಕೇನೆ ಧೈರ್ಯ ಬಾದುಲೆ. ಇನ್ನ್ ಹೆಣ್ಣ್(ಸಣವ) ಸಹಾಯ ಇಲ್ಲದೆ ಏನ್ ಮಾಡಿಕೆ ಆಲೆತ ಗೊತ್ತಾತ್ ಸಣಪಂಗೆ. ಮತ್ತೆ ಇನ್ನ್ ಎಂತ ಮಾಡ್ದು? ಹೆಣ್ಣ್‌ನೊಟ್ಟಿಗೆ ಎಲ್ಲ ಹಠಸಾದ್‌ಸ್‌ಕಾಗದ್‌ತ" ಕುಂಟು ನ್ಯಾವನ" ಮಾಡಿಕಂಡ್ ಸೀದಾ ಕ್ಯಾಂಬರೆಗೆ ಹೋಗಿ, ಮಲ್‌ಗಿದ್ದ ಹೆಣ್ಣ್‌ನ ಕಬ್ಬೆಕ್ಕ್ ಹೊಡಿಯಕೆ ಪೋಯಿತ ಕರ್‌ತ್. ಕರಿಯಕಾಕನ ಸಣವ ಸುರೂಲಿ ಪರ್‌ಚಿಕಂಡರೂ, ಬೆಕ್ಕ್‌ದ್ ಆಸೆಂದ ಒಪ್ಪಿಕಂಡ್ ಎದ್ದ್ ಬಂದೊ. ಆದರೆ ಎಂತ ಮಾಡ್ದು, ಸಣವಂಗೂ ರಾತ್ರಿ ಹೋಕೆ ಧೈರ್ಯ ಇಲ್ಲೆ. ಇಬ್ಬರೂ, ಅರ್ಧಂಬರ್ಧ ಧೈರ್ಯನ ಸೇರ್‌ಸಿ ಬೆಕ್ಕ್ ಹೊಡಿಯಕೇತ ಹೊರಟೊ. ಕೋವಿನ ಹಿಡ್‌ಕಂಡ್ ಸಣಪ ಮುಂದೆ ಹೋಕನ, ಸಣವ ಹಿಂದೆಂದ ಹೊತು. ಹೋಗಿ ಮರದ ಬುಡಲಿ ನಿತ್ತ್ ಹಣ್ಣ್ ಗೊಂಚಲಿಗೆ ಲೈಟ್ ಹಾಕ್‌ಕಾಕನ ಸಣ್ಣದಾಗಿ ಕಣ್ಣ್‌ಕಂಡಂಗೆ ಆತ್. ಕಣ್ಣ್ ಒಂದೇ ಕಾಂಬದು ಬ್ಯಾರೆ,?

ಬೆಕ್ಕ್‌ಗ ಬೈನೆ ಮರಲಿ ಇರ್‌ಕಾಕನ ಒಂದೇ ಕಣ್ಣ್ ಸಣ್ಣದಾಗಿ ಒಂದೊದ್ದುಲ ಕಂಡೆದೆ" ತ ಯಾರೋ ಹೇಳ್ದ್ ಸಣಪಂಗೆ ಆಗ ಗ್ಯಾನ ಬಾತ್. ಓ..., ಇದ್ ಅದಂರೆ ಬೆಕ್ಕೆ ಕಂಡದೇತ ಕೋವಿದ್ ಕುದುರೆ ಎಳ್ದ್, ಗುರಿ ನೋಡಿ, ಕಳ್ಳನ ಎಳಿಯಕಾಕನ ಡುಬೂ... ತ ಗುಂಡು ಹಾರ್ತ್. ಗುಂಡು ತಾಗಿದ ರಬಸಲಿ ನಾಲ್ಕೈದ್ ಹಣ್ಣ್‌ಗ ಕೆಳ್ಗೆ ಬಿದ್ದ ಸದ್ದ್‌ಕೇಳ್ತ್, ಬೆಕ್ಕ್ ಬಿದ್ದ ಸದ್ದ್‌ಕೇಳ್ತೇಲೆ. ಎಂತ ಆತ್ತ ಗ್ಯಾನ ಮಾಡಿಕಂಡ್, ಕಣ್ಣ್ ಕಂಡಲ್ಲಿಗೆ ಪುನಃ ಲೈಟ್ ಹಾಕಿರೆ, ಆಗಳೂ ಅಲ್ಲೆ ಕಣ್ಣ ಕಂಡದೆ.... ಇದ್ ಎಂತರ್ದ್ ಕಣ್ಣ್ ಹಿಂಗೆ ಕಾಂಬುದು, ಕೊಲೆ, ಪಿಶಾಚಿಗಳ್‌ದ..ತ, ಹೆದರಿಕಂಡ್ ಮರದ ಎಲ್ಲ ಮೂಲೆಂದ ಲೈಟ್ ಹಾಕಿ ನೋಡ್ರೆ.... ಅದ್ ಚಿಟ್ಟೆ....

ಛೇ.... ಇದ್ದ ಒಂದು ಗುಂಡು ಸುಮ್ಮನಾರ್ ವೇಸ್ಟ್ ಆತಲತ ಬ್ಯಾಜಾರಾತ್ ಸಣಪಂಗೆ " ಅತ್ತೆಮೇಲೆ ಸಿಟ್ಟ್‌ನ ಕೊತ್ತಿ ಮೇಲೆ ತೀರ್‌ಸುದು"ತ ಹೇಳ್ವಂಗೆ," ಮನೆಂದ ಹೊರ್‍ದ್‌ಕಾಕನ ನೀನ್, ಪರ-ಪರತ ಪರ್‍ಕಿ ಕಂಡ್ಡರ ನೋಡಿ ಆಗಳೆ ಗ್ಯಾನ ಮಾಡ್ಲೆ, ಇಂದ್ ಯಾಕೋ ಬ್ಯಾಟೆ ತೋಪರೆ ಆದೆ ಕಂಡದೇತ. ಹಂಗೆ ಆತಲ ಈಗ " ತ, ಸಣವಂಗೆ ಬೈಯ್ಯಕೆ ಸುರು ಮಾಡ್ತ್ ಸಣಪ. " ಈ ಗುಂಡುನ ಎಲಕ್ಕಿ ತೋಟಕ್ಕೆ ಹೋಗಿ ಎಲಕ್ಕಿ ಚಿರಿ ತಿನ್ನುವ ಕಪಿಗಳಿಗೆ ಪರ್‍ಚಿ ಗುಂಡು ಹೊಡ್ಡಿದ್ದರೆ ಕಪಿಗ ಬಾದಾರ್ ಕಡ್ಮೆ ಆತಿತ್. ಸುಮ್ಮನಾರ್ ಗಾಳಿಗೆ ಹೊಡ್ದ್ ಬುಟ್ಟರಿಯಲಾ"ತ ಸಣಪಂಗೆ ತಿರ್‍ಗ್‌ಸಿ ಬೈತ್ ಸಣವ. ಅಂತೂ, " ಬಂದದಾರಿಗೆ ಸುಂಕ ಇಲ್ಲೆ"ತ ಗ್ಯಾನ ಮಾಡಿಕಂಡ್ ಇಬ್ಬರು ಮನೆಗೆ ಬಂದೊ. ಇಂತಾ ಹೆದರಿಕೆ ಸಣಪಂಗೆ. " ಬೆಕ್ಕ್ ಹೊಡಿಯಕೆ ಹೋಕುತಾದರೆ ಧೈರ್‍ಯ್ಯಕೆ ಒಟ್ಟಿಗೆ ಹೆಣ್ಣ್(ಸಣವ)ನ ಕರ್‌ಕಂಡ್ ಹೋದು:. ಈ ವಿಷಯ ಅಂದೊಂದು ಸಲ ಸಣವ ಹೇಳ್ದರ್‌ಂದ ನಂಗೆ ಗೊತ್ತಾದ್.

ಓ, ವಿಷಯನೇ ಮರ್‍ತ್ ಹೋತಲ. ಇನ್ನ್ ವಿಷಯಕೆ ಬರ್‍ನ.

ಆ ಕವಿಗ ಒಳಲ, ಕವಿಗೋಷ್ಠಿಲಿ ತಮ್ಮ ಕವಿತೆಗಳ ವಾಚನ ಮಾಡಿ ಕಾಕನ ಸ್ವಲ್ಪ ಸಣ್ಣದಾಗಿ ಇದ್ದರೆ, ಕೇಳಿಕೆ ಖುಷಿಯಾದೆ, ಅದೇ ಸ್ವಲ್ಪ ಜಾಸ್ತಿ ಆದರೆ ಅದೊಂದು ಕೊರೆತ ಆದೆ. ಈ ರಾಜಕೀಯ ಪುಡಾರಿಗ ಬಾಷಣಲೆ ಕೊರ್‍ದರೆ, ಆ ಶಾಸ್ತ್ರಿಯ ಸಂಗೀತ ಹಾಡವು ಬರಿ ರಾಗಲೆ ಕೊರ್‍ದ್ ಬುಟ್ಟವೆ. ಕೊಡ್‌ಗ್‌ಲಿ ಶಾಲೆಗೆ ಹೋಗುವ ಮಕ್ಕಳಿಗಂತೂ ಮಳೆಗಾಲಲಿ, ಮಳೆಲಿನೆಂದ್, ಕ್ಲಾಸ್‌ಲಿ ಕುದ್ದುಕಂಡ್ ಇರ್‌ಕಾಕನ, ಆ ಚಳಿ, ಗಾಳಿದ್ ಕೊರೆತ ಒಂದು ಸೈಡ್‌ಂದ ಆಕನ, ಮಾಸ್ಟರ್ ಟೀಚರ್‌ಗ ಕೊರಿಯದು ಇನ್ನೊಂದು ಸೈಡ್‌ಂದ. ಅವರ ಪಾಡ್ ಹೇಳ್ದೇ ಬ್ಯಾಡ... ಈ ಸಿನಿಮಾಲಿ ನೋಡಿ, ಇಂಟರ್‌ವೆಲ್ ಆದ ಮೇಲೆ ಸ್ವಲ್ಪ ಎಂತದ್ದೊ ಕ್ಲೈಮ್ಯಾಕ್ಸ್ ಇದ್ದದೆ ಗಡ, ಇಂಟರ್‌ವೆಲ್‌ಕಿಂತ ಮುಂಚೆ ಬರಿ ಅದ್,ಇದ್‌ತ ಕೊರೆತನೆ.

ಒಬ್ಬೊಬ್ಬ ಕೊರಿಯಕೆ ಸುರು ಮಾಡ್ರೆ, ಬೊರ್‌ವೆಲ್ ಕೊರಿಯುವ ಮಿಷನ್ ಸಹ ಬ್ಯಾಡ, ಹಂಗೆ ಕೊರ್‍ದವೆ. ಕೊರ್‍ದ್ ಕೊರ್‍ದ್ ಭೂಮಿ ಅಡಿಂದ ನೀರ್ ತೆಗ್ದಂಗೆ ನಮ್ಮ ತೆಲೆನ ಮಾತ್‌ಲೆ ಕೊರ್‍ದ್ ಒಳಗೆಂದ ಮೆದುಳ್‌ನೆ ತೆಗ್ದ್ ಬುಟ್ಟವೆ. ಕೆಲವು ಜನಗ ಕೊರಿಯಕೆ ಯಾರು ಸಿಕ್ಕುವೇತ ಗ್ಯಾನ ಮಾಡಿಕಂಡ್ ಇದ್ದವೆ. ಅವರ ಕೈಗೆ ಸಿಕ್ಕಿ ಹಾಕಿ ಕೊಂಡರಂತೂ ಬಲೆಲಿ ಮೀನ್ ಸಿಕ್ಕಿ ಹಾಕಿದಷ್ಟ್ ಖುಷಿಯಾದೆ ಅವುಕೆ. ಇನ್ನ್ ಸಿಕ್ಕಿ ಕಂಡವನ ಕತೆ ಮುಗ್ಯುತ್ತನೆ ಗ್ಯಾನ ಮಾಡಕು. ಇನ್ನ್ ಕೆಲವು ಜನ ಹೆಂಗೆಕಲ್ತನೊ? ಯಾರಿಂದ ಕಲ್ತನೊ?ಗುರುಗಳು ಯಾರ್?ತ ಒಂದೂ ಗೊತ್ತಾದುಲೆ. ಈ ಸೋಲೆ ಭೂಮಿಲಿ ಕಾಲ್ ಹುಗ್ದಂಗೆ ಅಷ್ಟ್ ಲಾಯ್ಕಲಿ ಗೊತ್ತಾಗದಂಗೆ ಕೊರ್‍ದವೆ. ಈ ಕೊರಿಯದು ತೇಳ್ದು ಒಂದು ಕಲೆ ಕಂಡದೆ. ನೋಡಿ. ಅದ್ ಎಲ್ಲವುಕೆ ಆದುಲೆ. ಕೆಲವುಕೆ, ಕೊರಿಯಕೆ ವಿಷಯನೆ ಬ್ಯಾಡ, ಸುಮ್ನೆ ಒಂದು ಬರ ಕೊರ್‍ದವೆ. ಅವು ಅಷ್ಟ್ ಲಾಯ್ಕಲಿ ಈ ಕಲೆನ ಕರಗತ ಮಾಡಿಕಂಡೊಳತ ಕಂಡದೆ. ನಿಮಿಗೇನಾದರು, ಕೊರಿಯದು ಮತ್ತೆ ಕೊರ್‍ಸಿಕಂಡ ಅನುಭವ ಆಗ್ಯುಟ, ಆಗಿದ್ದುರ್ಬುಡಿ... . ಅವು ಕೊರಿಯಕಾಕನ ನೀವೇನು ತಲೆಗೆ ಹೆಲ್ಮೆಟ್ ಹಾಕುದೇನು ಬ್ಯಾಡ. ಅವು ಹೇಳ್ದಕೆ ಹೂಂಗುಟ್ಟಿಕಂಡ್, ತೆಲೆ ಆಡ್ಸಿಕಂಡ್ ಇದ್ದರೆ ಕೊರೆತ ಇನ್ನೂ ಜಾಸ್ತಿ ಆದೆ. ಯಾಗ ಜಾಸ್ತಿ ಆತ್ ತೇಳ್ಕನ ಅವ ಹೇಳ್ದಕೆ ಒಂದೆರಡ್ ಉಲ್ಟ ಮಾತಾಡಿ. ಆಗ ನೋಡಿ..., ಕೊರೆತದ ಬ್ಲೇಡ್‌ದ್ ಬಾಯಿ ಅಲ್ಲಿಗೆ ಮುರ್‍ದು ಹೋಗಿ, ಕೊರೆತ ಅಲ್ಲಿಗೆ ಸ್ಟಾಪ್..... ದೇವರು ಕೆಲವುಕೆ ಬಾಯಿ ಕೊಟ್ಟದ್ ಬರೀ ಕೊರಿಯಕೆತ ಕಂಡದೆ. ನೋಡಿ, ಇದೆಲ್ಲ ಒಂದು ತರದ "ಕೊರೆತ."

ಈ "ಕೊರೆತ" ತೇಳುವ ಪದನ ಇನ್ನೊಂದು ಅರ್ಥಲಿ ನೋಡ್ರೆ, ಸಮುದ್ರಲಿ ಏಳುವ ದೊಡ್ಡ ದೊಡ್ಡ ಅಲೆಗ ಬಂದ್, ಸಮುದ್ರ ಕರೆಲಿ ಇರುವ ಮಣ್ಣ್‌ನ ಕೊರ್‍ಕಂಡ್ ಹೋದು. ಮಳೆ ಬಂದ್ ಬರೆ ಜರ್‍ದ್ ಬಿದ್ದೇ, ಮಣ್ಣ್‌ಕೊರ್‍ದ್ ಹೋದು ಸಹ ಒಂದು ತರದ ಕೊರೆತನೆ. ಆ ಖನಿಜಗಳನ್ನ ತೆಗ್ಗಿಯಕೆ ಭೂಮಿನ ಕೊರ್‍ದ್ ಗಣಿ ಮಾಡ್ದು ಮತ್ತೆ, ಕಲ್ಲು ಕೋರೆಲಿ ಕಲ್ಲ್ ಬಡಿಯಕೆ, ಕಲ್ಲ್‌ನ ಕೊರಿಯದು. ಮತ್ತೆ, ಬೋರ್‌ವೆಲ್ಲ್ ತೆಗಿಯಕೆ ಮಣ್ಣ್‌ನ ಕೊರಿಯದು ಸಹ ಒಂದು ತರದ ಕೊರೆತನೆ. ನೋಡಿ, ಮನುಷ್ಯ ಹಿಂಗೆಲ್ಲ ಕೊರ್‍ದರೆ, ಇನ್ನ್ ಪ್ರಕೃತಿಲಿ, ಆ ಹಾಳ್ ಇಲಿಗ ಗದ್ದೆಲಿ ಮಾಳಿ(ಬಿಲ) ಮಾಡಿಕಂಡ್ ಇರಿಕೆ ಮಣ್ಣ್‌ನ ಕೊರಿಯದು ಸಹ ಒಂದು ತರದ ಕೊರೆತನೆ. ಭೂಮಿ ಮೇಲೆ ಹಿಂಗೆಲ್ಲ ಆದರೆ, ಅಗ್ನಿ ಪರ್ವತಗ ಸ್ಫೋಟಗೊಳ್ಳಿಕೆ ಲಾವಾರಸ ಭೂಮಿ ಒಳಗೆಂದ ಮಣ್ಣ್‌ನ ಕೊರ್‍ಕಂಡ್ ಮೇಲೆ ಬಾದು ಸಹ ಒಂದು ತರದ ಭೂಮಿ ಒಳಗೆ ನಡೆಯುವ ಕೊರೆತನೆ. ನೋಡಿ, ಆ ಲಾವಾರಸ ಭೂಮಿನ ಕೊರೆದ ರ್‌ಂದ ತಾನೆ ಮೇಲೆ ಬಾಕೆ ಆದ್. ಅಂತೂ ಈ " ಕೊರೆತ"ಂದ ಕೊರಿಯವುಕೆ ಸ್ವಲ್ಪಾರ್ ಉಪಯೋಗ ಆಗೇ ಆದೆ.

ಈಗ ನೋಡಿ ಗುಜರಾತ್‌ನ ಭುಜ್ ಪಟ್ಟಣಲಿ ಆದ ಅನಾಹುತ ಭೀಕರ ದೃಶ್ಯನ. 30,000 ಜನ ಸತ್ತದ್ ಇದ್ ಸಹ ಕೊರೆತಂದ ಆದ್‌ತ್ತ ಹೇಳಕ್ಕ್.

ನಾನ್ ಈ "ಕೊರೆತ" ದ ಬಗ್ಗೆ ಇಷ್ಟ್ ಕೊರ್‍ದ್ ಗೊತ್ತಾತಲ... ಮತ್ತೆ ಎಂತದೂ ಹೇಳುವೆಲ, ರಾಮಾಯಣ ಕೊರ್‍ದ್ ಕೊರ್‍ದ್ ಕಡೆಗೆ ರಾಮ ಸೀತೆಗೆ ಎಂತ ಆಕುತ ಕೇಳ್ಕನ ಎಂತದೂ ಹೇಳ್ದ್, ಹಂಗ್ಯಾತ್‌ಲೆಲ್ಲ... ಹಂಗ್ಯಾಗದಿದ್ದರೆ, ನಿಮಿಗೆ ಕೊರಿಯದು ಮತ್ತೆ ಕೊರ್‍ಸಿಕಂಬದರ ಬಗ್ಗೆ ಒಳ್ಳೆಯ ಭವಿಷ್ಯ ಉಟ್ಟುತ ಆತ್...!

— ಕಾನಡ್ಕ, ಹನೀರ್ ಅಪ್ಪಾಜಿ, ಮರಗೋಡು.

ಬುದ್ಧಿ ಹಾಳಾದರೆ ಬುದ್ಧನಿಗೂ ಮದ್ದಿಲ್ಲ.

# ಕುಞಪ್ಪನ ವಿದ್ಯಾಭ್ಯಾಸ

ಮಕ್ಕ ಯಾಗೋಳ್ ಸ್ಕೂಲಿಗೆ ಹೋನೇತ ಹೇಳಿರೇ ಅಪ್ಪ ಅವ್ವಂದರ್ ಮನೇಲಿ ಹಟ್ಟಿ ಸಗಣಿ ತೆಗೆಯೋಕು ಗದ್ದೆ ಉಳೋಕ್, ದನ ಮೇಸಕುತ್ತಾ ಹೇಳಿ ಮನೆ ಕೆಲಸ ಉಟ್ಟುತ್ತಾ ಹೇಳಿ ಇದೆಲ್ಲಾ ಯಾರ್, ಮಾಡ್ವೆ?ತಾ ಹೇಳಿ ಮಕ್ಕಳ ಆಸೆ ಆಕಾಂಕ್ಷೆಗಳನ್ನ ನುಚ್ಚು ನೂರು ಮಾಡಿ ಅವರ ಭವಿಷ್ಯನ ಹಾಳ್ ಮಾಡುತ್ತಿದ್ದ್ವೋ ಹಿಂದೆ. ಆದರೆ ಇಂದ್ ಮಕ್ಕಳ ಭವಿಷ್ಯ ಅಪ್ಪ ಅವ್ವನ ಕೈಯಲ್ಲಿ ಉಟ್ಟ್‌ತ್ತಾ ಹೇಳಕ್(ಬರೆಯಕ್). ಆದರೆ ಆಗಿನ ಪರಿಸ್ಥಿತಿ ಹಂಗೇ ಇತ್ತ್. ಮಕ್ಕಳನ್ನ ಓದಿಸಿ ಮುಂದಕ್ಕೆ ತರಕುತ್ತಾ ಆದರೆ ತುಂಬಾ ಕಷ್ಟಪಟ್ಟ್ ಓದಿಸುತ್ತಿದ್ದ್ವೋ ಛಾಗೆ ಸರಕಾರಿ ಕೆಲಸ ಕೂಡ ಗ್ಯಾರಂಟಿ ಆಗಿ ಸಿಕ್ತ್ತಿತ್ತ್. ಆಗಿನ 4ನೇ ಕ್ಲಾಸ್ ಈಗಿನ S.S.L.C.ಗೆ ಸಮತ್ತಾ ಹೇಳಕ್. ಆದರೂ ಮಕ್ಕ ಎರಡ್ ಅಕ್ಷರ ಕಲಿಲಿತ್ತಾ ಹೇಳಿ ನಾಚಪ್ಪ ಮೂರು ಮಕ್ಕಳನ್ನ ಸ್ಕೂಲಿಗೆ ಸೇರಿಸಿತ್. ದೊಡ್ಡವನೇ ಕುಞಪ್ಪ.

ದಿನ ನಿತ್ಯ ಶಾಲೆಗೆ ಹೋಕೆ ಸುರು ಮಾಡ್ದ್ವೋ. 5-6 ಮೈಲ್ ನಡ್‌ದ್ ಹೋದು ಮಳೆಗಾಲಲಿ ಅಂತೂ ಹೊಳೆ ಇದ್ದರೆ ದೋಣಿ ದಾಟಿಯೋ ಅಥವಾ ಹೊಳೆ ನೀರ್ ಇಳ್ದ ಮೇಲೆ ಸ್ಕೂಲಿಗೆ ಹೋದು. ಒಂದು ದೊಡ್ಡ ಮರದ ಹಿಡಿಯ ಕೊಕ್ಕೆ ಕೊಡೆ ಹಿಡಕಂಡ್ ತಮ್ಮನ ತಂಗೆನ ಅದರ್ಲಿ ಸುಧಾರಿಸಿಕಂಡ್ ಸ್ಕೂಲ್ ಬಿಟ್ಟಮೇಲೆ ಆ ಕೊಡೆಲಿ ಮೂರ್ ಜನ ಒಟ್ಟಿಗೆ ಮನೆಗೆ ಬಾದು. ಅರ್ಧ ಬಟ್ಟೆ ಚೆಂಡಿಯಾಗಿ ನೆನಕಂಡ್ ಮನೆಗೆ ಒಂದ್ ಹೋಗಿ ಒಲೆ ಬುಡಲಿ ಕುದ್ದ್‌ಕಂಡ್ ಕೈ ಕಾಲ್ ನಡಗಿಕಂಡ್ ಬಟ್ಟೆ ಒಣಗಿಸ್‌ಕನ ಕೈ ಒಲೆಮುಂದೆ ಸುಮ್ಮನೆ ಇರುದುಲ್ಲೆ. ಅವ್ವ ಮಣ್ಣ್‌ಮೆತ್ತಿ ಒಣಗಿಸಿ ಮಡಗಿದ್ದ ಹಸ್‌ನಕ್ಕಿ ಬೀಜನ ಒಲೆ ಬೂದಿಯೊಳಗೆ ಹಾಕಿ ಕಂಡ್ ಬೂದಿನ ಕೆದಕಿಕಂಡ್ ಇರ್‌ಕನ ಹಸ್‌ನಕ್ಕಿ ಬೀಜ ಬಟ್ಟ್‌ತಾ! ಹೊಟ್ಟಿತ್. ಆಗ ಅವ್ವನ ಕೈ ಒಲೆಲಿ ಮಡ್ಡಿ ತಿರ್‌ಗಿಸ್‌ಕೆತ ಇದ್ದ ಕಳೀಲಿ ಮಜ್ಜನ ಬೆನ್ನಿಗೆ ಬಟ್ಟ್‌ತಾ?! ಬಿದ್ದತ್. "ಅವ್ವಾ", ಎಷ್ಟ್ ಹೇಳಿರೆ ಕೇಳಿಕಿಲ್ಲೆ ಹೋಗಿ ಗುಡ್ಡಲಿ ಬೆಂಕಿ ಹಾಕೋಳೋ. ಅಲ್ಲಿ ಹೋಗಿ ಕೂರಿಕೆ ನಿಮಗೆ ಏನ್‌ತಾ? ಹೇಳಿಕಂಡ್ ಮಕ್ಕಳನ್ನ ಗುಡ್ಡಕ್ಕೆ ಓಡಿಸಿದ್ದ್ವೋ. ಅಷ್ಟು ಹೊತ್ತಿಗೆ ಅಪ್ಪಾ ಗದ್ದೆಂದ ಬಾಕನ ಏಸಂಡ್‌ನ್ನ ಕೈಲಿ ಹಿಡಕಂಡ್ ಬಾತ್. ಅದನ್ನ ಕಂಡ ಮಕ್ಕ, ಓಡಿ ಹೋಗಿ ಕಿತ್ತ್‌ಕಂಡ್ ಅದನ್ನ ಗುಡ್ಡದ ಒಲೆಗೆ ಹಾಕಿ ಸುಟ್ಟ್ ತಿಂದಾಕನ ಮಕ್ಕಾ" ಅವ್ವಾ" ಕಾಫಿ ಕೊಟ್ಟೀಯಾ?" ಅಷ್ಟೊತ್ತಿಗೆ ಅವ್ವಾ ತಂದೆ ಇರಿ ಮಕ್ಕಳೇತ ಹೇಳಿ ಮಕ್ಕಳಿಗೆ ಕಾಫಿ ಒಣಗಿದ ರೊಟ್ಟಿ ಹಿಡಕಂಡ್ ಮನೆಂದ ಗುಡ್ಡಕ್ಕೆ ಬಾಕನ ಕಾಲ್‌ಜಾರಿ ಬಿದ್ದತ್," ಅಯ್ಯಯ್ಯೋ ನನ್ನ ಸೊಂಟ ಹೋತ್"ತಾ ಅವ್ವಾ ಕಿರಿಚಿಕೆ ಸುರು ಮಾಡ್ತ್". ಅಪ್ಪಾ, ಏನಾತ್‌ನೇತ ಕೈಲಿ ಕೊಟ್ಟ್ ಹಿಡಕಂಡ್ ಓಡಿ ಬಾತ್. ಮಕ್ಕ ಒಲೆ ಬುಡಲಿ ಕುದ್ದುಕಂಡ್ ಮುಸಿ, ಮುಸಿ, ನಗೆಯಾಡ್‌ದ್, ಜೋರಾಗಿ ನಗಾಡಿರೆ ಪುನಃ ಎಲ್ಲಿ ಬೆನ್ನಿಗೆ ಬಿದ್ದೇತಾ ಅಲ್ಲಿಂದ ಎದ್ದ್ ಒಳಗೆ ಹೊರಟೋ. ಅವ್ವನ ಅಪ್ಪನೇ ಸುದಾರಿಸಿತ್ ". ಅಪ್ಪಾ ಒಳಗೆ ಹೋಗಿ ಬೇವಿನ ಎಣ್ಣೆ ತಂದ್ ಅವ್ವನ ಸೊಂಟಕ್ಕೆ ಹಾಕಿ ತಿಕ್ಕಿತ್. "ಅಪ್ಪಾ" ಹೇಳ್ತ್, ಮಕ್ಕಳೆ ಹೋಗಿ ಬಾಯಿ ಪಠ ಹೇಳಿ, ಹೋಗಿ, .. ಹೋಗಿ.. " ನಾನ್.. ಬನ್ನೆ ಈಗ ನಿಮ್ಮನ ನೆಗಾಡಿಸಿನೇ(ಅವ್ವನ ಬೈಗಳ ಬೇರೆ) ಸೊಂಟ ಬೇನೆಯಾದರು ಬಾಯಿಗೆ ಏನ್ ಕಮ್ಮಿ ಇಲ್ಲೆಂತ ಮಕ್ಕ ಗೊಣಕಿಕಂಡ್ ಬಾಯಿ ಪಠ ಹೇಳಿಕೆ ಹೊರಟೋ.

ಸಾಯಂಕಾಲ ಆರು ಗಂಟೆ ಹೊತ್ತಿಗೆ ಐಮರ ಸುತ್ತುಮಕ್ಕ ಕುದ್ದುಕಂಡ್ ಮಗ್ಗಿ ಹೇಳಿಕೆ ಸುರುಮಾಡುವೆ. ಒಂದು.. ಒಂದಲೀ ಒಂದು, ಒಂದು ಎರಡಲೀ ಎರಡ್, ಅಷ್ಟೊತ್ತಿಗೆ ತಮ್ಮ ಚಾಮಿಗೆ ಉಚ್ಚೆ ಬಾತ್ ಉಚ್ಚೆ ಹೋಯ್ಯಕೆ ತಾ ಹೋದರೇ ಅವ್ವಾ ಅಡಿಗೆ ಮನೇಲಿ ಏನ್ ಮಾಡ್‌ದೆತ್ತಾ ಬಗ್ಗಿ, ಬಗ್ಗಿ ನೋಡಿ, ಎಂತಾ? ಗೈಪು ಮಾಡಿಯುತ್ತಾ ನೋಡಿಕಂಡ್ ಬಂದ್ ಪುನ ಮಗ್ಗಿ ಸುರು ಮಾಡ್ದ್ವೋ. ಎರಡೊಂದಲೀ ಎರಡ್ ಎರಡೆರಡ್‌ಲಿ ನಾಕ್ ಹೀಂಗೆ ಮಗ್ಗಿ ಹೇಳ್‌ಕನ "ಅವ್ವಂದ್ ರಾಗ ಬೇರೆ, ಕುಞ ದನಗಳ ಹಟ್ಟಿಗೆ ಬಂದಳೊನಾ? ಇಲ್ಲೆ ಅವ್ವಾ, ಕುಞ ಕುದ್ದಲ್ಲಿ ಎರಡ್ ಮೂರ್‌ಲಿ ಆರ್ ಕುಞ ಹಸ್‌ನ ಕರಿಯಕೇ ಸುರುಮಾಡ್ತ್. "ಪಟ್ಟತೀ.. ಹೀ ಹೀ ಬಾ. ಅಷ್ಟೊತ್ತಿಗೆ ಅಪ್ಪಾ ಗಂಗೆ ಕರ್‌ನಾ ಕಟ್ಟಿದಾ? ಮೋರಾ ಎತ್ತ್ ಬಂದುಟ್ಟಾ? ತಂಗಿ ಚಿಮ್ಮಿ ಎದ್ದ್ ಹೋಗಿ ಜಗಲಲ್ಲಿ ನಿತ್ತ್‌ಕಂಡ್ ಮೋರಾ ಎತ್ತ್ ದೂರಲೀ ಬರ್‌ತ್ತಾ ಉಟ್ಟ್ ಅಪ್ಪಾ. ಅಲ್ಲಿಗೆ ಎರಡನೇ ಮಗ್ಗಿ ಮುಗ್‌ತ್, ಅಲ್ಲಿಂದ ಮೂರನೇ ಮಗ್ಗಿ ಸುರುಮಾಡ್ದ್ವೋ. ಮೂರ್... ಒಂದಲೀ ಮೂರ್, ಮೂರ್ ಎರಡಲೀ ಆರ್‌ತ್ತಾ ಹೇಳ್‌ಕನ ತಂಗಿ ಚಿಮ್ಮಿ ಅಪ್ಪಾ, ಅಪ್ಪಾ ನಂಗೆ ಸ್ಕೂಲಿಗೇ ಹೋಕನ ಮೂರ್ ಕಾಸ್ ಕೊಡಕು ಆತಾ? "ಅಪ್ಪಾ ಯಾಕೆ?" ಅದ್ ಸ್ಕೂಲಿಲೀ ಇಂದ್ ಸಿನಿಮಾ ತೋರಿಸುವೇತಾ ? ಮಾಸ್ತರ್ ಹೇಳಿಟ್ಟು. ಅಪ್ಪಾ "ನಾಳೆ ತಾನೇ" ನೀನ್ ಈಗೊಮ್ಮೆ ಮಗ್ಗಿ ಹೇಳ್. ಹೇಂಗೂ ಮಗ್ಗಿ ಹೇಳೋ ಕೆಲಸ ಮುಗ್‌ತ್. ಇನ್ನ್ ಕೈಕಾಲ್ ತೊಳ್‌ದ್ ದೇವರಿಗೆ ಕೈಮುಗ್‌ದ್ ಬೆನಕ ಬೆನಕ, ಏಕದಂತ ಪಚ್ಚೆಕಲ್ಲು ಪಾನಿ ಮೆಟ್ಟು, ಊಟಕ್ಕೆ ಆಗುವವರೆಗೆ ಒಂದು ಸೀಮೆ ಎಣ್ಣೆ ಬುಡ್ಡಿನ ನೆಲಲ್ಲಿ ಇಟ್‌ಕಂಡ್ ಸುತ್ತಾ ಮಕ್ಕ ಓದುದು ಬರೆಯೋದ್ ಮಾಡ್‌ತ್ತಿದ್ದ್ವೋ. ಅದರಲ್ಲಿ ಸಹ ಪೆನ್ಸಿಲ್‌ಗೋ ಅಥವಾ ಬಳಪಕ್ಕೋ ಜಗಳ ಮಾಡಿಕಂಡ್ ಸ್ಕೂಲ್‌ಲಿ ಕೊಟ್ಟ ಹೋಮ್ ವರ್ಕ್‌ನ ಮುಗಿಸಿತ್ತಿದ್ದ್ವೋ. ಇನ್ನ್ ಊಟ ಮಾಡಿ ಮಲಗಿ ಬೆಳಿಗ್ಗೆ ಎದ್ದ್ ದಿನ ಪ್ರತಿ ಗದ್ದೆ ಉಳುವ ಅಪ್ಪಂಗೆ ಗದ್ದೆಗೆ ಹೋಗಿ ಕಾಫಿ ರೊಟ್ಟಿ ಕೊಟ್ಟ್ ಆ ಮೇಲೆ ಸ್ಕೂಲಿಗೆ ಹೋಗ್‌ತ್ತಿತ್ ಕುಞ.

ಸ್ಕೂಲಿಗೆ ಹೋಕನ ದಾರಿಯುದ್ದಕ್ಕೂ ಚಿನ್ನಿದಾಂಡ್ ಆಟ ಆಡಿಕಂಡ್ ಸ್ಕೂಲಿಗೆ ಹೋಗಿ ತಲಪುಕನ 10ಗಂಟೆಯಾಗ್‌ತ್ತಿತ್. ಇದ್ ಮಕ್ಕಳ ದಿನಪ್ರತಿ ಸಾಮಾನ್ಯ ಆಟ ಆಗಿತ್ತ್.

---

**ಮಂಗನಿಗೆ ಮರ ಹತ್ತಲು ಏಣಿ ಬೇಕೆ?**

"ಯಾಕೆ?ಕುಞಪ್ಪ ಇಷ್ಟು ತಡವಾಗಿ ಬಂದಿದ್ದಿಯಾ?" ಅಂತ ಮಾಸ್ತರ್ ಕೇಳಿರೆ ನಾನ್ ಗದ್ದೆ ಉತ್ತು ಬರುವಾಗ ಇಷ್ಟೊತ್ತ್ ಆಯಿತು ಮಾಸ್ತರೇ. "ನೋಡಿ ಮಕ್ಕಳೆ ಕುಞಪ್ಪನ ಹಾಗೆ ಒಳ್ಳೆ ಬುದ್ದಿ ಕಲಿಬೇಕು ತಂದೆ ತಾಯಿಗೆ ಸಹಾಯಕವಾಗಿ ಮತ್ತು ಶ್ರದ್ದೆಯಿಂದ ದುಡಿದು ವಿದ್ಯೆಯನ್ನು ನಿಷ್ಠೆಯಿಂದ ಕಲಿಬೇಕು ಎಂದಾಗ, ಕುಞಪ್ಪಂಗೆ ಮಾಸ್ತರ್ ಎಂತ ಹೇಳ್ತ್ ಒಂದು ಗೊತ್ತಾತ್ತಿಲ್ಲೆ. ಮಾಸ್ತ್ರ ಹೇಳಿದನ್ನ ಅಲ್ಲೆ ಬುಟ್ಟತ್ ಮನೆಗೆ ಬಂದ ಕುಞ " ಅಪ್ಪಾ, ಅಪ್ಪಾ" ನಿನ್ನ ಮಾಸ್ತರ್ ತುಂಬಾ ಹೊಗಳ್‌ತ್‌ತ, ಹೇಳ್‌ಕನ , " ಯಾಕೆಂತಾ?' ಗೊತ್ತ್‌ಲೆ ಅಪ್ಪಾ" ನೀನ್ ಗದ್ದೆ ಉಳ್‌ಕನ ನಾನ್ ಕಾಫಿ ರೊಟ್ಟಿ ತಂದ್ ಕೊಟ್ಟನೆ ಅಲ್ಲಾ ಅದಕ್ಕೆತ್ತಾ ಹೇಳ್‌ತ್, ಅಪ್ಪಂಗೆ ಒಂದು ಅರ್ಥ ಆತ್‌ಲ್ಲೆ.

ಒಂದು ದಿನ ಸಂತೆಗೆ ಹೋದ ಅಪ್ಪ ಮಾಸ್ತರ್‌ನ ಕಂಡ್ ಮಾತ್‌ಡ್‌ಕನ ನಿಮ್ಮ ಮಜ ತುಂಬಾ ಬುದ್ದಿವಂತ "ಯಾಕೆ? ಮಾಸ್ತರೆ?" ನಿಮಗೆ ಸಹಾಯ ಮಾಡಿ ಸ್ಕೂಲಿಗೆ ಬಂದ್ ವಿದ್ಯಾ ಕಲ್‌ತ್ತದೆ. ಅದಕ್ಕೆ ಖುಷಿಪಡೋಕು; " ಅಂದರೆ ಮಜ ಈ ವರ್ಷ ಪಾಸ್‌ತಾ ? ಹೇಳಕ್ ಅಲ್ಲಾ ಮೇಸ್ಟ್ರೇ?" ಅಲ್ಲಾ(ನಾಚಪ್ಪ) ನಂಜಪ್ಪನವರೇ ವಿದ್ಯೆ ಎಲ್ಲಿ ಹೋದೆ ಹೇಳಿ. ಅದೇ ಕ್ಲಾಸ್‌ಲೀ ಇದ್ದದೇ ಮುಂದಿ ನ ಕ್ಲಾಸ್‌ಗೆ ಕಳಸೊಕ್‌ತ್ತಾ ಇದ್ದೆ. ಆದರೆ ಇಂವ ಸ್ವಲ್ಪ ಸಣ್ಣವ ಎತ್ತರ ಇಲ್ಲೆ. ಆ ಮಕ್ಕ ಆ ಕ್ಲಾಸ್‌ಲಿ ಮುಂದಕ್ಕೆ ಕುದ್ದರೇ ಇವಂಗೆ ಬೋರ್ಡ್ ಕಾಂಬೊದಿಲ್ಲೆ. ಅದಕ್ಕೆ ಈ ವರ್ಷ ಕ್ಲಾಸ್‌ಲೀ ಮುಂದೆ ಕೂರಿಸೊಳೆ ನೀವು ಬೇಜರ ಮಾಡ್ ಬೇಡಿತ್ತಾ ಹೇಳಿ ಅಪ್ಪನ ಮಾಸ್ತರ್ ಕಳಿಸಿತ್. ಮೂರ್ ವರ್ಷ ಕಳೆದರ್ ಹಳೆ ಮಾಸ್ತರ್. ಹಳೆ ಬೆಂಚು. ಹೊಸ ಹೊಸ ಮಕ್ಕ ನಾನೇ ಗಟ್ಟಿಂಗಂತಾ ! ಹೇಳಿಕಂಡ್ ಮಕ್ಕಳಿಗೆ ಅವನೇ ಲೀಡರ್ ಆತ್,

— ಅಜಡ್ಕ ರಾಣಿ ಬಾಲಕೃಷ್ಣ. ಕುಶಾಲನಗರ

# ಮಿಲ್ಟ್ರಿ ಮೈದ

ಬಾವ ತುಂಬಾ ಕಳ್ಳು ಕುಡಿಯುವ ಜನ. ಹಿಂಗೆ ಇರ್‌ಕಾಕನ ಅವರ ತಂಗೆಗೆ ಒಂದು ಒಳ್ಳೆ ಆಫರ್ ಬಂದದೆ. ಹೈದ ಮಿಲ್ಟ್ರಿಲಿ ಇರ್‍ದ್ದ, ತಂಗೆಗೆ ಏನ್ ಕೆಲ್ಸಯಿಲ್ಲೆ. ಇವಳು ಮನೆಲೆ ಇರ್‍ದ್ದ. ಮಿಲ್ಟ್ರಿಯವಂತೇಳಿ ಅಣ್ಣಾ ಸಂಬಂದ ಒಪ್ಪಿಕಣ್‌ತ್. ಮತ್ತೆ ತಂಗೆನ ಕೇಳ್‌ತ್ ನಿಂಗೆ ಈ ಹೈದ ಒಪ್ಪಿಗೆ ಉಟ್ಟಾ ತಾ. ತಂಗೆ ಹೇಳ್ತ್ ನಿಮ್ಗೆ ಒಪ್ಪಿಗೆಯಾದರೆ ನಂಗೆ ಒಪ್ಪಿಗೆಂತೇಳಿ ಅಡಿಗೆ ಮನೆಂದ ಅಣ್ಣಂಗೆ ಸಮಾಚಾರ ಸಿಕ್ಕ್‌ತ್. ಅಣ್ಣಂಗೆ ಖುಷಿಯಾತ್. ಹೆಂಗಾರಾಗಲಿ ಮೈದ ಬಾಕಕನ ಕುಪ್ಪಿ ತಂದದೆ. ಇಬ್ಬರು ಸೇರಿ ಲಾಯ್ಕಲಿ ಕುಡಿಯಕ್ಕಲ್ಲಾಂತಾ. ಮೈದ ಕಳ್ಳು ಕುಡಿಯದೆ ಇರ್‍ದ್ದ ಬಾವಂಗೆ ಗೊತ್ತ್ಲೆ. ಮೈದ 2-3 ಸಲ ರಜೆಲಿ ಬಾತ್. ಬಾಕಕನ ಕುಪ್ಪಿ, ಮಾಂಸ ತಾದು. ಇದ್ ಮಿಲ್ಟ್ರಿಯವರಲ್ಲಿರುವ ಸ್ವಬಾವ. ಮೂರನೆ ವರ್ಷಲಿ ನಾದಿನಿಗೆ ಮೊದ್ವೆಯಿತ್ತ್. ಅದ್ಕೆ ಬಾಕೆ ಆತ್ಲೆ. ಅಂದರೆ ಆ ಸಮಯಕ್ಕೆ ಮಿಲ್ಟ್ರಿಯವಂಗೆ ರಜೆ ಸಿಕ್ಕುಲೆ. ಹೆಣ್ಣಿನ ಸಂಸಾರಲಿ ಮತ್ತೊಂದು ಮೊದ್ವೆ. ಹೆಣ್ಣ್ ಕಾಗದ ಬರ್‍ದ್ದ ಹೆಂಗೆಲ್ಲೊ ಮಾಡಿ ಗಂಡನ ರಜೆಲಿ ಕರ್‌ಸ್ತ್. ಇಬ್ಬರು ತವರುಮನೆ ಮೊದ್ವೆಗೆಂತೇಳಿ ಹೋದೊ. ಮೂರ್ತ ಕಳ್‌ತ್ತ್. ಊಟ ಮಾಡಿಕಂಡ್ ಇಬ್ಬರೂ ಮನೆಗೆ ಬಂದೊ. ಸ್ವಲ್ಪ ಹೊತ್ತು ಕಳ್ದ ಮ್ಯಾಲೆ ಬಾವ ಮೊದ್ವೆ ಮನೆಂದ ಬಾತ್. ಬಾವ ಕುಡ್ದು ತೇಲಿಯಾಡ್ದೆ. ಬಾಯಿಂದ ಮಾತು ಹೊರ್‌ಟ್ಟದೆ. ಅಂದರೆ ಅರ್ಥ ಆಲೆ. ಜಲ್ಲ್ ಸುರ್‍ಸಿಕಂಡ್ ದುಂಡು ವರ್‍ಸಿಕಂಡ್ ಅದು ಉಟ್ಟಾ ಬಾವಾಂತ ಕೇಳ್ತ್. ಇಂವಂಗೆ ಅರ್ಥ ಆತ್ಲೆ. ಮೈದ ಹೇಳ್‌ತ್ ಇಲ್ಲೆಂತಾ. ಅಷ್ಟೊತ್ತಿಗೆ ತಂಗೆ ಒಳಗೆಂದ ಬಾತ್. ತಂಗೆನ ಕೇಳ್‌ತ್ ಎಂತಾರ್ ತಂದೊಳ್ನೆ. ಅಮ್ಮ ನಾ ಯಂತ ತಾದು ಅವರ್ನ ಕೇಳ್‌ತೇಳಿ ಅವ್ವ ಹೇಳ್ತ್. ಬಾವಂಗೆ ಕಳ್ಳು ಕುಡ್ದು ಸ್ವಯೆಂದಿಲ್ಲೆ. ಇಂವ ಜೋರಾಗಿ ಕೈಯಾಲೆಲ್ಲಾ ನಿಂತ್ ಕಂಡ್ ಮಿಲ್ಟ್ರಿಯುಂವಗಡ. ಮಿಲ್ಟ್ರಿಯವ ನಿಮ್ಗೆ ಇಂದು ಮೊದ್ವುಂತೇಳಿ ಗೊತ್ತ್ಲೆ. ಬಂದೋಳೊ ಬರಿ ಕೈ ಆಡಿಸಿಕಂಡ್. ನಾಲ್ಕೈದು ಕುಪ್ಪಿ ಹಿಡ್ಕಂಡ್ ಬಾದಲ್ಲ. ಬನ್ನಿ ನಾ ಕುಡ್ಸಿನೆಂತೇಳಿ ಕಿರ್‌ಚಿ ಕಿರ್‌ಚಿ ನೆಂಟರ ಮುಂದೆ ಹೇಳ್ದೊ. ಇಂವ ನನ್ನ ತಂಗೆ ಗಂಡ ಮಿಲ್ಟ್ರಿಯವ್. ಆಚೆಕರೆ ಪೆಮ್ಮಿ ಉಟ್ಟೆಲ್ಲಾ ಅಂವ ರಜೆಲ್ಲಿ ಬಾಕಕನ ತಾದೂ ನೋಡೋಕು. ತಂದದರ ತಾಙೂ ಕುಡ್ವದೆ ಎಲ್ಲವ್ವೂ ಕರ್ದ್ ಕುಡ್ಸಿದೆ. ಅಂವ ಕುಡಿಯೋದರ ನೋಡೋಕ್ ಕುಪ್ಪಿ ಎತ್ತಿ ಹಂಗೆ ಗಟ ಗಟಾಂತ ಬಾಯ್ಗೆ ಬಗ್ಗಿಸಿದೆ. ಅಂವುರ್ರ ಮಿಲ್ಟ್ರಿಯವಂತೇಳಿ ಬಯ್ಕಂಡ್ ಕೊಂಬರೆ ಹುಕ್ಕಿ ಕಟ್ಲ್ ಮೂಲೆಲಿ ಸಾರಾಯಿ ಹುಡ್ಕಿದೂ. ಅಲ್ಲಿ ಇದ್ದರೆ ತ್ತಾನೆ ಸಿಕ್ಕುದು. ಇದರ ನೋಡ್ದ್. ತಂಗೆ ಗಂಡ ತಂದ ಮಿಲ್ಟ್ರಿ ಕಳ್ಳುನ ಮುಕ್ಕಾಲು ಗ್ಲಾಸ್ ಹೊಯ್ದ್ ಕೊಡ್ತು ಅಣ್ಣಂಗೆ. ಅದರ ಕುಡ್ದ್ ಮಲಗಿದ ಬಾವ ಬೆಳಗಾಗಿ ಮದ್ಯಾಹ್ನನ್ನಾತ್ ಇನ್ನಾದರೂ ಎದ್ದತ್ಲೆ. ಒಮ್ಮೆ ನೀವಾದರೂ ಹೋಗಿ ಅವರ ಹೇಳ್ಸಿಏರಾ.

— ಕೊರಂಬಡ್ಕ ಹೇಮ ಕುಶಾಲಪ್ಪ, ಬೆಂಗಳೂರು.

ನಗೆ ಹಿನಿ

ಶ್ರೀಮಂತ ರೋಗಿಯೊಬ್ಬಳ್ ಡಾ. ಅನಿತಾಳ ಅನು ಕ್ಲಿನಿಕ್‌ಗೆ ಬಂದಿತ್ತ್.

**ಡಾ. ಅನಿತಾ :** "ಆರೋಗ್ಯ ಕಾಪಾಡಿಕಣೆಕೆ ನೀವ್ ದಿನಾ ಎರೆಡ್ ಕಿಲೋ ಮೀಟರ್‌ಗಳಷ್ಟ ಪ್ರಯಾಣ ಮಾಡೊಕು".

**ರೋಗಿ :** ನಾನ್ ಪ್ರಯಾಣ ಮಾಡ್‌ನೆ. ಆದರೆ ಕಾರಿಗೆ ಪೆಟ್ರೋಲ್ ಬೇಕಲೆ.

**ಕಸ್ತೂರಿಯ ಪರಿಮಳ ಕತ್ತೆಗೇನು ಗೊತ್ತು.**

# ಬಳ್ಳಿಗೆ ಹೋಲ್ಸುದು ಬ್ಯಾಡ

ಕೊಡಗ್ ಜಿಲ್ಲೆ ಮೆತ್ತೆ ಜನಂಗ ತುಂಬಾ ಹೆಸರ್ ಪಡ್ದ್ಟಟ್ಟು. ಅದರ್ಲಿ ಹೆಚ್ಚಿನ ಪಟ್ಟೆಗೆ ಗೌಡರ್‌ಗಳೆ ಕಾರಣತೇಳಕ್. ಡಾಕ್ಟರ್, ಇಂಜಿನಿಯರ್ಸ್, ಕ್ಯಾಪ್ಟನ್, ಆಫೀಸರ್ಸ್, ಬಿಸ್ಸಿನೆಸ್. ಮಾಡುವು ವಿದ್ಯಾವಂತರ್ ಬುದ್ಧಿವಂತರ್ ಒಳ ಎಲ್ಲಾ ಕಡೆ. ಸಂಘ ಸಂಸ್ಥೆ, ಸ್ಕೂಲು ಉಟ್ಟು, ಗೌಡ ಅಕಾಡೆಮಿ, ಸಮ್ಮೇಳನ. ಕೈಲ್ ಪೊದ್ ಆಚರಿಸ್ತ ಒಳೊಯಾಕೆ? ತಿಂದ್ ಕುಡ್ದ್ ಜೋಬು ಒಳಗೆ ಕೈ ಹಾಕಂಡ್ ಹೋಕೆ ಅಲ್ಲ. ನಾವು ಒಗ್ಗಟ್ಟಿರಕು. ಒಂದಾಗಿ ಬಾಳಕು, ನಮ್ಮದೇ ಆದ ನೆಲೆ ನಮಿಗಿರಕುತೇಳಿ. ಒಬ್ಬ ನಮ್ಮಂವ ಇನ್ನೊಬ್ಬ..... ಮನ್ಸಂಗೆ ಜೀವ ಹೋಗುವ ಪರಿಸ್ಥಿತಿ ಬಂದದೆ. ನಮ್ಮಂವ ನಾಲ್ಕ್ ದೇವ್ರುನ ಬೇಡ್‌ದೆ, ಕಾಪಾಡ್‌ತ. ಆಗ ಅವು ನೀನ್ ಹೋಗ್, ನೀನ್ ಹೋಗ್ ತ್ತೇಳಿ ಆಕನ ಜೀವ ಹೋಗಿ ಆದೆ. ಅದೇ ಇನ್ನೊಬ್ಬ ಒಂದು ದೇವ್ರುನ ಬೇಡ್‌ಕನ ಅವನ ಬಂದ್ ಕಾಪಾಡ್‌ದೆ. ನಮ್ಮಂವನ ನಾಕ್ ದೇವ್ರು ಒಟ್ಟಿಗೆ ಬಂದಿದ್ದರೆ ಅವನಕಿಂತ ಲಾಯ್ಕ ನಮ್ಮವನ ಕಾಪಾಡಕಾಗಿತ್. ನಮ್ಮ ಜನ ಹತ್ತ್ ಜನ ಕಾಣುವಂಗೆ ಆಲದ ಮರಕ್ಕೆ ಪೂಜೆ ಮಾಡುವೆ. ಯಾರ್ ಕಾಣದಿರ್‌ಕನ ಕೊಡ್ಲಿತಕಂಡ್ ಕಡ್ವವೆ. ಇದರಿಂದ ಎಂಥ ಪ್ರಯೋಜನ. ಒಬ್ಬ ನಮ್ಮವಂಗೆ ಸೂ...... ತ್ತೇಳ್ದ್ ಆಗ ಅಂವ ಇನ್ನೊಬ್ಬನ ಕೇಳ್ದ್ ಹಂಗೆ ಹೇಳ್‌ರೆ ಎಂತತಾ. ಅಷ್ಟ್ ಅರ್ಥ ಮಾಡಿಕಣಕ್ಕೆ ಗೊತ್ತಿಲ್ಲದವು ಒಳೊ. ಯಾಕೆ ಹಿಂಗಾದೊ? ಗಡ ಮಾತಿಗೆ ಬೆಲೆ ಕೊಡಿ. ನಿಮ್ಮ ಬುದ್ಧಿವಂತಿಕೆನ ಉಪಯೋಗಿಸಿ. ಆಗ ಈತರ ಆದುಲೆ. ಅರೆಭಾಷೆ ಗೌಡರ್ ಆಗಿ ನಾವು ಬಳ್ಳಿಗೆ ಹೋಲಿಕೆ ಆದು ಬ್ಯಾಡ. ಯಾಕೆ ತೇಳಿರೆ ಬಳ್ಳಿ ಮರನ ನಂಬಿಕಂಡ್ ಇರ್ದು. ಅದೇ ಮರ ನಾವಾದರೆ ಸ್ವತಂತ್ರವಾಗಿ ಇರಕ್.

— ಕುಂಜಿಲನ ಆರ್. ರಾಜ, ಕುಂಬಳದಾಳು.

---

13 ನೇ ಪುಟದಿಂದ

ಪೂಜಾಯ ಪದ್ಮನಾಭಾಯ ಬಜತಾಂ ಕಲ್ಪವೃಕ್ಷಾಯ ತಾ ಹೇಳಿ ಈ ಪ್ರಸಾದನ ಸದಾ ಜೊತೆಗಿಟ್ಟುಕೊಂಡರೆ ನಿಮ್ಮ ಕಾರ್ಯಸಿದ್ದಿಯಾದೆ ತಾ ಹೇಳಿ. ಮೆಲ್ಲಂಗೆ ಜೋಳಿಗೆನ ಎತ್ತಿಕಂಡ್ ಮೇಲೆ ಎದ್ದತ್.

ಅಜ್ಜಿ ನನ್ನ ಶಾಸ್ತ್ರ ಲಕ್ಷಣಲಿ ಇಲ್ಲೇ ಹತ್ರದಲ್ಲಿ ಇನ್ನೊಂದು ಬಾಲಕಿಗೆ ಕಂಕಣ ಬಲ ಕೂಡಿ ಬರುವ ಲಕ್ಷಣ ಕಾಣ್ಸ್‌ತ್. ಆ ಗೂಡೆದ್ ಒಂದ್‌ಕಾಲು ಊನ ಇರ್ದು. ಈ ಹಿಂದೆ ಒಂದು ಜಲದೊಳಗಿನ ಅಪಾಯಕ್ಕೆ ಸಿಕ್ಕಿಕಂಡಿತ್. ಆ ಬಾಲಕಿನ ವಾಸಸ್ತಾನ ಯಾವುದಮ್ಮಾ ತಾ ಕೇಳ್ತ್. ಆಗ ಆ ಗೂಡೆ ಸರಸ್ವತಿ ಬಂದ್ ಓ ನೀವು ಕೇಳ್ತಾ ಇರ್ದು ಅದೇ ಶಾಂತಿ ಅಕ್ಕನ ಕಂಡದೆ ಅವಳ ಮನೆ ಇದೇ ಲೈನ್‌ಲಿ ಕೊನೇಂದ ಎರಡನೆ ಮನೆ ತಾ ಹೇಳಿ ದೂರದಿಂದಲೇ ಕೈ ತೋರ್ಸಿತ್. ಈ ಶಾಸ್ತ್ರಿ ಅಲ್ಲಿಂದ ಇವುಕೆ ನಮಸ್ಕರಿಸಿ ಎದ್ ಹೊರಟತ್. ಶಾಸ್ತ್ರ ಕೇಳ್ರಮ್ಮಾ ಶಾಸ್ತ್ರ ತಾ ಹೇಳಿಕಂಡ್ ಆ ಕುಂಟಿ ಶಾಂತಿ ಗೂಡೆನ ಮನೆ ಕಡೆಗೆ ಹೊರಟತ್.

---

### ನಗೆ ಹನಿ

ಸ್ವಾತಂತ್ರ್ಯ ಹೋರಾಟಗಾರರ್ದ್ ಮನೆ ಹತ್ರ ಇದ್ದ ಸರಿತ ಅವರ್ನ ಕೇಳ್ತ್.

"ಸಾರ್, ವಾಕ್ ಸ್ವಾತಂತ್ರ್ಯದ ಬಗ್ಗೆ ನಿಮಿಗೆ ಏನ್ ಅನ್ಸಿದೆ"

"ಹೌದಮ್ಮ ಎಲ್ಲವ್ಕೂ ಮಾತಾಡುವ ಸ್ವಾತಂತ್ರ್ಯ ಬೇಕೇ ಬೇಕ್"

"ಹೌದಾ! ಹಂಗಾರೆ ನಾನ್ ನಿಮ್ಮ ಟೆಲಿಫೋನ್‌ಲಿ ನನ್ನ ಡೆಲ್ಲಿಲಿರುವ ಮಾಮನೊಟ್ಟಿಗೆ ಸೊಲ್ಪ ಮಾತಾಡ್ಲ"

---

### ನಿಂಗಾಗಿ

ಕಿಲಕಿಲತ ನೆಗಾಡಿ ನೀ ಹಾಲ್‌ಸಕ್ಕರೆ ಸುರಿಬ್ಯಾಡ
ಹಾಲ್ ಸಕ್ಕರೆ ಸೇರ್ಸಿರೆ ಏನಾತ್ ? ನನರಾಜ
ಎಲ್ಲಿಂದ ತಕಂಡ್ ಬರ್‌ಲಿ ಟೀ ಹೊಡಿನ?

ಕಲ್ಲ್‌ಲಿ ಕೆತ್ತಿದ ಬರಹನ ಅಳ್‌ಸಕ್
ಆದರೆ, ಈ ಪದನ ಅಳಿಸಿಕೆ ಆದೆಯಾ? ನನರಾಜ
ಮನಸೊಳ್‌ಗಿರುವ ಸಂಪದನಾ

ಆಕಾಶಲಿ ಚಂದಮಾಮ ಹೊಳ್‌ದದೆ
ಹಾಲ್‌ನಗೆ, ಬಾಳ್‌ಲಿ ಬಂದದೆ? ನನರಾಜ
ಕೈ ಎತ್ತ್‌ಕನ ಸಿಕ್ಕುಲೆ ಯಾಕೆ

ಬರಗಾಲಲಿ ಸುಡು ಬಿಸ್‌ಲ್‌ಲಿ
ಬಾರದ ಮಳೆಗೆ ಕಾದಂಗೆ?. ನನರಾಜ
ಬಾಗ್‌ಲ್‌ಲೆ ಏಂಗೆ ಕಾದೆ ನಾನ್

ಯಾಲದಾಳು ಈ ಚಂದ್ರಕಲಾ
ಮಡಿಕೇರಿ.

---

### ನಗೆ ಹನಿ

ಪೋಲಿಸ್ : ನೀನು ಅವನನ್ನು ಯಾಕೆ ಕೋಲೆ ಮಾಡಿದ್ದು.

ಆರೋಪಿ : ಇಲ್ಲಾ ಸಾರ್, ಮೊದಲು ಅವನೇ ನನ್ನನ್ನು ಕೊಲೆ ಮಾಡಿದ್ದು.

---

**ಇದ್ದಾಗ ಹೋರಾಟ, ಇಲ್ಲದಾಗ ತೂರಾಟ.**

# ಸಂಗಾತಿ ಪದ ಬಂಧ — ೧

ಮನೆ ಹೆಸರನ್ನು ಗುರ್ತಿಸಿ


— *ಸಿಂಚನ*

**ಎಡದಿಂದ ಬಲಕ್ಕೆ**

1. ಪಂಜರದಿಂದ ಹಕ್ಕಿ ಬಟ್ಟಾಕನ ಅದ್ (3)
2. ಅಜ್ಜ ದೀರ್ಘವಾದರು ಸಹ ಮನೆಯಡ್ಕ ಬಂದುಟ್ಟಲಾ (3)
4. ಬೊಬ್ಬೆ ಹೊಡ್ದ್ ಹೊಡ್ದ್ ಸುಸ್ತಾಗಿ ತಿರುಗಿ ಬುಟ್ಟುಟು (3)
8. ಪಳೆಯದಾದ ಗಾಯ ಮಾಗಿಟ್ಟು ಕಂಡದೆ (4)
9. ಜತ್ತ ಅಂತೇಳುವ ಅಣ್ಣನಲ್ಲಿಗೆ ಪೋಯನಾ (4)
10. ಕುಟ್ಟಿ ಕುಟ್ಟಿ ಸುಸ್ತಾಗಿ ಹೋದೊ (3)
12. ಮೂರು ಜನ ವನಕ್ಕೆ ಹೋದವೆ ಗಡ (3)
13. ಪೀಚೆ ತರಕಾರಿನ ಮನೆಗೆ ಖುಷಿಲಿ ತಂದವೆಯಲಾ (4)
14. ಕೆಳಗೆನೋ ಮೇಲೆನೂ ಒಟ್ರಾಸಿ ಒಂದು ಮನೆ ತಾನೆ (5)
16. ಉಳುಮೆ ಮಾಡ್ತ ವಾರನ ಸನ ಮಾಡಿಕಂಡ್ರೆ ಆದು, ಆದ್ರೆ ಸುಸ್ತಾಗಿ ತಿರುಗಿ ಹೋಗಿಬುಟ್ರೆ ಕಷ್ಟ (5)
17. ಕುದುಕನ 'ಪಜೆ' ಸಮೇತ ಹೊತ್ತ್‌ಕಂಡ್ ಹೋಗೆ ಬುಡ್ತ್ (4)

**ಮೇಲೆಂದ ಕೆಳಗೆ:**

1. ಪಂಜಿನ ಮೆರವಣಿಗೆಲಿ ಹಳ್ಳ ಸನ ಸೇರಿಕಂಡ್ತ್ (4)
3. ಜಪ್ಪೆ ತೇಳ್ದಕ್ಷಣ ಗೋವಕ್ಕೆ ಹಾರಿಯೇ ಹೋಗಿಬುಟ್ಟೊ (4)
5. ಹೊಟ್ಟೆ ತುಂಬೋಕ್ಕಿಂತ ಜಾಸ್ತಿ ಉಂಡತ್ ಆ ಬಟಿಯ (3)
6. ಚೀಪೆನ ಆ ಯಮ್ಮ ಹೊತ್ತ್‌ಕಂಡ್ ಬಾದು ನೋಡಿ (4)
10. ಕುಲಸ ಚೆಟ್ಟಿಗಳ ಲೆಕ್ಕದಲ್ಲಿ ನೋಡ್ರೆ ಹೆಂಗಾದು (5)
11. ಊರೊಳಗೆ ಒಳೋನತ್ತಾ ಕೇಳಿಕಂಡ್ ಬಂದವ್ಕೆ ಏನ್‌ತಾ ಹೇಳ್ದು (4)
12. ಮೂಲೆಲಿ ಇರ್ದು ಅವನ ಮನೆ ಹೌದೋ ಅಲ್ಲವೋ (4)
15. ತಲೆಗೆ ಆಜಿನ ಮರದ ಎಲೆ ಬಿದ್ರೆ ಅದೆಂತ ಪೆಟ್ಟಾದು (3)




— ಅಚ್ಚಲ್ಪಾಡಿ ಕವಿತ ಬೋಜಪ್ಪ, ಕಾಟಕೇರಿ.

**ಹೆಣ್ಣು ಸಂಸಾರದ ಕಣ್ಣು, ಆದರೆ ಗಂಡು ಸಂಸಾರದ ಬೆನ್ನೆಲುಬು.**



## ಎರಡನೇ ವರ್ಷದ ಹುಟ್ಟು ಹಬ್ಬದ ಶುಭಾಶಯ

ನಿನ್ನ ಬಾಳು ಚಿರಾಯುವಾಗಲೆಂದು ದ್ವಿತೀಯ ವರ್ಷದ ಹುಟ್ಟು ಹಬ್ಬಕ್ಕೆ ಶುಭಾಶಯವನ್ನು ಕೋರುವ

ಅಜ್ಜ ಮತ್ತು ಅಜ್ಜಿ :
ಕಲ್ಲು ಮುಟ್ಲು ರಾಮಪ್ಪ ಮತ್ತು ಅಮ್ಮವ್ವ, ಕಾಂತೂರುಗ್ರಾಮ

ಚಿಕ್ಕಪ್ಪ, ಆಂಟಿ ಮತ್ತು ತಮ್ಮ :
ಕಲ್ಲು ಮುಟ್ಲು ಸೋಮಯ್ಯ, ಜಮುನ ಮತ್ತು ನೇಶಿಕ್
ಕಾಂತೂರು ಗ್ರಾಮ.

ಅತ್ತೆ, ಮಾವ ಮತ್ತು ಮಕ್ಕಳು :
ಅಕ್ಕಾರಿ ಸುಬ್ಬಯ್ಯ, ಶೋಭ, ಯತೀನ್ ಮತ್ತು ಲವ್ಯ,
ಹಾಕತ್ತೂರು ಗ್ರಾಮ.

ಕುಂಜಿಲನ ರಮೇಶ, ನಳಿನಿ ಮತ್ತು ಶಿಕ್ಷಿತ್,
ಕುಂಬಳದಾಳು ಗ್ರಾಮ.


ಪ್ರೀತಿಯ ಕಣ್ಮಣಿ ಜಯಶ್ರೀ (ಲಚ್ಚಿ)
ಜನನ : 13-2-1999
(ಕಲ್ಲುಮುಟ್ಲು ಬಸಪ್ಪ ಮತ್ತು ರೂಪರವರ ಪುತ್ರಿ)

## ಸಿಟ್ಟ್ ಇರ್ಕಾಗದ್

"ಸಿಟ್ಟ್" ತೇಳ್ದು ಮನುಷ್ಯಂಗೂ ಉಟ್ಟು. ಪ್ರಾಣಿಗೂ ಉಟ್ಟು. ಪ್ರಾಣಿ ಸಿಟ್ಟ್ ಬಂದರೆ ಹುಚ್ಚಿ ಹುಚ್ಚಿ ತರ ಆಡ್ದೆ. ಪ್ರಾಣಿನ ಸಿಟ್ಟ್‌ನ ತಡಿಯಕ್ಕಾದುಲೆ. ಸಿಟ್ಟ್‌ನ ತಡಿವಂತ ಸೌಭಾಗ್ಯ ಮನುಷ್ಯಂಗೆ ಮಾತ್ರ ಇರ್ದು. ಮನುಷ್ಯನ ಸಿಟ್ಟುಲೂ ಅದರ್ನ ತಡ್ಕಂಡ್ ನಗ್‌ಮೊಗ ತೋರ್ಸಕ್. ಕಬ್ಬಿಣಕ್ಕೆ ಕಿಲೆಂಬು ಹಿಡ್ದಂಗೆ ಸಿಟ್ಟ್ ಮನುಷ್ಯನ ಹಾಳ್ ಮಾಡ್ದೆ. ನಮ್ಮ ನಮ್ಮ ಸಿಟ್ಟ್‌ನ ಹಿಡ್ದ್ ಹಾಕದಿದ್ದರೆ ನಾವು ನಾವೇ ಹಾಳಾದವೆ. ಸಿಟ್ಟ್‌ನ ಹದ್ದ್ ಬಸ್ತ್‌ಲಿ ಇಟ್ಟ್‌ಕಣಂವನೆ ನಿಜವಾದ ಮನುಷ್ಯ. ಕುದುರೆನ ಹಂಗೆ ಬುಟ್ಟರೆ ತಾರಾಮಾರಾ ಓಡ್ದೆ. ಲಗಾಂ ಹಾಕಿರೆ ಹದ್ದ್ ಬಸ್ತ್‌ಲೆ ಓಡ್‌ಸಕ್. ಹಂಗೆ ಸಿಟ್ಟ್‌ತ್ತೇಳ್ದನ ಅದರ ಪಾಡ್‌ಗೆ ಬುಟ್ಟರೆ ಆಗದಂತದ್ ಆದೆ. ಕಿಚ್ಚಿ (ಬೆಂಕಿ) ಒಲೆ ಒಳ್ಗೆ ಇರಕು. ಹೊರಗೆ ಬುಡ್‌ಕಾಗದ್. ಹಂಗೆ ಸಿಟ್ಟ್‌ನ ಮನ್ಸ್ ಒಳಗೆ ಇಟ್ಟ್‌ಕಂಡ್ ಹೊರಗೆ ಹೊತ್ತಿಕಾಗದ್. ಹಂಗೆನೆ ಸಿಟ್ಟ್‌ನ ಅವನ ಮನಸ್‌ನೊಳಗೆ ಮಾತ್ರ ಇಟ್ಟ್‌ಕಣಕು. ಹೊರಗೆ ಬುಡಿಕಾಗದ್. ಸಿಟ್ಟ್‌ನ ಅದರ ಪಾಡಿಗೆ ಬುಡದೆ ತನ್ನ ಹದ್ದ್‌ಬಸ್ತ್‌ಲೆಇಟ್ಟ್ ಕಣೆಕೆ ಪ್ರಯತ್ನಪಡಕು.

ಕೊಡವ ಭಾಷೆಲಿ : ಚೇಂದ್ರಿಮಾಡ ಮುತ್ತಪ್ಪ
ಅರೆಭಾಷೆಗೆ : ಪಟ್ಟಡ ಪ್ರಭಾಕರ

## ಚಿರಸ್ಮರಣೆ



ಕರಕರನ ಕೆ. ಕೆಂಚಪ್ಪ
ಜನನ : 8-5-1935 ಮರಣ : 20-2-1992


ನೀವು ನಮ್ಮನ್ನ ಅಗಲಿ ಸ್ವರ್ಗಸ್ಥರಾಗೊಳರಿ. ಆದರೆ ಇಂದಿಗೆ 10 ವರ್ಷ ಕಳ್ದರು ನಿಮ್ಮ ಸವಿನೆನಪು ಮಾತ್ರ ನಮ್ಮಲ್ಲಿ ಉಳ್ದುಟ್ಟು. ನಿಮ್ಮ ಆದರ್ಶ ಗುಣಗಳೆ ನಮಗೆ ದಾರಿದೀಪವಾಗಿಟ್ಟು. ಎಂದೆಂದಿಗೂ ನಿಮ್ಮ ಆತ್ಮಕ್ಕೆ ಪರಮಾತ್ಮನು ಶಾಂತಿ ಕೊಡಲಿತ್ತೇಳಿ ಕೈಮುಗಿದು ಬೇಡುವ

ನಿಮ್ಮ ಧರ್ಮಪತ್ನಿ : ಕರಕರನ ಪೂವಮ್ಮ
ಮತ್ತು ಮಕ್ಕಳು,
ಸೊಸೆಯಂದಿರು, ಅಳಿಯಂದಿರು,
ಪಿಳ್ಳಿಕ ಪವಿ, ಪ್ರಶಾಂತ್ ಹಾಗೂ ಲಿಖಿತ್, ಗಾಳಿಬೀಡು

Reg. No. KA/SK/MYS-88 Registered : 10-01-96 TCI Kar. 0959

# ತೃತೀಯ ವರ್ಷದ ಪುಣ್ಯಸ್ಮರಣೆ

ಜನನ : 27-7-1926



ಮರಣ : 10-2-1998

**ದಿ. ನಂಗಾರು ಸೋಮಪ್ಪ ರಾಮಯ್ಯ**

ನಿಮ್ಮ ಸವಿನೆನಪುಗಳು, ಪ್ರತಿಬಿಂಬಿಸುತ್ತಿರುವ ಹಿತನುಡಿಗಳು ಪ್ರತಿಧ್ವನಿಸುತ್ತಿರುವ ನಮ್ಮ ಬದುಕಿನಲ್ಲಿ ನಿಮ್ಮಗಲಿಕೆಯ ಕಟು ಸತ್ಯ ಅರಿವಾದಾಗ ಕಣ್ಣಂಚಿನಲ್ಲಿ ಮಿಂಚಿ ಮರೆಯಾಗುವ ಈ ಕಂಬನಿ ನಿಮ್ಮ ಅಗಲಿಕೆಯ ನೋವ ನಿವಾರಿಸುವುದೇ?

ನಿಮ್ಮ ಆತ್ಮಕ್ಕೆ ಆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುವ,

ಶ್ರೀಮತಿ ನಂಗಾರು ಮಾಚಮ್ಮ ರಾಮಯ್ಯ
ಶ್ರೀಮತಿ / ಶ್ರೀ ನಂಗಾರು ಸೋಮಪ್ಪ ಪೊನ್ನಪ್ಪ
ಶ್ರೀಮತಿ / ಶ್ರೀ ನಂಗಾರು ಸೋಮಪ್ಪ ಚಂಗಪ್ಪ
ಶ್ರೀಮತಿ ಮೂಲೆ ಮಜ್ಜು ಯಶೋಧ ಚಿಣ್ಣಪ್ಪ
ಶ್ರೀಮತಿ ಪಾಣತ್ತಲೆ ವಸಂತಿ ಪಳಂಗಪ್ಪ

ಶ್ರೀ ನಂಗಾರು ರಾಮಯ್ಯ ನಾಣಯ್ಯ ಮತ್ತು ಶ್ರೀಮತಿ ಗೀತಾ ನಾಣಯ್ಯ
ಶ್ರೀ ನಂಗಾರು ರಾಮಯ್ಯ ಮೋಹನ ಮತ್ತು ಶ್ರೀಮತಿ ಸುಲೋಚನ ಮೋಹನ
ಶ್ರೀ ನಂಗಾರು ರಾಮಯ್ಯ ನಿಂಗರಾಜು ಮತ್ತು ಶ್ರೀಮತಿ ಸುಮಿತ ನಿಂಗರಾಜು

ಮೊಮ್ಮಕ್ಕಳಾದ
ಆಶಿರ, ಆಶಿತ, ಅಶ್ವಿನ್, ದರ್ಶಿನಿ, ನವ್ಯ,
ಸ್ಫೂರ್ತಿ, ರಮ್ಯ, ಗೀತಾ, ದಿಲೀಪ್,
ಯಶ್‌ವಂತ್, ಲಕ್ಷ್ಮಿ, ರಜನಿ, ಗೀತಾ,
ಮೋದನ್ ಪ್ರಿಯಾ, ರಂದನ್ ಪ್ರಿಯಾ

ಆಡಳಿತ ವೃಂದ ಹಾಗೂ ಮುಖ್ಯೋಪಧ್ಯಾಯಿನಿ
ಲಿಟ್ಲ್ ಫ್ಲವರ್ ಇಂಗ್ಲೀಷ್ ಹೈಸ್ಕೂಲ್, 16ನೇ 'ಬಿ' ಮೇನ್,
ಹೆಚ್.ಎ.ಎಲ್., 2ನೇ ಸ್ಟೇಜ್, ಇಂದಿರಾನಗರ, ಬೆಂಗಳೂರು - 560 008

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.